# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಬುಧವಾರ, ನವೆಂಬರ್ 25, 2020

ಸಂಪುಟ : 47 ಸಂಚಿಕೆ : 205 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com




## ಬಿ.ಜೆ.ಪಿ.ಗೆ 'ಪ್ರಕೋಷ್ಠ' ಬಲ

### ರಾಜ್ಯ ಪ್ರಕೋಷ್ಠಗಳ ಸಂಚಾಲಕರು, ಸಹ ಸಂಚಾಲಕರ ಪ್ರಥಮ ಸಭೆ

ದಾವಣಗೆರೆ, ನ. 24- ಎಲ್ಲಾ ವರ್ಗದ ಜನತೆಯನ್ನೂ ಸೇರಿಸಿಕೊಂಡು 'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ಪರಿಕಲ್ಪನೆಯಡಿ ಪಕ್ಷವನ್ನೂ ಬೆಳೆಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರಕೋಷ್ಠಗಳನ್ನು ರಚಿಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ನಗರದ ಹೊರ ವಲಯದಲ್ಲಿರುವ ಅಪೂರ್ವ ರೆಸಾರ್ಟ್‌ನಲ್ಲಿ ಮಂಗಳವಾರ ರಾಜ್ಯ ಪ್ರಕೋಷ್ಠಗಳ ಸಂಚಾಲಕರು ಹಾಗೂ ಸಹ ಸಂಚಾಲಕರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೈದ್ಯರು, ಶಿಕ್ಷಕರು, ಉದ್ಯಮಶೀಲರು, ವ್ಯಾಪಾರಿಗಳು, ವಕೀಲರು ಹೀಗೆ 20 ಪ್ರಕೋಷ್ಠಗಳ ಘೋಷಣೆಯಾಗಿದೆ. ಈ ಸಂಖ್ಯೆ ಇನ್ನೂ ಹೆಚ್ಚಾಗಲಿದೆ. ಭಾರತೀಯ ಜನತಾ ಪಕ್ಷವು ಕೆಳ ಹಂತದವರೆಗೂ ತಲುಪಲು ಮನೆ-ಮನೆಗಳಲ್ಲಿ ಪಕ್ಷದ ವಿಚಾರಧಾರೆಗಳನ್ನು ಗಟ್ಟಿಯಾಗಿಸಲು ಪ್ರಕೋಷ್ಠಗಳ ರಚನೆ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ಆತ್ಮನಿರ್ಭರ್ ಭಾರತ್ ಪರಿಕಲ್ಪನೆಯಡಿ ಎಲ್ಲಾ ಕ್ಷೇತ್ರಗಳಲ್ಲೂ ಉದ್ಯಮ ಶೀಲತೆ ಬೆಳೆಸುವ ಮೂಲಕ

**'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ಪರಿಕಲ್ಪನೆಯಡಿ ಪಕ್ಷವನ್ನೂ ಬೆಳೆಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರಕೋಷ್ಠಗಳ ರಚನೆ**

**- ನಳಿನ್ ಕುಮಾರ್ ಕಟೀಲ್**
**ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ**

ಉದ್ಯೋಗ ಸೃಷ್ಟಿಸುವ ಕಾರ್ಯಗಳನ್ನು ಮಾಡಲು ಪ್ರಕೋಷ್ಠಗಳ ರಚನಾ ಸಭೆಗಳನ್ನು ಇದೇ ಪ್ರಥಮ ಬಾರಿಗೆ ದಾವಣಗೆರೆಯಲ್ಲಿ ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ಬಿಜೆಪಿ ಅಧಿಕಾರಕ್ಕಾಗಿ ಸೃಷ್ಟಿಯಾದ ಪಕ್ಷವಲ್ಲ. ಪರಿವರ್ತನೆಯ ಗುರಿ ರಾಷ್ಟ್ರಧರ್ಮ ವನ್ನು ಪಕ್ಷದ ಕಾರ್ಯಕರ್ತರು ಹೊಂದಿದ್ದಾರೆ. ರಾಜಕಾರಣಿಗೆ ರಾಜಕಾರಣ ಹಾಗೂ ಸಮಾಜ ಸೇವಾ ಮನೋಭಾವ ಎರಡೂ ಇರಬೇಕು. ಸಮಾಜದ ಸಂಕಷ್ಟಗಳಿಗೆ ಧ್ವನಿಯಾಗದವ ಉತ್ತಮ ರಾಜಕಾರಣಿಯಲ್ಲ. ಹಾಗಾಗಿ ಸಮಾಜ ಸೇವೆಯ ಮೂಲಕ (5ನೇ ಪುಟಕ್ಕೆ)

# ಲಸಿಕೆ ವಿತರಣೆಗೆ ಸಿದ್ಧರಾಗಿ : ಮೋದಿ

### ಸಮರ್ಪಕ ವಿತರಣಾ ವ್ಯವಸ್ಥೆ ಶೀಘ್ರವಾಗಿ ರೂಪಿಸಿಕೊಳ್ಳುವಂತೆ ರಾಜ್ಯಗಳಿಗೆ ಸೂಚನೆ

ಬೆಂಗಳೂರು, ನ. 24 – ಕೊರೊನಾ ಲಸಿಕೆ ಕೆಲವೇ ವಾರಗಳಲ್ಲಿ ಲಭ್ಯವಾಗಲಿದ್ದು, ಅದರ ಸಮರ್ಪಕ ವಿತರಣೆಗೆ ಸರ್ವ ರೀತಿಯಲ್ಲಿ ವ್ಯವಸ್ಥಿತವಾಗಿ ಸಿದ್ದತೆ ಮಾಡಿಕೊಳ್ಳಿ ಎಂದು ಪ್ರಧಾನಿ ನರೇಂದ್ರ ಮೋದಿ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದ್ದಾರೆ.

ಕೊರೊನಾ ಕುರಿತು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಸಂವಾದ ನಡೆಸಿದ ಪ್ರಧಾನಿ ಮೋದಿ, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ತಕ್ಷಣವೇ ಸಂಚಾಲನಾ ಸಮಿತಿ ರಚಿಸಿ. ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆ ರಚಿಸಬೇಕು. ಬ್ಲಾಕ್ ಮಟ್ಟದಲ್ಲಿ ವ್ಯವಸ್ಥೆ ಮಾಡಬೇಕು. ಆರೋಗ್ಯ ಕಾರ್ಯಕರ್ತರು ಮತ್ತು ಸ್ವಯಂ ಸೇವಕರಿಗೆ ತರಬೇತಿ ನೀಡಬೇಕು ಎಂದಿದ್ದಾರೆ.

ವಿಡಿಯೋ ಸಂವಾದದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೊರೊನಾ ಲಸಿಕೆ ಶೀಘ್ರದಲ್ಲೇ ಸಿದ್ಧವಾಗಲಿದೆ. ಲಸಿಕೆಯನ್ನು ತ್ವರಿತವಾಗಿ ಹಾಗೂ ಪರಿಣಾಮ ಕಾರಿಯಾಗಿ ವಿತರಿಸಲು ರಾಜ್ಯಗಳು

**30 ಕೋಟಿ ಜನರಿಗೆ ಲಸಿಕೆ ನೀಡಲು ಸಿದ್ದತೆ ಮಾಡಿಕೊಳ್ಳ ಲಾಗಿದೆ. ಒಂದು ಕೋಟಿ ಆರೋಗ್ಯ ಕಾರ್ಯಕರ್ತರು, ಎರಡು ಕೋಟಿ ಕೊರೊನಾ ವಾರಿಯರ್‌ಗಳು ಮತ್ತು 50 ವರ್ಷ ವಯಸ್ಸು ದಾಟಿದವರು ಹಾಗೂ ಗಂಭೀರ ಕಾಯಿಲೆ ಇರುವ 26 ಕೋಟಿ ಜನರಿಗೆ ಲಸಿಕೆ ನೀಡಲಾಗುವುದು.**

**- ನರೇಂದ್ರ ಮೋದಿ**

ಸಿದ್ಧವಾಗಿರಬೇಕೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ ಎಂದಿದ್ದಾರೆ.

ನಾಲ್ಕು ವಾರಗಳಲ್ಲೇ ಲಸಿಕೆ ಲಭ್ಯವಾಗುವ ಸೂಚನೆ ಇದೆ. ನಾವು ಲಸಿಕೆಗಾಗಿ ಸಿದ್ಧತೆ ನಡೆಸಿದ್ದೇವೆ, ರಾಜ್ಯಗಳೂ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕೆಂದು ಪ್ರಧಾನಿ ಹೇಳಿದ್ದಾರೆ ಎಂದು ಯಡಿಯೂರಪ್ಪ ತಿಳಿಸಿದ್ದಾರೆ. ಪ್ರಧಾನಿಯವರು ನೀಡಿದ ಸಲಹೆಗಳನ್ನು ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದ ಗೃಹ ಸಚಿವ (4ನೇ ಪುಟಕ್ಕೆ)

## ರಾಜ್ಯದಲ್ಲಿ 29,451 ಲಸಿಕಾ ಕೇಂದ್ರ

### ಲಸಿಕೆಗೆ ಹತ್ತು ಸಾವಿರ ಸಿಬ್ಬಂದಿ : ಸುಧಾಕರ್

ಬೆಂಗಳೂರು, ನ. 24 - ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಣೆಗೆ ಎಲ್ಲ ಬಗೆಯ ಸಿದ್ಧತೆ ಗಳನ್ನು ಮಾಡಿಕೊಂಡಿದ್ದು, 29,451 ಲಸಿಕೆ ವಿತರಣಾ ಕೇಂದ್ರ ಗಳನ್ನು ಗುರುತಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಮಾಹಿತಿ ನೀಡಿದ್ದಾರೆ.




ಕೇಂದ್ರ ಸರ್ಕಾರದ ಸೂಚನೆಯಂತೆ, ಕೋವಿಡ್ ಲಸಿಕೆ ವಿತರಣೆಗೆ ಸಿದ್ಧತೆ ಕೈಗೊಳ್ಳಲಾಗಿದೆ. ರಾಜ್ಯ ಕೋವಿಡ್ ಕಾರ್ಯಪಡೆ ಸಭೆ ಸೇರಿ ಈ ಕುರಿತು ಚರ್ಚೆ (4ನೇ ಪುಟಕ್ಕೆ)


## ಸ್ಥಿರ ದೂರವಾಣಿಗಳ ಮೊಬೈಲ್ ಕರೆಗೆ '0' ಸೇರ್ಪಡೆ

ನವದೆಹಲಿ, ನ. 24 – ಸ್ಥಿರ ದೂರವಾಣಿಗಳಿಂದ ಮೊಬೈಲ್‌ಗೆ ಕರೆ ಮಾಡುವವರು ಇನ್ನು ಮುಂದೆ ಸಂಖ್ಯೆಗಳ ಮುಂಚೆ '0' ಸೇರಿಸುವುದು ಕಡ್ಡಾಯವಾಗಲಿದೆ. ಕೇಂದ್ರ ಟೆಲಿಕಾಂ ಇಲಾಖೆಯ ಈ ಪ್ರಸ್ತಾಪ ಜನವರಿ 1ರಿಂದ ಜಾರಿಗೆ ಬರಲಿದೆ. ಸ್ಥಿರ ದೂರವಾಣಿಗಳಿಂದ ಮೊಬೈಲ್‌ಗಳಿಗೆ ಕರೆ ಮಾಡುವಾಗ ಮೊದಲು '0' ಒತ್ತಬೇಕು (5ನೇ ಪುಟಕ್ಕೆ)

## ಪರಮಶಿವಯ್ಯ, ಲಿಂಗಾಯತ ನಿಗಮದ ಅಧ್ಯಕ್ಷ

ಬೆಂಗಳೂರು, ನ. 24 – ನೂತನವಾಗಿ ರಚನೆಯಾಗಿರುವ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ಬಿ.ಎಸ್. ಪರಮಶಿವಯ್ಯ ಅವರನ್ನು ನೇಮಿಸ ಲಾಗಿದೆ. ಅವರು ಪ್ರಸಕ್ತ ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ನಿನ್ನೆಯಷ್ಟೇ ನಿಗಮಕ್ಕೆ ರಾಜ್ಯ ಸರ್ಕಾರ 500 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿತ್ತು.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಇದೇ ವೇಳೆ ನೇಮಕ ಮಾಡಲಾಗಿದೆ. ಅಲ್ಲದೇ, ಹಲವಾರು ನಿಗಮಗಳ ಅಧ್ಯಕ್ಷ ಸ್ಥಾನಗಳಿಗೂ ನೇಮಕಾತಿ ಆದೇಶ ಹೊರಡಿಸಲಾಗಿದೆ.



ಬಿಜೆಪಿಯ ರಾಮನಗರ ಜಿಲ್ಲಾಧ್ಯಕ್ಷ ಎಂ. ರುದ್ರೇಶ್ ಅವರನ್ನು ಕೆ.ಆರ್.ಐ.ಡಿ.ಎಲ್. ಅಧ್ಯಕ್ಷರಾಗಿ ನೇಮಿಸಲಾಗಿದೆ. ಪಕ್ಷದ ಯುವ ಮೋರ್ಚಾ ನಾಯಕ ತಮ್ಮೇಶ್ ಗೌಡ ಅವರನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆಯ ನಿರ್ದೇಶಕ ಮಂಡಳಿಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಶಾಸಕಿ ತಾರಾ ಅನುರಾಧ ಅವರನ್ನು ರಾಜ್ಯ ಅರಣ್ಯ ಅಭಿವೃದ್ಧಿ ನಿಗಮಕ್ಕೆ, ಐಹೊಳೆ ಶಾಸಕ ದುರ್ಯೋಧನ ಮಹಲಿಂಗಪ್ಪ ಅವರನ್ನು ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ, ಕೆ.ಎಸ್ ಕಿರಣ್ ಕುಮಾರ್ ಅವರನ್ನು ಜೈವಿಕ ಇಂಧನ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನಾಗಿ (4ನೇ ಪುಟಕ್ಕೆ)

## ಹಾವೇರಿಯಲ್ಲಿ ಫೆ. 26ಕ್ಕೆ ನುಡಿ ಜಾತ್ರೆ

ಬೆಂಗಳೂರು,ನ.24- 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಈಗಾಗಲೇ ನಿರ್ಧಾರ ಕೈಗೊಂಡಂತೆ ಹಾವೇರಿಯಲ್ಲಿ ಬರುವ ಫೆಬ್ರವರಿ 26 ರಿಂದ ಮೂರು ದಿನಗಳ ಕಾಲ ನಡೆಸಲು ಕನ್ನಡ ಸಾಹಿತ್ಯ ಪರಿಷತ್ ದಿನಾಂಕ ನಿಗದಿಪಡಿಸಿದೆ.

ಇಂದಿಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ ಸಭಾಂಗಣದಲ್ಲಿ (5ನೇ ಪುಟಕ್ಕೆ)

## ಸರ್ಕಾರಿ ಶಾಲೆಗಳನ್ನು ದತ್ತು ಪಡೆದ ಸಿಎಂ

ಬೆಂಗಳೂರು, ನ. 24 - ರಾಜ್ಯದ 1440 ಸರ್ಕಾರಿ ಶಾಲೆಗಳನ್ನು ದತ್ತು ಸ್ವೀಕಾರ ಮಾಡಲಾಗಿದ್ದು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶಿಕಾರಿಪುರ ಕ್ಷೇತ್ರದ 10 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಶಾಲೆಗಳ ದತ್ತು



ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ದತ್ತು ಸ್ವೀಕಾರ ಪತ್ರ ಸ್ವೀಕರಿಸುವ ಮೂಲಕ ಶಾಲೆಗಳನ್ನು ದತ್ತು ಪಡೆದರು.

**ರಾಜ್ಯದ 1,440 ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ**

ಇದೇ ವೇಳೆ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಮುಧೋಳ ಕ್ಷೇತ್ರದ 5 ಶಾಲೆಗಳನ್ನು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್‌ಕುಮಾರ್ ರಾ ಜಾ ಜಿ ನ ಗ ರ (4ನೇ ಪುಟಕ್ಕೆ)

## ಸಾರ್ವಜನಿಕರ ಜಮೀನು ವಶ ಅನಿರ್ದಿಷ್ಟ ಅವಧಿಗಲ್ಲ

ನವದೆಹಲಿ, ನ. 24 – ಯಾವುದೇ ಉದ್ದೇಶಕ್ಕೆ ಸಾರ್ವಜನಿಕರಿಂದ ಜಮೀನು ವಶಪಡಿಸಿಕೊಂಡ ನಂತರ ಸರ್ಕಾರ ಅನಿರ್ದಿಷ್ಟ ಅವಧಿಗೆ ಅದನ್ನು ತನ್ನ ಬಳಿ ಉಳಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಅನಿರ್ದಿಷ್ಟ ಅವಧಿಗೆ ಜಮೀನು ಉಳಿಸಿಕೊಳ್ಳಲು ಅವಕಾಶ ನೀಡಿದರೆ ಅದು ಅರಾಜಕತೆಗೆ ದಾರಿ ಮಾಡಿ ಕೊಡುವುದಕ್ಕಿಂತ ಕಡಿಮೆಯೇನೂ ಅಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಬೆಂಗಳೂರಿನ ಬೈಯ್ಯಪ್ಪನಹಳ್ಳಿಯಲ್ಲಿ 57 ವರ್ಷಗಳ ಹಿಂದೆ ನಾಲ್ಕು ಎಕರೆ ಜಮೀನು ವಶಪಡಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಈ ತೀರ್ಪು ನೀಡಿದೆ. ಜಮೀನನ್ನು ಬಿ.ಎಂ. ಕೃಷ್ಣಮೂರ್ತಿ ಎಂಬುವವರ ಕಾನೂನುಬದ್ಧ ವಾರಸುದಾರರಿಗೆ ಮೂರು ತಿಂಗಳಲ್ಲಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಆಸ್ತಿ ಹಕ್ಕು (4ನೇ ಪುಟಕ್ಕೆ)





## ಹೃದಯಪೂರ್ವಕ ಸುಸ್ವಾಗತ

ದಾವಣಗೆರೆ ನಗರದ ಜನತೆಗಾಗಿ ಮಹಾನಗರ ಪಾಲಿಕೆ ವತಿಯಿಂದ 'ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ'
ಎಂಬ ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಆಗಮಿಸುತ್ತಿರುವ ಮಾಜಿ ಸಚಿವರೂ, ಹಿರಿಯ ಶಾಸಕರೂ, ಮುತ್ಸದ್ದಿಗಳೂ,
ದೀನ-ದಲಿತರ ಬಂಧುಗಳೂ ಆದ ಡಾ. ಶಾಮನೂರು ಶಿವಶಂಕರಪ್ಪ ಅವರಿಗೂ, ಲೋಕಸಭಾ ಸದಸ್ಯರಾದ ಶ್ರೀ ಜಿ.ಎಂ. ಸಿದ್ದೇಶ್ವರ,
ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಭೈರತಿ ಬಸವರಾಜ್, ಶಾಸಕರಾದ ಶ್ರೀ ಎಸ್.ಎ. ರವೀಂದ್ರನಾಥ್,
ಮಹಾಪೌರರಾದ ಶ್ರೀ ಬಿ.ಜಿ. ಅಜಯ್ ಕುಮಾರ್ ಅವರುಗಳಿಗೂ ಹೃತ್ಪೂರ್ವಕ ಸ್ವಾಗತ... ಸುಸ್ವಾಗತ...

**ಜಿ.ಡಿ. ಪ್ರಕಾಶ್,** ಸದಸ್ಯರು, ಮಹಾನಗರ ಪಾಲಿಕೆ, ವಾರ್ಡ್ 1, ಗಾಂಧಿ ನಗರ - ದಾವಣಗೆರೆ.
1ನೇ ವಾರ್ಡಿನ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಸಮಸ್ತ ನಾಗರಿಕರು




|| ಶ್ರೀ ವೇಂಕಟೇಶ್ವರ ಪ್ರಸನ್ನ || ಶ್ರೀ ತುಳಜಾ ಭವಾನಿ ಪ್ರಸನ್ನ ||

## ಶುಭ ವಿವಾಹ ಮಹೋತ್ಸವ

ಶ್ರೀಮತಿ ಸುಲೋಚನಾ ಹಂಡೆ ಹಾಗೂ
ಡಾ|| ಮೋಹನ ರೇವಣಸಿದ್ದಪ್ಪ ಹಂಡೆ
ಸಾ|| ರಾಣೇಬೆನ್ನೂರು, ಇವರು ಮಾಡುವ ಸಪ್ರೇಮ ವಂದನೆಗಳು
ನಮ್ಮ ಜೇಷ್ಠ ಸುಪುತ್ರ
ಡಾ|| ಶರತ್ ಎಂ. ಹಂಡೆ
ಹಾಗೂ
ಡಾ|| ನಿಶ್ಚಲಾ.ಎಸ್.
(ಶ್ರೀಮತಿ ಚಿತ್ರಾ ಷಣ್ಮುಗಂ ಹಾಗೂ ಶ್ರೀ ಹೆಚ್.ಜಿ.ಶಿವಷಣ್ಮುಗಂ, ದಾವಣಗೆರೆ ಇವರ ದ್ವಿತಿಯ ಸುಪುತ್ರಿ)
ಇವರ ವಿವಾಹ ಮಹೋತ್ಸವ
ಆತ್ಮೀಯರೆಲ್ಲರಿಗೂ ಆದರದ ಆಮಂತ್ರಣ

ದಿನಾಂಕ : 26-11-2020 ಗುರುವಾರ,
ಸ್ಥಳ : ಲಲಿತ ಭವನ, ಪಿ.ಬಿ.ರಸ್ತೆ, ರಾಣೇಬೆನ್ನೂರು.
ಆರತಕ್ಷತೆ : ಇಂದು ದಿನಾಂಕ : 25-11-2020 ಬುಧುವಾರ ಸಂಜೆ 7 ಗಂಟೆಗೆ

ತಮ್ಮ ಆಗಮನದ ನಿರೀಕ್ಷೆಯಲ್ಲಿ...
ಶ್ರೀಮತಿ ಸುಲೋಚನಾ ಹಂಡೆ,
ಡಾ|| ಮೋಹನ ಹಂಡೆ

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ,
ಶ್ರೀಮತಿ ಮಂಜುಳ ಎನ್. ಪಾಟೀಲ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 21.11.2020ನೇ ಶನಿವಾರ
ಬೆಳಿಗ್ಗೆ 06.40ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ನಾಗೇಶ್ ಪಾಟೀಲ್
(ಎನ್.ಎನ್. ಪಾಟೀಲ್)
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 25.11.2020ನೇ ಬುಧವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ, ಎಂ.ಸಿ.ಸಿ. 'ಎ' ಬ್ಲಾಕ್ 10ನೇ ಮೇನ್, ಬಕ್ಕೇಶ್ವರ ಸ್ಕೂಲ್ ಹತ್ತಿರ ಇರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ ಶ್ರೀಮತಿ ಮಂಜುಳ ಎನ್. ಪಾಟೀಲ್
ಮಕ್ಕಳಾದ : ಶ್ರೀಮತಿ, ಶ್ರೀ ವಿನಾಯಕ ಎನ್. ಪಾಟೀಲ್
ಶ್ರೀಮತಿ, ಶ್ರೀ ಸಂತೋಷ್ ಎನ್. ಪಾಟೀಲ್, ಪಾಟೀಲ್ ವಂಶಸ್ಥರು ಹಾಗೂ ಬಂಧು-ಮಿತ್ರರು.
ಪಾಟೀಲ್ ಪೇಂಟ್ಸ್ & ಸರ್ವೀಸ್ ಸ್ಟೇಷನ್,
ನ್ಯೂ ಶ್ರೀ ಸಪ್ತಗಿರಿ ವ್ಹೀಲ್ ಅಲೈನ್‌ಮೆಂಟ್ & ಟೈರ್ಸ್ ಮತ್ತು ಸಿಬ್ಬಂದಿ ವರ್ಗ
ನಿಟುವಳ್ಳಿ ಮುಖ್ಯ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ. ಫೋ. : 94484 06740, 99723 43007
ವಿ.ಸೂ. ; ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 24.11.2020 ರಂದು ಮಂಗಳವಾರ ನಿಧನರಾದ ನಮ್ಮ ಸಂಸ್ಥೆಯ ನೌಕರ
ಲಿಂಗರಾಜು (ಲಿಂಗೇಶ್)
ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ, ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಈಶ್ವರ್ ರೇಡಿಯೋ ಮತ್ತು ಟಿ.ವಿ.
ಅಶೋಕ ರೋಡ್, ದಾವಣಗೆರೆ.

# ಕಳಪೆ ಗುಣಮಟ್ಟದ ಪಡಿತರ ವಿತರಣೆ : ಕ್ರಮಕ್ಕೆ ಆಗ್ರಹ

## ಹರಿಹರ ತಾ.ಪಂ. ಸಾಮಾನ್ಯ ಸಭೆಯಲ್ಲಿ ಕಿಡಿ ಕಾರಿದ ಉಪಾಧ್ಯಕ್ಷೆ ಜಯಮ್ಮ ಬಸವಲಿಂಗಪ್ಪ

ಹರಿಹರ, ನ.24- ತಾಲ್ಲೂಕಿನ ಪಡಿತರ ನ್ಯಾಯಬೆಲೆ ಅಂಗಡಿಯಲ್ಲಿ ಸಾರ್ವಜನಿಕರಿಗೆ ವಿತರಣೆ ಮಾಡುವ ಅಕ್ಕಿ, ಗೋಧಿ, ಬೇಳೆ, ರಾಗಿ ದನಕರುಗಳೂ ಸಹ ತಿನ್ನುವುದಕ್ಕೆ ಯೋಗ್ಯವಾಗಿರುವುದಿಲ್ಲ, ಅಂತಹ ದಾಸ್ತಾನು ಸಾರ್ವಜನಿಕರಿಗೆ ವಿತರಣೆ ಮಾಡುತ್ತಿದ್ದು, ಇವುಗಳನ್ನು ಮನುಷ್ಯರು ಹೇಗೆ ತಿನ್ನಬೇಕು? ಹಾಗಾಗಿ ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು ಎಂದು ತಾ.ಪಂ. ಉಪಾಧ್ಯಕ್ಷರಾದ ಜಯಮ್ಮ ಬಸವಲಿಂಗಪ್ಪ ಗೌಡ್ರು ಹೇಳಿದರು.

ನಗರದ ತಾಲ್ಲೂಕು ಪಂಚಾಯ್ತಿ ಕಚೇರಿಯ ಸಭಾಂಗಣದಲ್ಲಿ ತಾ.ಪಂ ಅಧ್ಯಕ್ಷರಾದ ಶ್ರೀದೇವಿ ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

ತಾಲ್ಲೂಕಿನ ಹಲವಾರು ನ್ಯಾಯಬೆಲೆ ಅಂಗಡಿ ಯಲ್ಲಿ ಕಳಪೆ ಗುಣಮಟ್ಟದ ದಾಸ್ತಾನು ವಿತರಣೆ ಮಾಡುತ್ತಿದ್ದು, ಅಧಿಕಾರಿಗಳು ಕಂಡೂ ಕಾಣದಂತೆ ವರ್ತಿಸುತ್ತಿದ್ದಾರೆ. ಇದು ಸರಿಯಾದ ಬೆಳವಣಿಗೆ ಯಲ್ಲ, ಈಗ ವಿತರಣೆ ಮಾಡುತ್ತಿರುವ ಪಡಿತರ ದಾಸ್ತಾನು ನೋಡಿದರೆ, ದನ-ಕರುಗಳು ತಿನ್ನುವುದಕ್ಕೆ ಯೋಗ್ಯವಾಗಿರುವುದಿಲ್ಲ. ಅಂತಹ ಕಳಪೆ ಗುಣಮಟ್ಟದ ದಾಸ್ತಾನು ವಿತರಣೆ ಮಾಡಲಾಗುತ್ತಿದೆ. ಅತಿಯಾಗಿ ಬಡವರು ಇವುಗಳನ್ನೇ ಬಳಸುವುದರಿಂದ ಇವುಗಳನ್ನು ತಿಂದು ಆರೋಗ್ಯದಲ್ಲಿ ವ್ಯತ್ಯಾಸವಾದರೆ ಅವರಿಗೆ ಆಸ್ಪತ್ರೆಗೆ ಹಣ ಖರ್ಚು ಮಾಡುವುದಕ್ಕೆ ಶಕ್ತಿಯೂ ಇರುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳೂ ಸಹ ಇದರ ಬಗ್ಗೆ ಗಮನವನ್ನು ಹರಿಸಿ, ಅವುಗಳನ್ನು ಬದಲಾವಣೆ ಮಾಡಬೇಕು ಎಂದು ಹೇಳಿದರು.

ತಾ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ ಮಾತನಾಡಿ, ತಾಲ್ಲೂಕಿನ ಹಲವಾರು ಶಾಲೆಗಳ ಜಮೀನುಗಳನ್ನು ಅಕ್ರಮವಾಗಿ ಉಳ್ಳವರು ಒತ್ತುವರಿ ಮಾಡಿಕೊಂಡಿದ್ದಾರೆ. ಅಂತಹ ವ್ಯಕ್ತಿಗಳ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಸಾಕಷ್ಟು ಬಾರಿ ತಂದರೂ ಸಹ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಹೇಳಿದರು.

ತಾ.ಪಂ ಸದಸ್ಯ ಸಿರಿಗೆರೆ ಕೊಟ್ರೇಶಪ್ಪ ಮಾತನಾಡಿ, ಕಳೆದ ಸಾಲಿನಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಮಳೆ ಬಂದು ರೈತರ ಬೆಳೆಗಳಿಗೆ ಹಾನಿಯಾದ ಪರಿಣಾಮವಾಗಿ ಸರ್ವೇ ಮಾಡಿ, ವರದಿಯನ್ನು ಕಳಿಸಿದ್ದರು. ಇದುವರೆಗೂ ಒಬ್ಬ ರೈತರಿಗೂ ಬೆಳೆ ವಿಮೆ ಪರಿಹಾರ ಮೊತ್ತವನ್ನು ನೀಡಿರುವುದಿಲ್ಲ. ಲೆಕ್ಕ ಪುಸ್ತಕದಲ್ಲಿ ಮಾತ್ರ ಸಾವಿರಾರು ರೈತರಿಗೆ ವಿತರಣೆ ಮಾಡಲಾಯಿತು ಎಂದು ನಮೂದಿಸಲಾಗಿದೆ. ಇದಕ್ಕೆ ಯಾರು ಹೊಣೆಗಾರರು? ಬೆಳೆ ಹಾನಿಯಾದ ಅನೇಕ ರೈತರು, ಕಚೇರಿಗೆ ಅಲೆದು ಅಲೆದು ಸಾಕಾಗಿ ಹೋಗಿದ್ದಾರೆ. ಆದ್ದರಿಂದ ಆದಷ್ಟು ಬೇಗನೇ ರೈತರಿಗೆ ಬೆಳೆ ವಿಮೆ ಪರಿಹಾರವನ್ನು ನೀಡುವಂತೆ ಮತ್ತು ಪಡಿತರ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ರಮವಾಗಿ ದಾಸ್ತಾನು ಮಾಡುವವರ ವಿರುದ್ಧ ಜಾಗೃತ ದಳವನ್ನು ಸರ್ಕಾರ ನಿಯೋಜಿಸಬೇಕು. ಇದರಿಂದಾಗಿ ಅನೇಕ ರೈತರಿಗೆ ಅನುಕೂಲ ಆಗುತ್ತದೆ ಎಂದು ಹೇಳಿದರು.

ಸರ್ಕಾರ ರೈತರಿಗೆ ಉಪಯುಕ್ತವಾದ ಗೊಬ್ಬರ ಮತ್ತು ಬೀಜಗಳನ್ನು ವಿತರಣೆ ಮಾಡಬೇಕು. ಅದನ್ನು ಬಿಟ್ಟು ಉಪಯುಕ್ತವಲ್ಲದ ಮತ್ತು ಯೋಗ್ಯವಲ್ಲದ ಬೀಜ ಮತ್ತು ಗೊಬ್ಬರವನ್ನು ವಿತರಣೆ ಮಾಡುವ ಮೂಲಕ ರೈತರು ಇನ್ನಷ್ಟು ಸಾಲದ ಸುಳಿಯಲ್ಲಿ ಸಿಲುಕುವ ರೀತಿ ಮಾಡುವುದಕ್ಕೆ ಹೊರಟಿದೆ. ಆದ್ದರಿಂದ ರೈತರಿಗೆ ಅವಶ್ಯವಾಗಿ ಬೇಕಾಗುವ ಮತ್ತು ಗುಣಮಟ್ಟದ ಗೊಬ್ಬರ ಹಾಗೂ ಬೀಜಗಳನ್ನು ವಿತರಣೆ ಮಾಡಬೇಕು ಎಂದು ಹೇಳಿದರು.

ತಾ.ಪಂ ಸದಸ್ಯ ಮಾಲತೇಶ್ ಗುಡದಳ್ಳಿ ಮಾತನಾಡಿ, ಕೊರೊನಾ ರೋಗ ಬಂದಾಗಿನಿಂದ ಅನೇಕ ಶಾಲೆಗಳ ಆವರಣ ಮತ್ತು ಅಂಗನವಾಡಿ ಕೇಂದ್ರಗಳು ಅಕ್ರಮ ಚಟುವಟಿಕೆಗಳ ಕೇಂದ್ರ ಗಳಾಗುವ ಹಂತಕ್ಕೆ ತಲುಪಿವೆ. ಅವುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ಇಲ್ಲದೇ, ಗಬ್ಬು ವಾಸನೆ ಹರಡುತ್ತಿದೆ ಮತ್ತು ರಾತ್ರಿ ವೇಳೆಯಲ್ಲಿ ಮೋಜು, ಮಸ್ತಿ ಕೇಂದ್ರಗಳಾಗಿವೆ. ಇದರಿಂದ ಗ್ರಾಮಗಳ ವಾತಾವರಣ ಕಲುಷಿತವಾಗುತ್ತದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು, ಜಾಗೃತಿ ವಹಿಸುವಂತೆ ಒತ್ತಾಯಿಸಿದರು.

ಶಿಕ್ಷಣ ಇಲಾಖೆಯ ವಿಶ್ವನಾಥ ಮಾತನಾಡಿ, ಸರ್ಕಾರ ತಾತ್ಕಾಲಿಕವಾಗಿ ವಿದ್ಯಾಗಮವನ್ನು ತಡೆಯಲಾಗಿದೆ. ವಿದ್ಯಾರ್ಥಿಗಳಿಗೆ ಸೈಕಲ್, ಶೂ ಬಿಟ್ಟು, ಉಳಿದ ಪಠ್ಯ ಪುಸ್ತಕ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಕೃಷಿ ಇಲಾಖೆಯ ಮಲ್ಲಿಕಾರ್ಜುನ್, ಆಹಾರ ಇಲಾಖೆಯ ನಸ್ರುಲ್ ಅವರುಗಳು ತಮ್ಮ ಇಲಾಖೆಗಳ ಕುರಿತಂತೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಇಒ ಗಂಗಾಧರನ್, ಸದಸ್ಯರಾದ ಬಸವಲಿಂಗಪ್ಪ, ಬಸವನಗೌಡ್ರು, ಲಕ್ಷ್ಮೀ ರಾಜನಹಳ್ಳಿ, ಸಿಬ್ಬಂದಿ ಲಿಂಗರಾಜ್ ಹಾಗೂ ಮತ್ತಿತರರು ಹಾಜರಿದ್ದರು.

## ಹೊನ್ನಾಳಿಯಲ್ಲಿ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಪ್ರಯತ್ನ



ಹೊನ್ನಾಳಿ, ನ.24- ರಾಜ್ಯ ಸರಕಾರದಿಂದ ನಡೆಯುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಈ ಬಾರಿ ಹೊನ್ನಾಳಿ ತಾಲ್ಲೂಕಿನಲ್ಲಿ ಆಚರಿಸಲು ಚಿಂತನೆ ನಡೆಸಿರುವುದಾಗಿ ಸಿಎಂ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಇಲ್ಲಿನ ಪಟ್ಟಣ ಪಂಚಾಯಿತಿ ಸದಸ್ಯ ಹೊಸಕೇರಿ ಸುರೇಶ್ ಅವರ ನಿವಾಸದಲ್ಲಿ ಮನೆ ಮನೆಗೆ ಕನ್ನಡ ಕೋಗಿಲೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮುಖ್ಯಮಂತ್ರಿ ಯಾಡಿಯೂರಪ್ಪನವರು ಶಿವಮೊಗ್ಗ ಜಿಲ್ಲೆಯಲ್ಲಿ ಈ ಚಲನ ಚಿತ್ರೋತ್ಸವ ನಡೆಸಲು ತಿರ್ಮಾನಿಸಿದ್ದು, ಕೊರೊನಾ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿ, ಮನೋರಂಜನೆ ದೊರೆಯದ ತಾಲ್ಲೂಕಿನ ಜನತೆಗೆ ಈ ಚಲನ ಚಿತ್ರೋತ್ಸಕ್ಕೆ ಅವಕಾಶ ದೊರೆತರೆ ಅನುಕೂಲವಾಗಲಿದೆ. ಇದಕ್ಕೆ ತಾಲ್ಲೂಕಿನ ಕಲಾವಿದರ ಸಹಕಾರ ಅತ್ಯವಶ್ಯಕ ಎಂದರು.

ಮುಖ್ಯಮಂತ್ರಿಗಳ ಬಂಗಾರದ ಪದಕ ಪಡೆದ ಹೊನ್ನಾಳಿ ಪೊಲೀಸ್ ವೃತ್ತಾಧಿಕಾರಿ ದೇವರಾಜ ಹಾಗೂ ಒಡವೆ, ನಗದು ಇರುವ ಪರ್ಸ್ ಅನ್ನು ಅದರ ಮಾಲೀಕರಿಗೆ ತಲುಪಿಸಿದ ಆಟೋ ಚಾಲಕ ಯೋಗೀಶ್ ಅವರುಗಳನ್ನು ಸನ್ಮಾನಿಸಲಾಯಿತು.

ಹೊಸಕೇರಿ ಸುರೇಶ ಮಾತನಾಡಿದರು. ಸಭೆಯಲ್ಲಿ ಪ್ರೇಮ್ ಕುಮಾರ್ ಬಂಡಿಗಡಿ, ಉಪನ್ಯಾಸಕ ನಾಗವಂದ ರವಿಕುಮಾರ್, ಶಿಕ್ಷಕರಾದ ಚಂದ್ರಶೇಖರ್, ಹಾಲಸ್ವಾಮಿ, ಪತ್ರಕರ್ತ ಮೃತ್ಯುಂಜಯ ಪಾಟೀಲ್, ಸರಳಿಮನೆ ಮಂಜು, ರಾಮಾಚಾರಿ ಇನ್ನಿತರರಿದ್ದರು. ಪುಟಾಣಿ ಕಲಾವಿದರು ಹಾಡಲು ಅವಕಾಶ ಕಲ್ಪಿಸಲಾಗಿತ್ತು.

# 20 ವರ್ಷಕ್ಕಿಂತ ಹೆಚ್ಚಿನ ವಯೋಮಾನದ ಅರ್ಧದಷ್ಟು ಜನರಿಗೆ ಸಕ್ಕರೆ ಕಾಯಿಲೆ ಅಪಾಯ

ನವದೆಹಲಿ, ನ 24 – ದೇಶದಲ್ಲಿರುವ 20 ವರ್ಷಕ್ಕಿಂತ ಹೆಚ್ಚಿನ ಪುರುಷರಲ್ಲಿ ಅರ್ಧದಷ್ಟು ಹಾಗೂ ಮೂರನೇ ಎರಡರಷ್ಟು ಮಹಿಳೆಯರು ಮುಂದಿನ ದಿನಗಳಲ್ಲಿ ಸಕ್ಕರೆ ಕಾಯಿಲೆಗೆ ಸಿಲುಕುವ ಸಾಧ್ಯತೆ ಇದೆ ಎಂದು ನೂತನ ಅಧ್ಯಯನವೊಂದು ತಿಳಿಸಿದೆ.


ಡಯಾಬೆಟೊಲೊಜಿಯಾ ನಿಯತಕಾಲಿಕದಲ್ಲಿ ಈ ಕುರಿತು ವರದಿ ಪ್ರಕಟಿಸಲಾಗಿದೆ. ವಯಸ್ಸು ಹಾಗೂ ದೇಹ ಗಾತ್ರದ ಅಧ್ಯಯನ ನಡೆಸುವ ಮೂಲಕ ಈ ವರದಿ ರೂಪಿಸಲಾಗಿದೆ.



ನವದೆಹಲಿಯ ಸೆಂಟರ್ ಫಾರ್ ಕ್ರೋನಿಕ್ ಡಿಸೀಸ್ ಕಂಟ್ರೋಲ್ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳ ವಿಜ್ಞಾನಿಗಳು ಈ ಅಧ್ಯಯನದಲ್ಲಿ ಭಾಗಿಯಾಗಿದ್ದಾರೆ. ಪ್ರಸಕ್ತ ದೇಶದಲ್ಲಿ 77 ದಶಲಕ್ಷ ವಯಸ್ಕರು ಸಕ್ಕರೆ ಕಾಯಿಲೆಗೆ ಸಿಲುಕಿದ್ದಾರೆ. 2045ರಲ್ಲಿ ಇವರ ಪ್ರಮಾಣ 134 ದಶಲಕ್ಷಕ್ಕೆ ತಲುಪಬಹುದು ಎಂದು ಎಚ್ಚರಿಕೆ ನೀಡಲಾಗಿದೆ.

ನಗರ ಪ್ರದೇಶಗಳಲ್ಲಿ ತ್ವರಿತವಾಗಿ ಸಕ್ಕರೆ ಕಾಯಿಲೆ ಹೆಚ್ಚಾಗುತ್ತಿದೆ. ಆಹಾರದ ಗುಣಮಟ್ಟದ ಕುಸಿತ, ದೈಹಿಕ ಚಟುವಟಿಕೆಗಳಲ್ಲಿ ಇಳಿಕೆಯಾಗಿರುವುದು ಸಕ್ಕರೆ ಕಾಯಿಲೆ ಹೆಚ್ಚಾಗಲು ಕಾರಣ ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ.

## ಪುಷ್ಕರ ಯೋಗದಲ್ಲಿ ವಚನಾನಂದ ಶ್ರೀ



ಹರಿಹರ, ನ. 24- ಹನ್ನೆರಡು ವರ್ಷಗಳಿಗೊಮ್ಮೆ ಬರುವ ಪುಷ್ಕರ ಯೋಗದಲ್ಲಿ ನಗರದ ಪಂಚಮಸಾಲಿ ಜಗದ್ಗುರು ವಚನಾನಂದ ಶ್ರೀಗಳು ಇಲ್ಲಿನ ತುಂಗ ಭದ್ರಾ ನದಿಯಲ್ಲಿ ಮಿಂದು, ಅರ್ಚನ, ತರ್ಪಣ, ಅರ್ಪ ಣದೊಂದಿಗೆ ಯೋಗ, ಪ್ರಾಣಾಯಾಮ ಧ್ಯಾನಗೈದರು.

## ವೀರಶೈವ ಮಹಾಸಭಾ ನಗರ ಘಟಕದ ಖಜಾಂಚಿಯಾಗಿ ದರ್ಶನ್ ಶಾಮನೂರು



ದಾವಣಗೆರೆ,ನ.24- ಅಖಿಲ ಭಾರತ ವೀರಶೈವ ಮಹಾಸಭಾದ ನಗರ ಘಟಕದ ಖಜಾಂಚಿಯನ್ನಾಗಿ ಕೆ.ಬಿ. ದರ್ಶನ್ ಶಾಮನೂರು ಅವರನ್ನು ನೇಮಕ ಮಾಡಲಾಗಿದೆ ಎಂದು ಮಹಾಸಭಾದ ನಗರ ಘಟಕದ ಅಧ್ಯಕ್ಷ ಶಂಭು ಎಸ್. ಉರೇಕೊಂಡಿ ಅವರು ತಿಳಿಸಿದ್ದಾರೆ.

## ಕೊರೊನಾ : ಟೆಸ್ಟ್‌ನಲ್ಲಿ ಪಾಸಿಟಿವ್ ದರ ಶೇ.4ಕ್ಕೂ ಕಡಿಮೆ

ನವದೆಹಲಿ, ನ. 24 - ದೇಶದಲ್ಲಿ ಇದುವರೆಗೂ 13.36 ಕೋಟಿ ಕೊರೊನಾ ಟೆಸ್ಟ್‌ಗಳನ್ನು ನಡೆಸಲಾಗಿದ್ದು, ಒಂದೇ ದಿನ 10,99,545ಗಳವರೆಗೆ ಟೆಸ್ಟ್‌ಗಳು ನಡೆದಿವೆ. ದೇಶದಲ್ಲಿ ಕೊರೊನಾ ಪಾಸಿಟಿವ್ ಬರುವ ದರ ಕಡಿಮೆಯಾಗುತ್ತಾ ಸಾಗಿದ್ದು, ಈಗ ಶೇ.4ಕ್ಕೂ ಕಡಿಮೆ ಹಂತಕ್ಕೆ ಬಂದಿದೆ.

ಆರು ದಿನಗಳ ನಂತರ ಮಂಗಳವಾರದಂದು 40 ಸಾವಿರಕ್ಕೂ ಕಡಿಮೆ ಕೊರೊನಾ ಪ್ರಕರಣಗಳು ದಾಖಲಾಗಿವೆ. ನವೆಂಬರ್ 8ರ ನಂತರ ದೈನಂದಿನ ಕೊರೊನಾ ಪ್ರಕರಣಗಳ ಪತ್ತೆ 50 ಸಾವಿರಕ್ಕೂ ಕಡಿಮೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಪ್ರತಿದಿನ ಸರಾಸರಿ ಹತ್ತು ಲಕ್ಷದಷ್ಟು ಟೆಸ್ಟ್‌ಗಳನ್ನು ನಡೆಸಲಾಗುತ್ತಿದೆ. ನಿರಂತರವಾಗಿ ಕೊರೊನಾ ಪಾಸಿಟಿವ್ ಬರುವ ಪ್ರಮಾಣ ಕಡಿಮೆ ಇದೆ ಎಂದು ಸಚಿವಾಲಯ ಹೇಳಿದೆ.

ಇದುವರೆಗೂ ನಡೆಸಿರುವ ಟೆಸ್ಟ್‌ಗಳಲ್ಲಿ ಶೇ.6.87ರಷ್ಟು ಜನರಲ್ಲಿ ಕೊರೊನಾ ಸೋಂಕಿರುವುದು ಕಂಡು ಬಂದಿದೆ. ಕಳೆದ 24 ಗಂಟೆಗಳಲ್ಲಿ ಕೊರೊನಾ ಪಾಸಿಟಿವ್ ಪ್ರಮಾಣ ಕೇವಲ ಶೇ.3.45ರಷ್ಟಾಗಿದೆ.

ಕಳೆದ ಕೆಲ ವಾರಗಳಲ್ಲಿ ಕೊರೊನಾ ಸಕ್ರಿಯ ಸೋಂಕಿತರ ಸಂಖ್ಯೆ ಸಹ ಕಡಿಮೆಯಾಗುತ್ತಾ ಸಾಗಿದೆ. ಒಟ್ಟು ಸೋಂಕಿತರ ಶೇ.4.78ರಷ್ಟು ಮಾತ್ರ ಸಕ್ರಿಯರಿದ್ದಾರೆ ಎಂದು ಸಚಿವಾಲಯ ಹೇಳಿದೆ.

# ಕಾಂಗ್ರೆಸ್ ಶಾಸಕನೆಂಬ ಕಾರಣಕ್ಕೆ ಬಿಜೆಪಿ ಸರ್ಕಾರ ಕ್ಷೇತ್ರದ ಅಭಿವೃದ್ಧಿಗೆ ನಯಾ ಪೈಸೆ ನೀಡಿಲ್ಲ

ಕೊಟ್ಟೂರು, ನ.24- ಶಾಸಕರ ಅನುದಾನದಲ್ಲಿ 10 ಲಕ್ಷ ರೂ. ಬಿಡುಗಡೆ ಮಾಡಿ ಆರೇಳು ತಿಂಗಳಲ್ಲಿ ಅರ್ಧಕ್ಕೆ ನಿಂತಿರುವ ಸಮುದಾಯ ಭವನ ಪೂರ್ಣಗೊಳಿಸಿ, ನಾನೇ ಉದ್ಘಾಟನೆ ಮಾಡಿ, ನಿವೃತ್ತ ನೌಕರರ ಸಂಘದ ಅಧ್ಯಕ್ಷರಿಗೆ ಕೀಲಿ ಕೀ ಕೊಡುತ್ತೇನೆ ಎಂದು ಶಾಸಕ ಭೀಮನಾಯ್ಕ ಭರವಸೆ ನೀಡಿದರು.

ಪಟ್ಟಣದಲ್ಲಿ ಸೋಮವಾರ ನಿವೃತ್ತ ನೌಕರರ ಸಂಘದ ನವೀಕೃತ ಕಟ್ಟಡ ಉದ್ಘಾಟಿಸಿ, 75 ವರ್ಷ ಮೇಲ್ಪಟ್ಟ 31 ನಿವೃತ್ತ ಸರ್ಕಾರಿ ನೌಕರರಿಗೆ ಸನ್ಮಾನಿಸಿ, ಮಾತನಾಡಿದರು.

ಹಗರಿಬೊಮ್ಮನಹಳ್ಳಿ ಕ್ಷೇತ್ರದ 12 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಕಳೆದ ಸಮ್ಮಿಶ್ರ ಸರ್ಕಾರ 300 ಕೋಟಿ ರೂ. ಅನುದಾನ ಕಾಯ್ದಿರಿಸಿದೆ. ಆದರೆ, ನಾನು ಕಾಂಗ್ರೆಸ್ ಶಾಸಕನೆಂಬ ಒಂದೇ ಕಾರಣಕ್ಕೆ ಬಿಜೆಪಿ ಸರ್ಕಾರ ಆ ದಾಖಲೆಗಳನ್ನು ಮೂಲೆಗಿಟ್ಟಿದೆ ಎಂದು ಬಿಜೆಪಿ ಸರ್ಕಾರದ ಮಲತಾಯಿ ಧೋರಣೆಯನ್ನು ಖಂಡಿಸಿದರು.

ನಾನು ಜೆಡಿಎಸ್ ಶಾಸಕನಾಗಿದ್ದಾಗ, ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಎಂದೂ ನನ್ನನ್ನು ಬೇರೆ ಪಕ್ಷದ ಶಾಸಕನೆಂದು ನೋಡದೆ, ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಹಣ ನೀಡಿದ್ದರು. ಆದರೆ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿ 15 ತಿಂಗಳಾಗಿದ್ದು, ಕ್ಷೇತ್ರಕ್ಕೆ ನಯಾ ಪೈಸೆ ಬಿಡುಗಡೆ ಮಾಡಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.



## ಕೊಟ್ಟೂರು ಶಾಸಕ ಎಸ್. ಭೀಮಾನಾಯ್ಕ ಆರೋಪ

ಪಟ್ಟಣ ಪಂಚಾಯಿತಿ ನೂತನ ಅಧ್ಯಕ್ಷೆ ಭಾರತಿ ಸುಧಾಕರಗೌಡ, ನಿವೃತ್ತ ನೌಕರ ಶೇಖರಗೌಡ ಪಾಟೀಲ್ ರಚಿಸಿರುವ ಮನದ ಮಿಂಚು ಪುಸ್ತಕವನ್ನು ಬಿಡುಗಡೆ ಮಾಡಿದ್ದಲ್ಲದೆ, ನಿವೃತ್ತ ನೌಕರರ ನವೀಕೃತ ಕಟ್ಟಡದಲ್ಲಿನ ಗ್ರಂಥಾಲಯವನ್ನು ಉದ್ಘಾಟಿಸಿದರು.

ಇದಕ್ಕೂ ಪೂರ್ವದಲ್ಲಿ ನಿವೃತ್ತರ ಸಂಘದ ಕುರಿತು ಮಹಾಬಲೇಶ್ವರಪ್ಪ, ನಂಜುಂಡಪ್ಪ, ಮಂಜುನಾಥ, ಶಿವಾನಂದಸ್ವಾಮಿ, ಸಿದ್ದಯ್ಯ ಸ್ವಾಮಿ, ನೀಲಪ್ಪ, ಸೋಬಟಿ ಮತ್ತಿತರರು ಮಾತನಾಡಿದರು.

ಪಪಂ ಉಪಾಧ್ಯಕ್ಷ ಷಫಿಉಲ್ಲಾ, ಪಪಂ ಸದಸ್ಯರಾದ ತೋಟದ ರಾಮಣ್ಣ, ಜಗದೀಶ, ಅಕ್ಕಿ ತೋಟೇಶ್, ತಾ.ಪಂ. ಇಒ ವಿಶ್ವನಾಥ್, ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕ ವಿ. ರಾಮಕೃಷ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬೂದಿ ಶಿವಕುಮಾರ್, ಪ.ಪಂ. ಮಾಜಿ ಅಧ್ಯಕ್ಷ ಅನಿಲ್ ಹೊಸಮನಿ ಮತ್ತಿತರರು ವೇದಿಕೆಯಲ್ಲಿದ್ದರು.

ಕೊಟ್ಟೂರು ತಾಲ್ಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಶಿವಣ್ಣ ಮಾತನಾಡಿದರು. ನಿವೃತ್ತ ಸಿಡಿಪಿಒ ಮಂಜುನಾಥ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಭಾಕರ ನಿರೂಪಿಸಿದರು. ಎಂ. ಮಲ್ಲಿಕಾರ್ಜುನ ಸ್ವಾಗತಿಸಿದರು.

## ಪಂಚಾಯಿತಿ ಇಂಜಿನಿಯರ್ ಸೇರಿದಂತೆ ಐವರ ಮೇಲೆ ದಾಳಿ ಮಾಡಿದ ಮುಷ್ಯ



ಹೊನ್ನಾಳಿ

ಹೊನ್ನಾಳಿ, ನ.24- ಪಟ್ಟಣದಲ್ಲಿ ಮುಷ್ಯನ ಹಾವಳಿಯ ದೂರು ಹೆಚ್ಚಾದಂತೆ ಮಂಗಳವಾರ ಸಂಜೆ ವೀಕ್ಷಣೆಗೆಂದು ಸಿಬ್ಬಂದಿಯೊಂದಿಗೆ ಬಂದಿದ್ದ ಪಟ್ಟಣ ಪಂಚಾಯಿತಿ ಇಂಜಿನಿಯರ್ ದೇವರಾಜ್ ಅವರ ಮೇಲೆ ಮುಷ್ಯ ದಾಳಿ ಮಾಡಿ ಪರಚಿದ ಘಟನೆ ನಡೆದಿದೆ. ಮಧ್ಯಾಹ್ನ ದೊಡ್ಡಪೇಟೆಯ ನಾಲ್ಕೈದು ಜನರ ಮೇಲೆ ಇದೇ ರೀತಿ ದಾಳಿಮಾಡಿ ಗಾಯಗೊಳಿಸಿದ್ದು ಕಳೆದ ಹತ್ತು ದಿನಗಳಿಂದ ಇದರ ದಾಳಿ ನಿರಂತರವಾಗಿದ್ದು, ಸೋಮವಾರವೂ ಸಹ 5ಕ್ಕೂ ಹೆಚ್ಚು ಜನರಿಗೆ ಹಾನಿ ಮಾಡಿದೆ.

ಈವರೆಗೂ 30ಕ್ಕೂ ಹೆಚ್ಚು ಜನರಿಗೆ ಇದೇ ರೀತಿ ಗಾಯಗೊಳಿಸಿದ್ದು, ಪಟ್ಟಣದ ದೊಡ್ಡಪೇಟೆ, ಕಲ್ಕೇರಿ, ಗೌಡರ ಕೇರಿ ನಿವಾಸಿಗಳು ಸಂಚರಿಸುತ್ತಿರುವ ಬೈಕ್‌ಗಳ ಮೇಲೆ, ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಿದ್ದು, ಭಯದಿಂದ ಜೀವನ ನಡೆಸುವಂತೆ ಮುಷ್ಯವು ತನ್ನ ಹಾವಳಿ ಮುಂದುವರೆಸಿದೆ. ಪಾಟೀಲ್ ಮನೆ ಮುಂದಿನ ಬೈಕ್ ಮೇಲೆ ಕೂತಿರುವ ಮುಷ್ಯವು ಆಟೋ ಒಂದರಲ್ಲಿ ಚಾಲಕನನ್ನು ಹೆದರಿಸಿ ಕೂತಿರುವುದನ್ನು ಚಿತ್ರದಲ್ಲಿ ಕಾಣಬಹುದಾಗಿದೆ.

## ಉಜ್ಜಯಿನಿ ಪೀಠಕ್ಕೆ ಎಸ್ಸೆಸ್ ಭೇಟಿ



ದಾವಣಗೆರೆ, ನ.24- ಉಜ್ಜಿನಿ ಪೀಠಕ್ಕೆ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಇಂದು ಭೇಟಿ ನೀಡಿ, ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಹಾಗೂ ಜಗದ್ಗುರುಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಅನೇಕ ಶಿವಾಚಾರ್ಯರು ಸೇರಿದಂತೆ, ಕೆ.ಸಿ. ಕೊಂಡಯ್ಯ, ದಾವಣಗೆರೆಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಪೀಠದ ಕಾರ್ಯದರ್ಶಿ ಹಾಗೂ ಜಿ.ಪಂ. ಸದಸ್ಯ ಎಂ.ಎಂ.ಜೆ.ಹರ್ಷವರ್ಧನ್, ಸಾವಜ್ಜಿ ರಾಜೇಂದ್ರ ಪ್ರಸಾದ್, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ರಾಘವೇಂದ್ರ, ಡಿ.ರೇವಣಸಿದ್ದೇಶ್ವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಜಗಳೂರು ತಾಲ್ಲೂಕಿಗೆ ಇಂದು ಎಸಿಬಿ ಭೇಟಿ : ಅಹವಾಲು ಸ್ವೀಕಾರ

ದಾವಣಗೆರೆಯ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಜಗಳೂರು ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದುಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ದೂರವಾಣಿ 08192-236600, 9480806284 ನ್ನು ಸಂಪರ್ಕಿಸಬಹುದು ಎಂದು ಎಸಿಬಿ ಡಿವೈಎಸ್‌ಪಿ (ಪ್ರಭಾರ) ತಿಳಿಸಿದ್ದಾರೆ.

## ಮೊದಲನೇ ವರ್ಷದ ಪುಣ್ಯಸ್ಮರಣೆ



**ಬಂಡೇ ಬೊಮ್ಮೇನಹಳ್ಳಿ ಶ್ರೀಮತಿ ಚನ್ನಮ್ಮನವರು**
**ನಿಧನ: 25.11.2019**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು
ಸದಾ ನಿಮ್ಮ ಸ್ಮರಣೆಯಲ್ಲಿರುವ.........

ದುಃಖಿತಪ್ತ ಕುಟುಂಬ ವರ್ಗ:

ಮಕ್ಕಳಾದ : ♦ ಶ್ರೀಮತಿ ಮೀನಾಕ್ಷಿ ಶ್ರೀ ಬಿ.ಆರ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು. (ನಿವೃತ್ತ ವ್ಯವಸ್ಥಾಪಕರು, ಬಾಪೂಜಿ ಬ್ಯಾಂಕ್, ದಾವಣಗೆರೆ)
♦ ದಿವಂಗತ ಆರ್. ವಿಜಯಕುಮಾರ್, ಲತಾ ಮತ್ತು ಮಕ್ಕಳು.
♦ ಶ್ರೀಮತಿ ರತ್ನ ಶ್ರೀ ಆರ್. ರಾಜು ಮತ್ತು ಮಕ್ಕಳು, ರಿಯಲ್ ಎಸ್ಟೇಟ್ ಏಜೆಂಟ್.
♦ ಶ್ರೀಮತಿ ಶ್ವೇತಾ ಶ್ರೀ ಬಿ.ಆರ್. ರಮೇಶ್ ಮತ್ತು ಮಕ್ಕಳು, ಬಾಪೂಜಿ ಬ್ಯಾಂಕ್ ಲಿ.,
♦ ಶ್ರೀಮತಿ ವಿಶಾಲ ಶ್ರೀ ಎ. ಪಂಚಾಕ್ಷರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ದಾವಣಗೆರೆ ಷುಗರ್ ಕಂ., ಬೆಂಗಳೂರು.
♦ ಶ್ರೀಮತಿ ಗಿರಿಜ ಶ್ರೀ ಕೆ.ಎಸ್. ಸಿದ್ದಲಿಂಗಪ್ಪ ಮತ್ತು ಮಕ್ಕಳು, ಜೆ.ಜೆ.ಎಂ.ಎಂ.ಸಿ., ದಾವಣಗೆರೆ.
ಹಾಗೂ ಅಪಾರ ಬಂಧು-ಬಳಗದವರು.

## ಲಿಂಗರಾಜು (ಲಿಂಗೇಶ್) ನಿಧನ




ದಾವಣಗೆರೆ ಗಾಂಧಿನಗರ ವಾಸಿ, ತೀರ್ಥಪ್ಪ ನೊಣವಿನಕೆರೆ ಇವರ ಪುತ್ರ, ಈಶ್ವರ್ ರೇಡಿಯೋ & ಟಿ.ವಿ. ನೌಕರ ಲಿಂಗರಾಜು (ಲಿಂಗೇಶ್) (43) ಅವರು ದಿನಾಂಕ : 24.11.2020 ರಂದು ಮಂಗಳವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ತಂದೆ-ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 25.11.2020 ರಂದು ಬುಧವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

## ನಗರದಲ್ಲಿ ವಿದ್ಯುತ್ ವ್ಯತ್ಯಯ

ಶಾಮನೂರು ರಸ್ತೆ, 7ನೇ ಕ್ರಾಸ್ ಕುವೆಂಪು ನಗರ, ಬೂಸ್ನೂರ್ ಪ್ರಿಂಟರ್ ಸುತ್ತಮುತ್ತ, ಪವನ್ ಬಾರ್ ಅಂಡ್ ವುಡನ್ ಕಲ್ಚರ್ ಶಾಪ್ ಸುತ್ತಮುತ್ತ ಹಾಗೂ ಚನ್ನಬಸಪ್ಪನವರ ನಿವಾಸದ ಸುತ್ತ ಮುತ್ತ ಪ್ರದೇಶಗಳು, ಡಿ.ಸಿ.ಎಮ್. ಟೌನ್‌ಶಿಪ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಬೆಳ್ಳೂಡಿ ಗ್ರಾಮದ ಕೆ.ಜಿ. ಮುನಿಯಪ್ಪ ನಿಧನ



ಹರಿಹರ ತಾ.ಬೆಳ್ಳೂಡಿ ಗ್ರಾಮದ ಮಾಜಿ ಛೇರ್ಮನ್ ಹಾಗೂ ಶ್ರೀ ಪಟೇಲ್ ಗುರುಬಸಪ್ಪ ಪ್ರೌಢಶಾಲೆಯ ಅಧ್ಯಕ್ಷರೂ ಆದ

**ಶ್ರೀ ಕೆ.ಜಿ. ಮುನಿಯಪ್ಪ** (86)

ಅವರು ದಿನಾಂಕ 24.11.2020 ರ ಮಂಗಳವಾರ ಸಂಜೆ 6.30ಕ್ಕೆ ನಿಧನರಾದರು. ಪತ್ನಿ, ಐವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗನವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.11.2020 ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಬೆಳ್ಳೂಡಿ ಗ್ರಾಮದಲ್ಲಿ ನೆರವೇರಲಿದೆ.

ದುಃಖಿತಪ್ತರು


**ಕೊಂಡಜ್ಜಿ ವಂಶಸ್ಥರು, ಬೆಳ್ಳೂಡಿ ಹಾಗೂ ಬಂಧು - ಮಿತ್ರರು**

# ಹಲವು ಧರ್ಮಗಳನ್ನೊಳಗೊಂಡ ಸೌಹಾರ್ದಯುತ ಬದುಕೇ ಶ್ರೇಷ್ಠ

ಜಗಳೂರು, ನ.24 - ವಿವಿಧತೆಯಲ್ಲಿ ಏಕತೆ ಇರುವ ಹಾಗೂ ಹಲವು ಧರ್ಮ, ಭಾಷೆಗಳನ್ನೊಳಗೊಂಡ ಭಾರತ ದೇಶದಲ್ಲಿನ ಸೌಹರ್ದಯುತ ಬದುಕೇ ಶ್ರೇಷ್ಠ ಎಂದು ಜೆಎಂಎಫ್‌ಸಿ ಹಾಗೂ ಸಿವಿಲ್ ನ್ಯಾಯಾಧೀಶರಾದ ಜೆ.ತಿಮ್ಮಯ್ಯ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿನ ಸಾಮರ್ಥ್ಯ ಸೌಧದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಇಂದು ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಏಕತಾ ದಿನಾಚರಣೆ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಸಂವಿಧಾನದಡಿ ಪ್ರಜಾಪ್ರಭುತ್ವದ ಆಶಯದಂತೆ ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ವೈವಿಧ್ಯತೆಯಲ್ಲಿ ಏಕತೆಯನ್ನು ಹೇಗೆ ಏಕೆ ಕಾಣಬೇಕು ಎಂಬುದನ್ನು ಮನವರಿಕೆ ಮಾಡಿಕೊಟ್ಟು



ನಾವೆಲ್ಲಾ ಒಂದು ಎಂಬ ಭಾವನೆ ಸಾರುವ ಉದ್ದೇಶದಿಂದ ರಾಷ್ಟ್ರೀಯ ಏಕತಾ ಸಪ್ತಾಹವನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಗುಡಿಸಿಲಿನಿಂದ ಅರಮನೆಯವರೆಗೆ ವಾಸವಿರುವ ಪ್ರತಿಯೊಬ್ಬ ಮಹಿಳೆಗೂ ಸಮಾನ ಅವಕಾಶ ಹಾಗೂ ಸಂವಿಧಾನ ಬದ್ದ ಹಕ್ಕುಗಳನ್ನೊಳಗೊಂಡಿರುವ ಕಾನೂನು ಲಭ್ಯವಾಗಬೇಕು. ಸಮಾಜದಲ್ಲಿ ಗೌರವಯುತ ಜೀವನ ಸಾಗಿಸಬೇಕು. ಆಗ ಮಾತ್ರ ರಾಷ್ಟ್ರೀಯ ಏಕತೆಗೆ ಅರ್ಥ ಸಿಗುತ್ತದೆ ಎಂದರು.

ಭಾರತದ ಭಾಷೆ, ನೆಲ, ಜಲ, ಸಂಸ್ಕೃತಿಯ ಸೊಬಗು, ವೈವಿಧ್ಯಮಯ ಕಲೆಗಳಿಂದ ಕೂಡಿದ ಜನಸಮೂಹದ ಸಾಂಪ್ರದಾಯಿಕ ಜೀವನ ಶೈಲಿ ಅವಿಸ್ಮರಣೀಯ ಎಂದರು.

ತಹಶೀಲ್ದಾರ್ ಡಾ.ನಾಗವೇಣಿ ಮಾತನಾಡಿ, ಪ್ರತಿಭಾವಂತ ಮಹಿಳೆಗೆ ಸೂಕ್ತ ಸ್ಥಾನಮಾನ ದೊರೆಯುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಹೆಣ್ಣು ಅಬಲೆಯಲ್ಲ ಸಬಲೆ ಎನ್ನುವುದನ್ನು, ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆಗೈದು ಸಾಬೀತು ಪಡಿಸಬೇಕು ಎಂದರು.

**ಜಗಳೂರಿನ ನ್ಯಾಯಾಧೀಶರಾದ ನ್ಯಾ. ಜೆ. ತಿಮ್ಮಯ್ಯ**

ಸಿಡಿಪಿಓ ಲೋಕೇಶ್ ಮಾತನಾಡಿ,ರಾಜಕೀಯ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದರೂ ಮಹಿಳೆಗೆ ಸಮಾನ ಅಧಿಕಾರ ವಿಸ್ತರಣೆಯಾಗದೆ ಕುಟುಂಬಸ್ಥರ ನಿಯಂತ್ರಣದಲ್ಲಿರುವುದು ಕೊನೆಗಾಣಬೇಕು

ಸಮಾರಂಭದಲ್ಲಿ ತಾಪಂ ಇ.ಓ. ಮಲ್ಲಾನಾಯ್ಕ, ವಕೀಲರ ಸಂಘದ ಅಧ್ಯಕ್ಷ ಬಸವರಾಜ್ ಸಂಘದ ಪದಾಧಿಕಾರಿಗಳಾದ ವೈ.ಹನುಮಂತಪ್ಪ, ಕರಿಬಸಯ್ಯ ತಿಪ್ಪೇಸ್ವಾಮಿ, ರುದ್ರೇಶ್, ಆರ್ ಓಬಳೇಶ್, ಬಸವರಾಜ್, ಮೇಲ್ವಿಚಾರಕರಾದ ಶಶಿಕಲಾ, ಶಾಂತಮ್ಮ, ಗೌರಮ್ಮ ಮತ್ತಿತರರು ಉಪಸ್ಥಿತರಿದ್ದರು.



# ಹುಟ್ಟುಹಬ್ಬದ ಶುಭಾಶಯಗಳು




- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕೊನೆಯ ಭಾಗದ ರೈತರಿಗೆ ನೀರೊದಗಿಸಲು 2018-19 ಸಾಲಿನಲ್ಲಿ ತಮ್ಮ ಸ್ವಂತ ಹಣದಲ್ಲಿ ಕಾಲುವೆಗಳ ಹೂಳೆತ್ತಿಸಿ, ಕೊನೆಭಾಗಕ್ಕೆ ನೀರೊದಗಿಸಿದ ಭಗೀರಥ ನಮ್ಮ **ಎಸ್.ಎ.ಆರ್.**
- ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಒಂದುವರೆ ವರ್ಷಗಳಲ್ಲಿ ಸುಮಾರು 2000 ಲಕ್ಷ (20 ಕೋಟಿ) ರೂ.ಗಳ ಅನುದಾನ ತಂದು ಎಸ್ಸಿ-ಎಸ್ಟಿ ಮತ್ತು ಹಿಂದುಳಿದ ವರ್ಗಗಳ ಕಾಲೋನಿಗಳ ಮುಖ್ಯರಸ್ತೆ, ಒಳಚರಂಡಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿದ ಶರವೇಗದ ಸರದಾರ ನಮ್ಮ **ಎಸ್.ಎ.ಆರ್.**
- ಗ್ರಾಮೀಣ ಪ್ರದೇಶದ ಮತದಾರ ಬಂಧುಗಳಿಗೆ ಗ್ರಾಮೀಣ ಭಾಗದಲ್ಲಿ ಎಲ್ಲಾ ಸರ್ಕಾರಿ ಸವಲತ್ತುಗಳನ್ನು ಒದಗಿಸಲು ಇಡೀ ಕರ್ನಾಟಕದಲ್ಲೇ ಮೊದಲು ತಮ್ಮ ಕ್ಷೇತ್ರದ ಮಾಳಗೊಂಡನಹಳ್ಳಿ(ಮಾಗಾನಹಳ್ಳಿ)ಯಲ್ಲಿ ಇ-ಗ್ರಾಮ ಸೇವಾ ಕೇಂದ್ರವನ್ನು ತಂದು ಗ್ರಾಮೀಣ ಪ್ರದೇಶದ ಜನರಿಗೆ ಎಲ್ಲಾ ರೀತಿಯ ಸರ್ಕಾರಿ ಸವಲತ್ತುಗಳು ಸಿಗಲು ಅನುಕೂಲ ಕಲ್ಪಿಸಿದ ರೈತರ ಕಣ್ಮಣಿ **ಎಸ್.ಎ.ಆರ್.**
- ಗ್ರಾಮೀಣ ಪ್ರದೇಶದಲ್ಲಿ ಹಿರಿಯ - ಕಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಅಂಗನವಾಡಿ ಕಟ್ಟಡಗಳ ನಿರ್ಮಾಣ ಮತ್ತು ಯಾತ್ರಿ ನಿವಾಸಗಳು, ದೇವಸ್ಥಾನಗಳ ಅಭಿವೃದ್ಧಿ ಮತ್ತು ಗಂಗಾ ಕಲ್ಯಾಣ ಯೋಜನೆ ಅಡಿ ಎಸ್ಸಿ-ಎಸ್ಟಿ ಹಾಗೂ ಸಾಮಾನ್ಯ ರೈತ ಫಲಾನುಭವಿಗಳಿಗೆ, ನೂರಾರು ಬೋರ್ ಕೊರೆಸಿ ನೀರಿನ ಬವಣೆ ತಪ್ಪಿಸಿದ ಬಡವರ ಬಂಧು ನಮ್ಮ **ಎಸ್.ಎ.ಆರ್.**
- ಗ್ರಾಮೀಣ ಪ್ರದೇಶಗಳಲ್ಲಿ ತನ್ನ ಕೈಲಾದ ಮಟ್ಟಿಗೆ ಸ್ತ್ರೀ ಶಕ್ತಿ ಸಂಘಗಳಿಗೆ ನೇರ ಸಾಲ ಸೌಲಭ್ಯ ಒದಗಿಸಿದ ಭಾಗ್ಯಶಾಲಿ ನಮ್ಮ **ಎಸ್.ಎ.ಆರ್.**
- ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಆಶ್ರಯ ಮನೆಗಳನ್ನು ಒದಗಿಸಿದ ನಮ್ಮ **ಎಸ್.ಎ.ಆರ್.**

ದಾವಣಗೆರೆ ನಗರದಲ್ಲಿ ನಮ್ಮ ಪ್ರೀತಿಯ ಮಾಜಿ ಕೇಂದ್ರ ಸಚಿವರೂ ಮತ್ತು ಹಾಲಿ ಲೋಕಸಭಾ ಸದಸ್ಯರಾದ **ಶ್ರೀ ಜಿ.ಎಂ. ಸಿದ್ದೇಶ್ವರ** ಅವರ ಜೊತೆಗೂಡಿ ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರದ ವಾರ್ಡ್‌ಗಳನ್ನು ಅಭಿವೃದ್ಧಿ ಪಡಿಸುತ್ತಿರುವ ನಮ್ಮ ರೈತ ನಾಯಕ, ಜನಪ್ರಿಯ ಶಾಸಕರಾದ

## ಸನ್ಮಾನ್ಯ ಶ್ರೀ ರವೀಂದ್ರನಾಥ್


**ಅವರ 75ನೇ ವರ್ಷದ ಹುಟ್ಟುಹಬ್ಬವು**

ನಾಳೆ ದಿನಾಂಕ 26.11.2020ನೇ ಗುರುವಾರ. ಅವರಿಗೆ ದೇವರು ಆಯುರಾರೋಗ್ಯ ಭಾಗ್ಯವನ್ನು ಕೊಟ್ಟು ಇನ್ನೂ ನೂರಾರು ವರ್ಷಗಳ ಕಾಲ ಬದುಕಿ ಸಾರ್ವಜನಿಕ ಸೇವೆ ಸಲ್ಲಿಸಲೆಂದು ಪ್ರಾರ್ಥಿಸುವೆವು.



**ಶ್ರೀ ಓ.ಎಸ್. ದಯಾನಂದ**

ವ್ಯವಸ್ಥಾಪಕ ನಿರ್ದೇಶಕರು,
ರಾಯಚೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್
ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಾಗೂ ಬೆಂಗಳೂರು.
ಆಡಳಿತ ಮಂಡಳಿ ಸದಸ್ಯರು,
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ (ಯುಎಎಸ್-ಬಿ)



**ಧನಂಜಯ್ ಕಡ್ಲೇಬಾಳು**

ದಾವಣಗೆರೆ ಜಿಲ್ಲಾ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ
ಕಾರ್ಯನಿರ್ವಾಹಕ ನಿರ್ದೇಶಕರು,
ರಾಯಚೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್
ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಾಗೂ
ಅಮೃತ್ ಕ್ರಾಪ್ ಸೈನ್ಸ್, ಬೆಂಗಳೂರು.

**ವಿಶೇಷ ಸೂಚನೆ :** ಕೊರೊನಾ ಮಹಾಮಾರಿ ಇಡೀ ದೇಶದಲ್ಲಿ ಇರುವುದರಿಂದ ದಯವಿಟ್ಟು ಯಾರೂ ಶಾಸಕರ ಮನೆಗೆ ಹೋಗಿ ಶುಭ ಹಾರೈಸಲು ಅವಕಾಶವಿಲ್ಲ. ತಮ್ಮ ತಮ್ಮ ಗ್ರಾಮದಲ್ಲಿ ಶ್ರೀ ಆಂಜನೇಯನ ದೇವಸ್ಥಾನ ಹಾಗೂ ದೇವತೆಗಳ ದೇವಸ್ಥಾನಗಳಲ್ಲಿ ಅಭಿಮಾನಿಗಳು ಶಾಸಕರ ಹೆಸರಿನಲ್ಲಿ ಕುಂಕುಮಾರ್ಚನೆ ಅಥವಾ ಅಭಿಷೇಕ ನೆರವೇರಿಸಿ ಮುಂದಿನ ದಿನಗಳಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಲೆಂದು ದೇವರಲ್ಲಿ ಸಂಕಲ್ಪ ಮಾಡಿದರೆ ಸಾಕು, ಅದೇ ಶಾಸಕರಿಗೆ ನಿಮ್ಮ ಶುಭ ಹಾರೈಕೆ ಹಾಗೂ ದೇವರ ಆಶೀರ್ವಾದ.

**ಶುಭ ಕೋರುವವರು : ಜಿ.ಎಂ. ಸಿದ್ದೇಶ್ವರ ಮತ್ತು ಬಿ.ಸಿ. ಪಾಟೀಲ್ ಅಭಿಮಾನಿ ಬಳಗ ಹಾಗೂ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬೂತ್ ಮಟ್ಟದ ಕಾರ್ಯಕರ್ತರು**

# ಧರ್ಮಕ್ಕೆ ರಾಜಕಾರಣದ ಅವಶ್ಯಕತೆ ಇಲ್ಲ

ರಾಜಕೀಯದಲ್ಲಿ ಧರ್ಮ ಇರಬೇಕು. ಧರ್ಮದಲ್ಲಿ ರಾಜಕೀಯ ಇರಬಾರದು. ಇದು ಎಲ್ಲರಿಗೂ ತಿಳಿದಿದ್ದರೂ ಪದೇ ಪದೇ ಧರ್ಮದ ಹೆಸರಲ್ಲೇ ರಾಜಕೀಯ ಮಾಡುವ ರಾಜಕಾರಣಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹೊಂದಿರುವವರು ಪ್ರಜೆಗಳನ್ನೇ ವಿಂಗಡಿಸಿ, ರಾಜಕೀಯ ಮಾಡುವುದು ಎಷ್ಟು ಸರಿ? 12ನೇ ಶತಮಾನದಲ್ಲಿ ಇಂತಹ ಜಾತಿ ಮತ್ತು ಅಸಮಾನತೆಯಿಂದ ಬೇಸತ್ತು, ಸಮ ಸಮಾಜ ನಿರ್ಮಾಣಕ್ಕಾಗಿ ಹೋರಾಡಿದ ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣ ಸ್ಥಾಪಿಸಿದ ಲಿಂಗಾಯಿತ ಧರ್ಮಕ್ಕೆ ಪ್ರತ್ಯೇಕ ಪ್ರಾಧಿಕಾರ ಮಾಡುವುದು ನಿಜವಾಗಲೂ ಹಾಸ್ಯಾಸ್ಪದ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೇ ನಿಜವಾದ ಧರ್ಮ ಎಂದು ತಿಳಿದಿದ್ದ ಬಸವಣ್ಣ ಲಿಂಗಾಯತ ಧರ್ಮಕ್ಕೆ ಪ್ರತಿಪಾದಿಸಿದ್ದು ಅದನ್ನೇ. ಅಧಿಕಾರಕ್ಕೆ ಬಂದ ತಕ್ಷಣ ತಮ್ಮ ತಮ್ಮ ಸಮುದಾಯದ ಮಠ ಜಾತಿಗಳಿಗೆ ಆದ್ಯತೆ ಕೊಡುವ ರಾಜಕಾರಣಿಗಳು ಅದನ್ನು ಸಮಾಜ ಸೇವೆ ಎಂದು ಬಿಂಬಿಸುತ್ತಾರೆ. ಆದರೆ, ಸಮಾಜವೆಂಬುದು ಕೇವಲ ಒಂದು ಸಮುದಾಯ ಅಥವಾ ಒಂದೇ ಜಾತಿಯಿಂದ ಆಗಿದ್ದಲ್ಲ.

'ಧರ್ಮ ಎಂಬುದು ಸಿದ್ಧಾಂತಗಳಲ್ಲಿಲ್ಲ ಆಚರಣೆಯಲ್ಲಿದೆ. ಒಳ್ಳೆಯವರಾಗುವುದು ಮತ್ತು ಒಳ್ಳೆಯದನ್ನು ಮಾಡುವುದೇ ಧರ್ಮ' ಎಂದು ವಿವೇಕಾನಂದ ಹೇಳುತ್ತಾರೆ. ಆದರೆ, ರಾಜಕಾರಣಿಗಳು ಒಳ್ಳೆಯದನ್ನು ಮಾಡುವುದು ಇರಲಿ ಸಮಾಜವನ್ನು ಅದರಷ್ಟಕ್ಕೆ ಅದು ಇರಲು ಬಿಡುವುದಿಲ್ಲ. ಕೇವಲ ಧರ್ಮ ಮತ್ತು ದೇವರೇ ಇವರ ರಾಜಕಾರಣಕ್ಕೆ ವಸ್ತುಗಳಾದರೆ, ಈ ರಾಜಕೀಯ ಪಕ್ಷಗಳ ತತ್ವ-ಸಿದ್ಧಾಂತಗಳು ಎಲ್ಲಿ ಹೋದವು? ಜನರ ಭಾವನಾತ್ಮಕ ವಿಷಯಗಳಲ್ಲಿ ಗೊಂದಲ ಎಬ್ಬಿಸುವ ಇವರು, ಒಳ್ಳೆಯದನ್ನು ಮಾಡಲು ಧರ್ಮವನ್ನೇ ಬಳಸಿಕೊಳ್ಳಬೇಕೇ?

ಲಿಂಗಾಯತ ಮತ್ತು ವೀರಶೈವ ಎರಡೂ ಪಂಗಡಗಳಲ್ಲೇ ಅನೇಕ ಭಿನ್ನಾಭಿಪ್ರಾಯಗಳಿರುವಾಗ ಪ್ರಾಧಿಕಾರ ರಚನೆಯಿಂದ ಆಗುವ ಲಾಭವಾದರೂ ಏನು? ಯಾರು ಲಿಂಗಾಯಿತರು, ಯಾರು ವೀರಶೈವರು ಎಂಬುದೇ ಅನೇಕ ಜನರಿಗೆ ತಿಳಿದಿಲ್ಲ. ಸ್ವತಂತ್ರ ಧರ್ಮಕ್ಕಾಗಿ ಹೋರಾಡುವ ಇವರು, ಆ ಧರ್ಮಕ್ಕೆ ಒಬ್ಬನೇ ಆರಾಧ್ಯ ದೈವ ಇದೆಯೇ? ಉದಾರಣೆಗೆ ಮುಸ್ಲಿಮರೆಲ್ಲಾ ಅಲ್ಲಾನನ್ನು ನಂಬಿದರೆ, ಜೈನ ಸಮುದಾಯದವರು ಮಹಾವೀರನನ್ನು ನಂಬಿದ್ದಾರೆ. ಆದರೆ, ಸ್ವತಂತ್ರ ಧರ್ಮವಾಗಬೇಕೆಂದು ಹೋರಾಡುವ ಲಿಂಗಾಯತ ಧರ್ಮದವರು, ನೂರಾರು ದೇವರನ್ನು ಆರಾಧಿಸುತ್ತಾರೆ. ಮದುವೆಯಾದ ಹೆಣ್ಣು ಮಗಳು ಗಂಡನ ಮನೆಗೆ ಹೋದರೆ, ಅವರು ನಂಬಿರುವ ದೇವರು ಒಂದು, ತಾನು ತವರು ಮನೆಯಲ್ಲಿ ಪೂಜಿಸುತ್ತಿದ್ದ ದೇವರೇ ಬೇರೆ. ಇಂತಹ ಗೊಂದಲಗಳು ಇರುವಾಗ ಸ್ವತಂತ್ರ ಧರ್ಮದ ಹೋರಾಟಕ್ಕೆ ಅರ್ಥವಿದೆಯೇ?

ಧರ್ಮ ಎನ್ನುವುದು ರಾಜಕಾರಣಿಗಳಿಂದ ಹೇಳಿಸಿಕೊಳ್ಳುವ ವಿಷಯವಲ್ಲ. ಧರ್ಮ ಸಂಸ್ಕಾರದ ರೂಪದಲ್ಲಿ ಮನೆ ಮನೆಗಳಲ್ಲಿ ಹುಟ್ಟಬೇಕು. ಇದು ಹುಟ್ಟುವ ಪ್ರತಿಯೊಂದು ಮಗುವಿನಲ್ಲೂ ಜಾಗೃತವಾಗಿ ಬೆಳೆಯುತ್ತಾ ಸಮಾಜದಲ್ಲಿರುವ ಮೌಢ್ಯವನ್ನು ತೊಡೆದು ಹಾಕುವ ಜ್ಯೋತಿಯಾಗಬೇಕು. ಜ್ಯೋತಿಯ ಬೆಳಕು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಟ್ಟಬೇಕು. ಇಂತಹ ಧರ್ಮವನ್ನು ಕಟ್ಟಿದವರು ಬಸವಣ್ಣ. ಆದರೆ, ದುರಂತ ಎಂದರೆ ಇಂದಿನ ಎಷ್ಟೋ ಮಕ್ಕಳಿಗೆ ಬಸವಣ್ಣ ಯಾರೆಂದೇ ಗೊತ್ತಿಲ್ಲ. ತಂದೆ-ತಾಯಿಗಳು ನಮ್ಮ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಮನೆಯ ಒಳಗೆ ಅರಿವು ಮೂಡಿಸದೇ ಕೇವಲ ಹೊರಗೆ ಹೋರಾಟ ಮಾಡುವುದಕ್ಕೆ ಅರ್ಥವೇ ಇಲ್ಲ.

ಒಂದೊಂದು ಸಮುದಾಯದವರು ಆಡಳಿತದ ಚುಕ್ಕಾಣಿ ಹಿಡಿದಾಗ ಅವರವರ ಸಮುದಾಯಕ್ಕೆ ಒಲೈಕೆಯ ರಾಜಕಾರಣ ಮಾಡುವುದಾದರೆ ಇಂತಹ ರಾಜಕೀಯ ನಮಗೆ ಬೇಕಾ?

***ಭಕ್ತಿ ಇಲ್ಲದ ಬಡವ ನಾನಯ್ಯ***
***ಕಕ್ಕಯ್ಯನ ಮನೆಯಲು ಬೇಡಿದೆ***
***ಚೆನ್ನಯ್ಯನ ಮನೆಯಲು ಬೇಡಿದೆ***
***ದಾಸಯ್ಯನ ಮನೆಯಲು ಬೇಡಿದೆ***
***ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷವನ್ನಿಕ್ಕಿದೆಡೆ***
***ನನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವ !!***


ಇದು ಬಸವಣ್ಣ ಕಂಡ ಸಮಾಜದ ಕನಸು. ಎಲ್ಲಾ ಜಾತಿ, ಮತಗಳನ್ನು ಬೆಸೆದು ಬಾಳುವುದೇ ನಿಜವಾದ ಧರ್ಮ.

ಜಗದ ಜ್ಯೋತಿಯಾದ ಬಸವಣ್ಣನಿಗೆ ಬೇರೆ ಜ್ಯೋತಿಯ ಅವಶ್ಯಕತೆ ಇದೆಯೇ? ಅವರು ಮೂಡಿಸಿ ಹೋದ ಬೆಳಕಲ್ಲಿ ಇನ್ನೂ ಸಾವಿರ ಸಾವಿರ ವರ್ಷಗಳು ಈ ಸಮಾಜ ಸುಭಿಕ್ಷವಾಗಿ ಇರಬಲ್ಲದು. ರಾಜಕಾರಣಿಗಳು ಇನ್ನಾದರೂ ಧರ್ಮದಲ್ಲಿ ರಾಜಕೀಯ ಬೆರೆಸದೇ, ಬಸವಣ್ಣ ಕಂಡ ಆ ಕಲ್ಯಾಣವನ್ನು, ಸಮ ಸಮಾಜವನ್ನು, ಆದರ್ಶದ ಅನುಭವ ಮಂಟಪವನ್ನು ಅವರ ಆಡಳಿತಕ್ಕೆ ಆದರ್ಶವಾಗಿ ಇಟ್ಟು ಕೊಳ್ಳಬೇಕು.



- ಪದ್ಮರವಿ,
ಬೆಂಗಳೂರು.
Email: padmaravi929@gmail.com

# ನಾಯಕ ಸಮಾಜಕ್ಕೆ ಶೇ. 7.5 ಮೀಸಲಾತಿ ನೀಡದಿದ್ದರೆ ಹೋರಾಟ



ಹೊಸಪೇಟೆ ನ.24- ವಾಲ್ಮೀಕಿ ಜಾತ್ರಾ ಮಹೋತ್ಸವದೊಳಗೆ ವಾಲ್ಮೀಕಿ ನಾಯಕ ಸಮಾಜಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡ 7.5 ಮೀಸಲಾತಿಯನ್ನು ಸರ್ಕಾರ ನೀಡದಿದ್ದರೆ ಪುನಃ ಹೋರಾಟ ಆರಂಭಿಸಲಾಗುವುದು ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಶ್ರೀಗಳು ನಗರದಲ್ಲಿ ಜರುಗಿದ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಇತ್ತೀಚೆಗೆ ಮೀಸಲಾತಿ ಹೆಚ್ಚಿಸುವಂತೆ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗಿತ್ತು. ಅದಕ್ಕೆ ಮಣಿದ ಸರ್ಕಾರ ಸದ್ಯ ಚುನಾವಣೆ ನೀತಿ ಸಂಹಿತೆ ಇದೆ ಡಿಸೆಂಬರ್ ಒಳಗೆ ಬೇಡಿಕೆ ಈಡೇರಿಸಲಾಗುವುದು ಎಂದು ತಿಳಿಸಿತ್ತು. ಕೊನೆಯ ಪಕ್ಷ 2021ರ ಫೆಬ್ರವರಿಯಲ್ಲಿ ಜರುಗುವ ವಾಲ್ಮೀಕಿ ಜಾತ್ರಾ ಮಹೋತ್ಸವದೊಳಗೆ ಮೀಸಲಾತಿ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಹೊಸಪೇಟೆ, ಹರಪನಹಳ್ಳಿ ಸೇರಿದಂತೆ, ರಾಜ್ಯದ ನೂರಾರು ವಿಧಾನಸಭಾ ಕ್ಷೇತ್ರಗಳಲ್ಲಿ ವಾಲ್ಮೀಕಿ ನಾಯಕ ಸಮಾಜದವರು ನಿರ್ಣಾಯಕರಾಗಿದ್ದಾರೆ. ಆದರೆ ಆರ್ಥಿಕ, ಸಾಮಾಜಿಕವಾಗಿ ಪ್ರಬಲರಾದವರಿಗೆ ಪಕ್ಷಗಳು ಟಿಕೆಟ್ ನೀಡುತ್ತಿವೆ. ಅಸಂಘಟಿತ ವಾಲ್ಮೀಕಿ ನಾಯಕ ಸಮಾಜದಲ್ಲಿ ಈಗಷ್ಟೇ ಅರಿವು ಮೂಡುತ್ತಿದೆ. ಅಲ್ಲದೆ ಟಿಕೆಟ್ ಕೊಡುವಾಗ ರಾಜಕೀಯ ಪಕ್ಷಗಳು ಅನುಸರಿಸುವ ಮಾನದಂಡಗಳೇ ಬೇರೆ. ಅದರೂ ಸಮಾಜದ ಜಲ ಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಸೇರಿದಂತೆ ಅನೇಕ ನಾಯಕರು ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದು ಬರುತ್ತಿದ್ದಾರೆ ಎಂದರು.

ಫೆಬ್ರವರಿಯಲ್ಲಿ ಜರುಗುವ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ನಾಡಿನ ವಿವಿಧ ಭಾಗಗಳಿಂದ ಸಮಾಜದ ಅಸಂಖ್ಯ ಜನ ಪಾಲ್ಗೊಳಲಿದ್ದು ಶೈಕ್ಷಣಿಕ, ಸಾಮಾಜಿಕ, ರಾಜಕೀಯ ವಿಷಯಗಳ ಕುರಿತು ಸಮಾಜದವರಿಗೆ ಅರಿವು ಮೂಡಿಸಲಾಗುವುದು. ನಮ್ಮ ಸಾಂವಿಧಾನಿಕ ಹಕ್ಕುಗಳನ್ನು ಪಡೆಯಲು ಸರ್ಕಾರಕ್ಕೆ ಹಕ್ಕೊತ್ತಾಯ ಕೂಡ ಮಾಡಲಾಗುವುದು ಎಂದು ತಿಳಿಸಿದರು.

**ವಿಜಯನಗರ ಜಿಲ್ಲೆ ಘೋಷಣೆ ಸಂತಸದ ವಿಷಯ:** ಹಂಪಿ, ಕಿಷ್ಕಿಂಧೆ, ಹಾಗೂ ಪಂಪಾ ಸರೋವರಗಳ ಉಲ್ಲೇಖ ಮಹರ್ಷಿ ವಾಲ್ಮೀಕಿ ಅವರು ಬರೆದಿರುವ ರಾಮಾಯಣದಲ್ಲಿ ಬರುತ್ತದೆ. ಈ ಸ್ಥಳ ಚಾರಿತ್ರಿಕವಾಗಿ ಮಹತ್ವ ಪಡೆದಿದೆ. ವಿಜಯನಗರ ಜಿಲ್ಲೆಯಾಗುತ್ತಿರುವುದರಿಂದ ಈ ಭಾಗದ ಸಮಗ್ರ ಅಭಿವೃದ್ಧಿಗೆ ಪೂರಕವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ವಾಲ್ಮೀಕಿ ಸೇವಾ ಸಮಿತಿಗೆ ( ವಿ.ಎಸ್.ಎಸ್) ಪದಾಧಿಕಾರಿಗಳ ಆಯ್ಕೆ ಮಾಡಿ ಪೋಸ್ಟರ್ ಬಿಡುಗಡೆ ಮಾಡಿದರು. ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಜಂಬಯ್ಯ ನಾಯಕ, ಮುಖಂಡರಾದ ಕಟಗಿ ಜಂಬಯ್ಯ ನಾಯಕ, ಗುಜ್ಜಲ ಭರ್ಮಪ್ಪ ಇನ್ನಿತರರಿದ್ದರು.

# ಕೇಂದ್ರದಿಂದ ಇನ್ನೂ 43 ಆಪ್‌ಗಳ ನಿಷೇಧ



ನವದೆಹಲಿ, ನ. 24 – ಅಲಿಬಾಬಾ ವರ್ಕ್‌ಬೆಂಚ್, ಅಲಿಎಕ್ಸ್‌ಪ್ರೆಸ್, ಅಲಿಪೇ ಕ್ಯಾಶಿಯರ್, ಕ್ಯಾಮ್‌ಕಾರ್ಡ್ ಹಾಗೂ ವಿಡೇಟ್ ಸೇರಿದಂತೆ ಇನ್ನೂ 43 ಚೀನಾದ ಮೊಬೈಲ್ ಆಪ್‌ಗಳ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ಈ ಆಪ್‌ಗಳು ದೇಶದ ಸಾರ್ವಭೌಮತ್ವ, ಐಕ್ಯತೆ ಹಾಗೂ ರಕ್ಷಣೆಗೆ ಪಕ್ಷಪಾತಿಯಾಗಿವೆ ಎಂದು ತಿಳಿಸಲಾಗಿದೆ.

ಕೇಂದ್ರ ಎಲೆಕ್ಟ್ರಾನಿಕ್ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯು ಆದೇಶವೊಂದನ್ನು ಹೊರಡಿಸಿದ್ದು, ಈ ಆಪ್‌ಗಳನ್ನು ಭಾರತೀಯರು ಬಳಸದಂತೆ ನಿರ್ಬಂಧ ಹೇರಲಾಗಿದೆ. ಇಂಡಿಯನ್ ಸೈಬರ್ ಕ್ರೈಮ್ ಕೋ-ಆರ್ಡಿನೇಟರ್ ಸೆಂಟರ್ ಹಾಗೂ ಗೃಹ ಸಚಿವಾಲಯ ನೀಡಿದ ಮಾಹಿತಿಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗಿದೆ.

ಈ ಎಲ್ಲ ಆಪ್‌ಗಳು ಚೀನಾದ ಸಂಪರ್ಕ ಹೊಂದಿವೆ ಎಂದು ಮೂಲಗಳು ಹೇಳಿವೆ.

ಇದಕ್ಕೂ ಮುಂಚೆ ಕೇಂದ್ರ ಸರ್ಕಾರ ಜೂನ್ 29ರಂದು ಚೀನಾದ 59 ಆಪ್‌ಗಳ ಮೇಲೆ ನಿಷೇಧ ಹೇರಿತ್ತು. ನಂತರ ಸೆಪ್ಟೆಂಬರ್ 2ರಂದು ಇನ್ನೂ 118 ಆಪ್‌ಗಳನ್ನು ನಿಷೇಧಿಸಲಾಗಿತ್ತು.

# ಲಸಿಕೆ ವಿತರಣೆಗೆ ಸಿದ್ಧರಾಗಿ

**(1ನೇ ಪುಟದಿಂದ)** ಬಸವರಾಜ್ ಬೊಮ್ಮಾಯಿ, ಸಾರ್ವಜನಿಕರಿಗೆ ಅರಿವು ಮೂಡಿಸಲು ತಿಳಿಸಿದ್ದಾರೆ. ಒಬ್ಬ ವ್ಯಕ್ತಿಗೆ ಎರಡರಿಂದ ಮೂರು ಡೋಸ್ ನೀಡಬೇಕಾಗಬಹುದು. ಲಸಿಕೆ ನೀಡಿಕೆಯ ಮಾಹಿತಿಯನ್ನು ಡಿಜಿಟಲ್ ವೇದಿಕೆಯಲ್ಲಿ ಸಂಗ್ರಹಿಸಲಾಗುವುದು ಎಂದು ತಿಳಿಸಿದ್ದಾರೆ.

ಭಾರತದಲ್ಲಿ ಕೋವಿಡ್ ಲಸಿಕೆ ತಯಾರಿಸಲು ವಿವಿಧ ಕಂಪನಿಗಳು ಮುಂದೆ ಬಂದಿವೆ. ಐಸಿಎಂಆರ್ ಅನುಮತಿಯೊಂದಿಗೆ ಭಾರತ್ ಬಯೋ ಟೆಕ್ ಆಕ್ಸ್‌ಫರ್ಡ್ ಜೆನಿಟೆಕ್ ಸೇರಿದಂತೆ ವಿವಿಧ ಕಂಪನಿಗಳು ಮುಂದೆ ಬಂದಿವೆ. ಭಾರತದಲ್ಲಿ 3 ಹಂತದ ಲಸಿಕೆ ಪ್ರಗತಿಯಲ್ಲಿದೆ. ಮುಂಚೂಣಿ , ಪ್ರಾಥಮಿಕ ಹಾಗೂ ಪ್ರಯೋಗ ಹಂತದ ಲಸಿಕೆಯನ್ನು ಸಂಶೋಧನೆ ಮಾಡಲಾಗುತ್ತಿದೆ. ಹಂತ ಹಂತವಾಗಿ ಇದನ್ನು ಪ್ರಯೋಗ ಮಾಡಲಾಗುತ್ತಿದ್ದು, ಅಂತಿಮವಾಗಿ ಇದರಲ್ಲಿ ಯಾವುದು ಯಶಸ್ವಿಯಾಗುತ್ತದೆಯೋ ಅದನ್ನು ಪರಿಗಣನೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಲಸಿಕೆ ನೀಡಿದರೂ ಸಾಂಕ್ರಾಮಿಕ ರೋಗಕ್ಕೆ ಚಿಕಿತ್ಸೆಯನ್ನು ಎಂದಿನಂತೆಯೇ ನೀಡಬೇಕು. ಲಸಿಕೆ ಬಂದ ತಕ್ಷಣ ಚಿಕಿತ್ಸೆ ನೀಡುವ ಬಗ್ಗೆ ನಿರ್ಲಕ್ಷ್ಯ ತೋರಬೇಡಿ ಎಂದು ಪ್ರಧಾನಿಯವರು ಎಚ್ಚರಿಕೆ ನೀಡಿದ್ದಾರೆ.

ರಾಜ್ಯದಲ್ಲಿ ಕೊರೊನಾ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪ್ರಧಾನಿ ತೃಪ್ತಿ ವ್ಯಕ್ತಪಡಿಸಿದ್ದಾರೆ. ಕೊರೊನಾ ನಿಯಂತ್ರಣದಲ್ಲಿದೆ ಎಂದು ಯಾರೊಬ್ಬರು ಮೈಮರೆಯಬಾರದು ಎಂದು ಸೂಚನೆ ಕೊಟ್ಟಿದ್ದಾರೆ. ಅಗತ್ಯವಿರುವ ಕಡೆ ನಿಯಮಗಳನ್ನು ಪಾಲನೆ ಮಾಡಬೇಕು, ಕೊರೊನಾ ನಿಯಂತ್ರಣಕ್ಕೆ ಸಾರ್ವಜನಿಕರೂ ಸಹ ಕೈಜೋಡಿಸಬೇಕೆಂದು ಬೊಮ್ಮಾಯಿ ಹೇಳಿದರು.

ಆನ್‌ಲೈನ್ ಸಂವಾದದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ, ಆರೋಗ್ಯ ಸಚಿವ ಹರ್ಷ ವರ್ಧನ್ ಮತ್ತು ಉನ್ನತ ಅಧಿಕಾರಿಗಳು ಭಾಗಿಯಾಗಿದ್ದರು. ರಾಜ್ಯದಿಂದ ಯಡಿಯೂರಪ್ಪನವರ ಜೊತೆ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ್, ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು, ಆರೋಗ್ಯ ಸಚಿವ ಕೆ. ಸುಧಾಕರ್, ರಾಜ್ಯ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ್ ಭಾಸ್ಕರ್ ಮತ್ತಿತರರು ಸಂವಾದದಲ್ಲಿ ಉಪಸ್ಥಿತರಿದ್ದರು.

# ಶಾಲೆಗಳನ್ನು ದತ್ತು ಪಡೆದ ಸಿಎಂ

**(1ನೇ ಪುಟದಿಂದ)** ಕ್ಷೇತ್ರದ 5 ಶಾಲೆಗಳನ್ನು, ಸಚಿವ ಬಿ.ಶ್ರೀರಾಮುಲು, ಮೊಳಕಾಲ್ಮೂರು ಕ್ಷೇತ್ರದ ಐದು ಶಾಲೆಗಳನ್ನು, ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮದ್ದೂರು ತಾಲ್ಲೂಕಿನ 5 ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದಾರೆ.

ರಾಜ್ಯದ 30 ವಿವಿಧ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳು, ಕುಲಪತಿಗಳು ಸ್ವಾಯತ್ತ ಕಾಲೇಜುಗಳ ಆಡಳಿತ ಮಂಡಳಿ ಅಧ್ಯಕ್ಷರು, ಪ್ರಾಂಶುಪಾಲರು ಹಾಗೂ ಇತರೆ ದಾನಿಗಳು ದತ್ತು ಸ್ವೀಕಾರ ಪತ್ರವನ್ನು ಮುಖ್ಯಮಂತ್ರಿ ಹಾಗೂ ಸಚಿವರಿಂದ ಸ್ವೀಕರಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್.ದೊರೆ ಸ್ವಾಮಿ ಅವರು ದತ್ತು ಪಡೆದ ಸರ್ಕಾರಿ ಶಾಲೆಗಳಲ್ಲಿ ಸುರಕ್ಷಿತ ಕುಡಿಯುವ ನೀರು, ಶೌಚಾಲಯಗಳ ಬೇಡಿಕೆಗನುಗುಣವಾಗಿ ಅಧ್ಯಾಪಕರು, ಕೊಠಡಿಗಳು, ಪೀಠೋಪಕರಣಗಳು, ಗ್ರಂಥಾಲಯ, ಗಣಕ ಯಂತ್ರಗಳು, ಯೋಗ, ಕ್ರೀಡೆ, ಮೌಲ್ಯಾಧಾರಿತ ಶಿಕ್ಷಣ, ರಾಷ್ಟ್ರೀಯ ಶಿಕ್ಷಣ ನೀತಿ-2020ರ ಬಗ್ಗೆ ಜಾಗೃತಿ ಕಾರ್ಯಕ್ರಮ, ಭಾಷಾ ಸಬಲೀಕರಣ ಮುಂತಾದ ಅಂಶಗಳನ್ನು ಒಳಗೊಂಡು ಅಭಿವೃದ್ಧಿಪಡಿಸುವಂತೆ ಸಲಹೆ ಮಾಡಿದರು.

ಕನ್ನಡ ಶಾಲೆಗಳನ್ನು ಉಳಿಸಿ, ಬೆಳೆಸುವ ಉದ್ದೇಶದಿಂದ ಪ್ರತಿ ವಿವಿ ಕುಲಪತಿಗಳು ದತ್ತು ತೆಗೆದುಕೊಳ್ಳಲು ಮುಂದೆ ಬಂದಿದ್ದಾರೆ. ಇದು ಒಳ್ಳೆಯ ಸ್ಪಂದನೆ ಎಂದರು. ಸುಮಾರು 700ರಷ್ಟು ಇರುವ ಐಟಿ ಕಂಪೆನಿಯ ಸಿಎಸ್‌ಆರ್ ನಿಧಿಯನ್ನು ಇಂತಹ ಕಾರ್ಯಕ್ಕಾಗಿ ವಿನಿಯೋಗಿಸಬೇಕು. ಖಾಸಗಿ ಶಾಲೆಗಳಿಗಿಂತ ಉತ್ತಮ ರೀತಿಯಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು. ಜ್ಞಾನಪೀಠ ಪ್ರಶಸ್ತಿ ಪಡೆದ ಗಣ್ಯರು ಓದಿರುವ ಶಾಲೆಗಳು ಹಾಗೂ ಶತಮಾನ ಪೂರೈಸಿರುವ ಶಾಲೆಗಳಿಗೆ ಪ್ರತ್ಯೇಕ ಗಮನ ಕೊಡಬೇಕು ಎಂದು ಸಲಹೆ ಮಾಡಿದರು.

# ಲಿಂಗಾಯತ ನಿಗಮ ಅಧ್ಯಕ್ಷ

**(1ನೇ ಪುಟದಿಂದ)** ನೇಮಿಸಲಾಗಿದೆ.

ಬಾಬು ಪತ್ತಾರ್ ಅವರು ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಜಿ.ಕೆ. ಗಿರೀಶ್ ಉಪ್ಪಾರ್ ಅವರನ್ನು ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಹಾಗೂ ಎಸ್. ನರೇಶ್ ಕುಮಾರ್ ಅವರನ್ನು ಸವಿತಾ ಸಮಾಜದ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

# ಎಸ್. ಮಂಜುಳಾ ಅವರಿಗೆ ಪ್ರಶಸ್ತಿ



ದಾವಣಗೆರೆ, ನ.24- ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ ಮೈಸೂರು ರಾಜ್ಯ ಘಟಕ ನೀಡುವ 'ಗುರು ಭೂಷಣ' ರಾಜ್ಯ ಪ್ರಶಸ್ತಿಗೆ ಸ್ಥಳೀಯ ಯಲ್ಲಮ್ಮ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಎಸ್. ಮಂಜುಳಾ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಇದೇ ದಿನಾಂಕ 27 ರಂದು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್‌ನ ಅಧ್ಯಕ್ಷ ಪಿ. ಮಹೇಶ್ ತಿಳಿಸಿದ್ದಾರೆ.

# ಇಂಟರ್ ಪೋಲ್ ಲ್ಯಾಬ್ ಸಭೆ : ಡಾ. ಎಲ್. ರಾಕೇಶ್‌ಗೆ ಆಹ್ವಾನ

ದಾವಣಗೆರೆ,ನ.24- ಅಂತರ ರಾಷ್ಟ್ರೀಯ ಪೊಲೀಸ್ ಸಂಸ್ಥೆ (ಇಂಟರ್ ಪೋಲ್) ಅಡಾಪ್ಟಿವ್ ಪೊಲೀಸಿಂಗ್ ಲ್ಯಾಬ್ ಇದೇ ದಿನಾಂಕ 27ರವರೆಗೆ ಆಯೋಜಿಸಿರುವ ಸಭೆಯಲ್ಲಿ ಭಾಗವಹಿಸಲು ನಗರದ ಸೈಬರ್ ಸೆಕ್ಯುರಿಟಿ ಸ್ಪೆಷಲಿಸ್ಟ್ ಡಾ. ಎಲ್. ರಾಕೇಶ್ ಅವರನ್ನು ಆಹ್ವಾನಿಸಲಾಗಿದೆ. ಅಂತರ ರಾಷ್ಟ್ರೀಯ ಪೊಲೀಸ್ ಸಂಸ್ಥೆಯಿಂದ ರಾಕೇಶ್ ಅವರನ್ನು 3ನೇ ಬಾರಿಗೆ ಸಭೆಗೆ ಆಹ್ವಾನಿಸಲಾಗಿದೆ.

# ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ನನ್ನ ಅರಿವಿನ ಭಾಷೆಯಾಗಿ ಕನ್ನಡ' ವಿಷಯದ ಬಗ್ಗೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್ ಅವರು ಮಾತನಾಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ಕನ್ನಡ ಶಾಲೆ

ಕನ್ನಡ ಶಾಲೆಯ ಮಾಸ್ತರ್ ನಾನು
ಕನ್ನಡವನ್ನೇ ಓದಿಸುವೆನು
ಕನ್ನಡವನ್ನೇ ಬರೆಯಿಸುವೆನು
ಕನ್ನಡದಲ್ಲಿಯೇ ಮಾತನಾಡಿಸುವೆನು
ಕನ್ನಡ ಮಣ್ಣಲ್ಲಿ ಹುಟ್ಟಿದವನು
ಕನ್ನಡದ ನೆಲದಲ್ಲಿ ಮಣ್ಣಾಗುವೆನು

- ಕೆ.ಎಂ. ಚಂದ್ರಶೇಖರಯ್ಯ
ನಿವೃತ್ತ ಶಿಕ್ಷಕರು

## ದಿನದ ಚುಟುಕು

ಮನಸ್ಸಾಕ್ಷಿಯಲ್ಲಡಗಿದ ಸತ್ಯ
ಕಾಡಿಸುವುದದು ಪ್ರತಿನಿತ್ಯ
ಮುಸುಕಿನೊಳಗಿದ್ದರೆ ಮನಸದು
ನಗದೇ ಇರದೇ ಆತ್ಮಸಾಕ್ಷಿಯು?

- ಶ್ರೀಮತಿ ವೀಕೆಎಂ

# ಹರಪನಹಳ್ಳಿಯಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ




ಹರಪನಹಳ್ಳಿ, ನ.24 - ಸಾಂಕ್ರಾಮಿಕ ರೋಗ ಕೊರೊನಾ ಎಲ್ಲೆಡೆ ಹರಡುತ್ತಿರುವುದರಿಂದ ಮಕ್ಕಳ ಶಿಕ್ಷಣ ಕುಂಠಿತವಾಗದಂತೆ ಇಲಾಖೆಯಿಂದ ಮಕ್ಕಳಿಗೆ ಓದುವ ಹವ್ಯಾಸವನ್ನು ರೂಢಿಸುವುದಕ್ಕೆ ಅವರ ಓದಿಗೆ ಪುಸ್ತಕ ನೀಡಬೇಕಾಗಿದೆ ಎಂದು ಬಳ್ಳಾರಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಮತ್ತು ಉಪನಿರ್ದೇಶಕ (ಅಭಿವೃದ್ಧಿ) ಕೆ. ಹನುಮಕ್ಕ ಹೇಳಿದರು.

ತಾಲ್ಲೂಕಿನ ಗುಂಡಗತ್ತಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಹಾಗೂ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಕ್ಕಳಿಗೆ ಪುಸ್ತಕ ನೀಡುವ ಮುಖಾಂತರ ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲನೇ ವಾರದಲ್ಲಿ ಓದುವ ಬೆಳಕು ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇದೇ ದಿನಾಂಕ 14ರಿಂದ ಜ.14ರವರೆಗೆ 10 ವಾರಗಳ ಕಾಲ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದೊಂದಿಗೆ ಮಕ್ಕಳ ಹಕ್ಕುಗಳ ಗ್ರಾಮಸಭೆ ನಡೆಯಲಿದೆ. ಇದಕ್ಕೆ ಪೂರಕವಾಗಿ ಗ್ರಂಥಾಲಯ ಸದ್ಬಳಕೆ ಮಾಡಿಕೊಂಡು ಓದುವ ಬೆಳಕು ಕಾರ್ಯಕ್ರಮ ಹಮ್ಮಿಕೊಂಡು ಗ್ರಂಥಾಲಯಕ್ಕೆ ನೋಂದಣಿ ಮಾಡಿಕೊಳ್ಳಬೇಕು, ಪುಸ್ತಕ ವಿತರಣೆ ಮಾಡಿ ಓದಿದ್ದನ್ನು ದಾಖಲಿಸುವಂತಾಗಬೇಕು, ಸ್ಪರ್ಧೆ ಏರ್ಪಡಿಸಬೇಕು, ಸಂವಿಧಾನದ ಬಗ್ಗೆ ಪರಿಚಯ ನೀಡಬೇಕು ಎಂದರು.

ಎರಡನೇ ವಾರದಿಂದ ಮಕ್ಕಳ ಆರೋಗ್ಯ, ಪೌಷ್ಠಿಕತೆ, ರೋಗ, ರಕ್ಷಣೆ ಬಗ್ಗೆ ಜಾಗೃತಿ, ಮಕ್ಕಳ ಸಮಸ್ಯೆಗಳ ಬಗ್ಗೆ ಅರಿವಿನ ಪೋಸ್ಟರ್ ತಯಾರಿ ಚಟುವಟಿಕೆಯನ್ನು ನೀಡಬೇಕು, ಮಕ್ಕಳ ಗ್ರಾಮ ಸಭೆ ಮೂಲಕ ಅವರ ಸಮಸ್ಯೆಗಳನ್ನು ದೂರು ಪೆಟ್ಟಿಗೆಯಲ್ಲಿ ಹಾಕಿ, ಅವುಗಳ ಪರಿಹಾರಕ್ಕೆ ಕ್ರಮವಹಿಸುವ ಮುಖಾಂತರ ಮಕ್ಕಳ ಶೈಕ್ಷಣಿಕ ಪೂರಕ ಚಟುವಟಿಕೆಗೆ ಸಹಕಾರಿಯಾಗಲಿವೆ ಎಂದು ಹೇಳಿದರು.

**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ವಿದ್ಯಾರ್ಥಿಗಳ ಶೈಕ್ಷಣಿಕ ಪೂರಕ ಚಟುವಟಿಕೆ ಸಹಕಾರಿಯಾಗಲಿವೆ**
**- ಕೆ. ಹನುಮಕ್ಕ**

ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಜಯರಾಜ್ ಎಲ್. ಆರ್ ಮಾತನಾಡಿ, ಮಕ್ಕಳು ಶೈಕ್ಷಣಿಕ ವ್ಯವಸ್ಥೆಯಿಂದ ದೂರವಾಗುತ್ತಿರುವುದನ್ನು ಮನಗಂಡು ಸರ್ಕಾರ ವಿದ್ಯಾಗಮದಂತೆ 10 ವಾರಗಳ ಕಾಲ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಹಾಗೂ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ವಿವಿಧ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಿರಂತರವಾಗಿ ಮಕ್ಕಳ ಸಂಪರ್ಕದಲ್ಲಿದ್ದು, ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಬುನಾದಿಯನ್ನು ಗಟ್ಟಿಗೊಳಿಸಲು ಈ ಕಾರ್ಯಕ್ರಮ ಪೂರಕವಾಗಿದೆ ಎಂದರು.

ಬಳ್ಳಾರಿ ಡಯಟ್ ಉಪನ್ಯಾಸಕ ಅಂಬಣ್ಣ, ವಲಯ ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ, ಕಬೀರನಾಯ್ಕ. ಸಮೂಹ ಸಂಪನ್ಮೂಲ ವ್ಯಕ್ತಿ ಐ. ಕೊಟ್ರೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಎಚ್.ಎಂ. ಹುಲಿಬಂಡೆ, ವಲಯ ಶಿಕ್ಷಣ ಸಂಯೋಜಕ ಕಬೀರನಾಯ್ಕ, ಗ್ರಾಮ ಪಂಚಾಯಿತಿ ಪಿಡಿಓ ವೀರೇಶ್, ಮುಖ್ಯೋಪಾಧ್ಯಾಯ ಎಸ್. ಎಂ. ಚಿದಾನಂದಸ್ವಾಮಿ, ಎಚ್.ನಾಗರಾಜ್, ಬಿ.ಆರ್.ಪಿ. ಎಚ್.ಅಣ್ಣಪ್ಪ, ನಾಗರಾಜ್ ಶಿಕ್ಷಕರಾದ ಕೆ.ಸಿದ್ದಪ್ಪ. ಶಿವಶಂಕರ್, ಪ್ರಭಾಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

461, ಕುವೆಂಪು ರಸ್ತೆ, ದಾವಣಗೆರೆ-2. ಫೋ. : 257792

**** ವಾಹನದ ಬಹಿರಂಗ ಹರಾಜು ನೋಟೀಸ್ ****

ನಮ್ಮ ಸಹಕಾರ ಸಂಘದ ಗ್ರಾಹಕರಿಗೂ, ಸದಸ್ಯರಿಗೂ ಮತ್ತು ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೇ, ನಮ್ಮ ಸಹಕಾರಿಯ ವಾಹನಾಧಾರಿತ ಸಾಲ (ಹೈಪಾಥಿಕೇಷನ್ ನಿಯಮಾನುಸಾರ ವಾಹನ (ನಾಲ್ಕು ಚಕ್ರ)) ಸಾಲ ಪಡೆದು ವಾಹನ ಸಾಲ ಬಾಕಿಯಾಗಿ ಸಹಕಾರಿ ಬೈಲಾ & ನಿಯಮಾನುಸಾರ ವಾಹನವನ್ನು ಸೀಜ್ ಮಾಡಿ, ಸಹಕಾರಿಯು ಸದರಿ ವಾಹನವನ್ನು ವಶಕ್ಕೆ ಪಡೆದಿದ್ದು, ಅಂತಹ ವಾಹನವನ್ನು ಸಹಕಾರಿಯವರು **ದಿನಾಂಕ 08.12.2020ರ ಮಂಗಳವಾರ ಮಧ್ಯಾಹ್ನ 12.00 ಸಮಯಕ್ಕೆ** ಸಹಕಾರಿಯ (ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,) ಕಚೇರಿಯಲ್ಲಿ ಸಾರ್ವಜನಿಕ ಬಹಿರಂಗ ಹರಾಜು ಮಾಡಲಾಗುವುದು. ವಾಹನದ ಬಾಕಿ ಸಾಲ, ವಾಯಿದೆ ಇತರೆ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

| ಕ್ರಂ. ಸಂಖ್ಯೆ | ಸಾಲದ ಖಾತೆ ನಂ. | ಸಾಲಗಾರರ ಹೆಸರು ಮತ್ತು ವಿಳಾಸ | ಮಂಜೂರಾದ ಸಾಲದ ಮೊಬಲಗು | ಬರಬೇಕಾದ ಬಾಕಿ ಮೊತ್ತ | ವಾಹನದ ವಿವರ ಮತ್ತು ಮಾಡೆಲ್ |
|---|---|---|---|---|---|
| 01 | VL-30340 | **ಕೆ. ಮಂಜುನಾಥ ಭಟ್ಟ S/o. ಕೃಷ್ಣಭಟ್,** 5ನೇ ಮೇನ್, 1ನೇ ಕ್ರಾಸ್, ಕಿವುಡ ಮೂಕರ ಶಾಲೆ ಹತ್ತಿರ, DCM ಟೌನ್‌ಶಿಪ್, ದಾವಣಗೆರೆ. | ರೂ. 1400000 | ಅಸಲು- ರೂ. 1379785 + (ಬಡ್ಡಿ+ಸುಸ್ತಿ ಬಡ್ಡಿ) ರೂ. 757486 = ರೂ. 2137271 | VE Commercial Vehicle Ltd., Terra 16 E Tipper RHD Model - 2016 |

**ಸೂಚನೆ:** (1) ವಾಹನ ಹರಾಜಿನಲ್ಲಿ ಭಾಗವಹಿಸುವವರು ರೂ 5000-00 ಮುಂಗಡ ಹಣವನ್ನು ಸಹಕಾರಿಯಲ್ಲಿ ಜಮಾ ಮಾಡಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. (2) ವಾಹನವನ್ನು ವೀಕ್ಷಿಸಲು ಸೀಜ್ ಮಾಡಿ ಇಟ್ಟಿರುವ ಸ್ಥಳದಲ್ಲಿ ವೀಕ್ಷಿಸಬಹುದು. ಅತ್ಯಧಿಕ ಬಿಡ್ ಮಾಡಿದವರಿಗೆ ವಾಹನವನ್ನು ಬಿಟ್ಟು ಕೊಡಲಾಗುವುದು. (3) ಅತ್ಯಧಿಕ ಬಿಡ್ ಮಾಡಿದವರು ಹರಾಜು ಆದ ಕ್ಷಣದಲ್ಲಿ ಬಿಡ್ ಮಾಡಿದ ಶೇ. 50 ರಷ್ಟು ಹಣವನ್ನು ಸಹಕಾರಿಗೆ ಜಮಾ ಮಾಡಿ ಉಳಿದ ಹಣವನ್ನು 1 ವಾರದೊಳಗೆ ಪಾವತಿ ಮಾಡಿ ವಾಹನವನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದು, ಮೋಟಾರ್ ಕಾಯ್ದೆ ಅನ್ವಯ ವಾಹನವನ್ನು ತಮ್ಮ ವಶಕ್ಕೆ ಪಡೆಯ ಬಹುದಾಗಿದೆ. (4) ಹರಾಜು ಪ್ರಕ್ರಿಯೆಯನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಸಹಕಾರಿಯ ಅಧಿಕಾರಕ್ಕೆ ಹಾಗೂ ಮಾರಾಟಾಧಿಕಾರಿಗಳಿಗೆ ಸೀಮಿತವಾಗಿರುತ್ತದೆ. (5) ಇನ್ನುಳಿದ ಷರತ್ತು ಕಾಯಿದೆ ನಿಯಮಾನುಸಾರಗಳಂತೆ ಒಳಪಟ್ಟಿರುತ್ತದೆ. (6) ಸಾಲದ ಮೊತ್ತಕ್ಕಿಂತ ಕಡಿಮೆ ಬಿಡ್ ಆಗಿದ್ದಲ್ಲಿ ಉಳಿದ ಮೊತ್ತಕ್ಕೆ ಸಹಕಾರಿ ವತಿಯಿಂದ ಸಾಲಗಾರರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು. (7) ವಾಹನದ ವರ್ಗಾವಣೆಗೆ ತಗಲುವ ಹಾಗೂ ಇನ್ನು ಯಾವುದೇ ಶುಲ್ಕಗಳನ್ನು ಯಶಸ್ವೀ ಹರಾಜುಗಾರರೇ ಭರಿಸತಕ್ಕದ್ದು.

**ಜಿ.ಎಸ್. ಸುರೇಂದ್ರ,** ಆಡಳಿತಾಧಿಕಾರಿಗಳು    **ಪಿ.ಕೆ. ಸತೀಶ್,** ಕಾರ್ಯದರ್ಶಿ


# ರಾಜ್ಯದಲ್ಲಿ 29,451 ಲಸಿಕಾ ಕೇಂದ್ರ

**(1ನೇ ಪುಟದಿಂದ)** ನಡೆಸಿದ್ದು, ಲಸಿಕೆ ಸಂಗ್ರಹ ಹಾಗೂ ವಿತರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯಾದ್ಯಂತ 29,451 ಲಸಿಕಾ ವಿತರಣೆ ಕೇಂದ್ರಗಳನ್ನು ಗುರುತಿಸಿದ್ದು, ಲಸಿಕೆ ವಿತರಣೆ ಮಾಡಲು 10,008 ವ್ಯಾಕ್ಸಿನೇಟರ್ ಸಿಬ್ಬಂದಿಗಳನ್ನು ಗುರುತಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಸರ್ಕಾರಿ ಆರೋಗ್ಯ ಕೇಂದ್ರಗಳ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರ ಬಗೆಗಿನ ಮಾಹಿತಿಯನ್ನು ದಾಖಲಿಸಲಾಗಿದೆ. ಶೇ.80 ರಷ್ಟು ಖಾಸಗಿ ಆಸ್ಪತ್ರೆಗಳು ಮಾಹಿತಿ ಒದಗಿಸಿದ್ದು, ಇನ್ನೂ ಶೇ.20 ರಷ್ಟು ಆಸ್ಪತ್ರೆಗಳು ವಾರದೊಳಗೆ ಮಾಹಿತಿ ನೀಡಲಿವೆ ಎಂದು ಸಚಿವರು ಹೇಳಿದ್ದಾರೆ.

ರಾಜ್ಯದಲ್ಲಿ ಲಸಿಕೆ ಸಂಗ್ರಹ ಮತ್ತು ವಿತರಣೆಗೆ 2,855 ಕೋಲ್ಡ್ ಚೇನ್ ಕೇಂದ್ರ ಲಭ್ಯವಿದೆ. ಬೇಗನೆ ಲಸಿಕೆ ವಿತರಣೆ ಮಾಡಲು ಸಾಧ್ಯವಾಗುವಂತೆ. ಹೊಸದಾಗಿ ಬೆಂಗಳೂರು ನಗರ, ಶಿವಮೊಗ್ಗ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾದೇಶಿಕ ಲಸಿಕೆ ಸಂಗ್ರಹ ಕೇಂದ್ರಗಳನ್ನು ಆರಂಭಿಸಲು ಪ್ರಸ್ತಾಪಿಸಲಾಗಿದೆ. ಈ ಕೇಂದ್ರಗಳಿಗೆ ವಾಕ್ ಇನ್ ಕೂಲರ್, ವಾಕ್ ಇನ್ ಫ್ರೀಜರ್‌ಗಳನ್ನು ಕೂಡ ನೀಡುವ ಪ್ರಸ್ತಾಪವಿದೆ ಎಂದು ಸಚಿವರು ತಿಳಿಸಿದ್ದಾರೆ. ರಾಜ್ಯದಲ್ಲಿ 10 ವಾಕ್ ಇನ್ ಕೂಲರ್ ಮತ್ತು 4 ವಾಕ್ ಇನ್ ಫ್ರೀಜರ್ ಇವೆ. ಕೇಂದ್ರ ಆರೋಗ್ಯ ಸಚಿವಾಲಯವು 3 ವಾಕ್ ಇನ್ ಕೂಲರ್, 2 ವಾಕ್ ಇನ್ ಫ್ರೀಜರ್ ನೀಡಲಿದೆ. ಇದಕ್ಕಾಗಿ ಸಿವಿಲ್ ಕಾಮಗಾರಿ ಆರಂಭವಾಗಿದೆ. ಕೋಲ್ಡ್ ಸ್ಟೋರೇಜ್ ಮತ್ತು ಸಂಗ್ರಹಕ್ಕೆ ಸಂಬಂಧಿಸಿದಂತೆ ಡೋಸ್‌ಗಳು ಮತ್ತಿತರೆ ಮಾಹಿತಿ ಅಗತ್ಯವಿದೆ. ಈ ಮಾಹಿತಿಯನ್ನು ಶೀಘ್ರ ಒದಗಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಕೋರಲಾಗಿದೆ. ಲಸಿಕೆ ಕಾರ್ಯಕ್ರಮಕ್ಕೆ ಅಗತ್ಯವಿರುವ ಡ್ರೈ ಸ್ಟೋರೇಜ್ ಬಗ್ಗೆಯೂ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಸಚಿವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಈಗಾಗಲೇ ಡೀಪ್ ಫ್ರೀಜರ್ ಹಾಗೂ ರೆಫ್ರಿಜರೇಟರ್ ಗಳನ್ನು ಮಂಜೂರು ಮಾಡಿದೆ. ಹೆಚ್ಚುವರಿ ಅಗತ್ಯಗಳ ಕುರಿತು ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ. ಪಶು ಸಂಗೋಪನೆ ಇಲಾಖೆಯಲ್ಲಿ ಲಭ್ಯವಿರುವ ಕೋಲ್ಡ್ ಸ್ಟೋರೇಜ್ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಕಾರ್ಪೊರೇಟ್ ಖಾಸಗಿ ಆಸ್ಪತ್ರೆಗಳ ಕೋಲ್ಡ್ ಸ್ಟೋರೇಜ್ ಬಗ್ಗೆಯೂ ಮಾಹಿತಿ ಪಡೆಯಲಾಗಿದೆ ಎಂದು ಸಚಿವರು ವಿವರಿಸಿದ್ದಾರೆ.

# ಸಾರ್ವಜನಿಕರ ಜಮೀನು ವಶ ಅನಿರ್ದಿಷ್ಟ ಅವಧಿಗಲ್ಲ

**(1ನೇ ಪುಟದಿಂದ)** ಸಂವಿಧಾನದ ಅನ್ವಯ ಮೂಲಭೂತ ಹಕ್ಕಲ್ಲ. ಆದರೆ, ವಶಪಡಿಸಿಕೊಂಡ ನಾಗರಿಕರ ಜಮೀನಿನ ಮೇಲೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅನಿರ್ದಿಷ್ಟ ಅವಧಿಯ ಹಕ್ಕು ಹೊಂದಿರಲು ಅವಕಾಶವಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

# ಎತ್ತ ಸಾಗುತ್ತಿದೆ ಸಂಗೀತ

ಸಂಗೀತ ಒಂದು ವಿಶೇಷವಾದ ವಿದ್ಯೆ. ನಮ್ಮ ರಾಷ್ಟ್ರೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ವಿದ್ಯೆ. ಮಾನಸಿಕವಾಗಿ, ಬೌದ್ಧಿಕವಾಗಿ ಮನುಷ್ಯನನ್ನು ಅತ್ಯಂತ ಉನ್ನತ ಸ್ಥಿತಿಗೆ ಕೊಂಡೊಯ್ಯುವ ಪ್ರಾಚೀನ ಅರವತ್ನಾಲ್ಕು ಕಲೆಗಳಲ್ಲಿ ಒಂದಾಗಿದೆ. ಇಂತಹ ವಿಶೇಷ ವಿದ್ಯೆಯನ್ನು ಕೆಲವರು ತಮ್ಮ ಅಸಂಬದ್ಧ ಕಲಿಕೆಯಿಂದ ಪೂರ್ಣ ನಾಶ ಮಾಡುವತ್ತಾ ಕೊಂಡೊಯ್ಯುತ್ತಿರುವುದಲ್ಲದೇ, ಕೇವಲ ಹಣ ಗಳಿಕೆಗೆ ಸೀಮಿತ ಮಾಡಿಬಿಟ್ಟಿದ್ದಾರೆ.

ನಾವು ಇಲ್ಲಿ ಸರ್ಕಾರಕ್ಕೆ, ಕೇಳುವುದಿಷ್ಟೇ, ಉತ್ತಮ ಸಂಗೀತ ವಿದ್ಯೆಯನ್ನು ಕಲಿಯಲು ಉತ್ಕೃಷ್ಟವಾದ ಪಠ್ಯಕ್ರಮವನ್ನು ರೂಢಿ ಮಾಡಿದ್ದರು. ಅಭ್ಯಾಸ ಮಾಡಲು ಸೋಮಾರಿತನದಿಂದಲೂ, ಸರಿಯಾದ ಮಾರ್ಗದರ್ಶನವಿಲ್ಲದೇ, ತಪ್ಪು ಅಭ್ಯಾಸ ಮಾಡಿಬಿಟ್ಟಿರುವುದು, ಇವೆಲ್ಲದರ ಕಾರಣಗಳಿಂದ ಹಣ ಕೊಟ್ಟು ಉತ್ತೀರ್ಣರಾಗಬಹುದೆಂದು ತಿಳಿದಿರುತ್ತಾರೆ. ಅದಕ್ಕೆ ಪರೀಕ್ಷಕರ ಸಮ್ಮತಿಯೂ ಸಹ ಇರುತ್ತದೆ. ಇದು ಸಣ್ಣ ಸಣ್ಣ ನಗರಗಳಲ್ಲಿ ತುಂಬಾ ದೊಡ್ಡ ಸಮಸ್ಯೆ, ನಮಗೆ ವಿದ್ವತ್ ಪೂರ್ವ ಮತ್ತು ಅಂತಿಮ ಪರೀಕ್ಷೆಗಳನ್ನು ಕೇವಲ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಮಾತ್ರ ನಡೆಸಿ, ಇಲ್ಲವೇ ಸರಿಯಾದ ಪರೀಕ್ಷಕರನ್ನು ಕಳುಹಿಸಿ, ಮುಂದಿನ ವರ್ಷದಿಂದ ಕೇವಲ ಅವರ ವಿದ್ವತ್ ಪ್ರಮಾಣ ಪತ್ರವನ್ನು ಆಧರಿಸಿ, ಪರೀಕ್ಷಕರನ್ನು ನೇಮಕ ಮಾಡುವುದನ್ನು ಬಿಟ್ಟು, ಪರೀಕ್ಷಕರಾಗಿ ಕಾರ್ಯನಿರ್ವಹಿಸಲು ಅರ್ಹತಾ ಪರೀಕ್ಷೆಯನ್ನು ನಡೆಸಿ, ಅದರಲ್ಲಿ ಉತ್ತೀರ್ಣರಾದವರನ್ನು ಮಾತ್ರವೇ ನೇಮಕ ಮಾಡಬೇಕು ಎನ್ನುವುದು ನಮ್ಮ ಅಭಿಪ್ರಾಯ, ಇದರಿಂದ ಜ್ಯೂನಿಯರ್ ಉತ್ತೀರ್ಣರಾದ ತಕ್ಷಣ ಸಂಗೀತ ಶಿಕ್ಷಕರಾಗಿ ಸಂಗೀತದ ಕೊಲೆ ಮಾಡುವುದನ್ನು ತಪ್ಪಿಸಬಹುದಾಗಿದೆ. ಇದೇ ನಮ್ಮ ಕಳಕಳಿ.

- ವಿದ್ವಾನ್ ಎಂ.ದ್ವಾರಕೀಶ್, ದಾವಣಗೆರೆ.

# ಬಿಜೆಪಿಗೆ 'ಪ್ರಕೋಷ್ಠ' ಬಲ

**(1ನೇ ಪುಟದಿಂದ)** ರಾಜಕಾರಣ ನಮ್ಮ ಪಕ್ಷದ ಚಿಂತನೆಯಾಗಿದೆ ಎಂದರು.

ಜಗತ್ತೊಂದೇ ಭಾರತ ನಿರ್ಮಾಣಕ್ಕೆ ಎಲ್ಲರನ್ನೂ ಜೋಡಿಸಿಕೊಂಡು ಹೋಗ ಬೇಕಿದೆ. ಪ್ರಕೋಷ್ಠ ರಾಜಕಾರಣದ ಬಾಗಿಲು. ರಾಜ್ಯದಲ್ಲಿ ಈಗಾಗಲೇ 90 ಸಾವಿರ ಕಾರ್ಯಕರ್ತರಿಗೆ ಪ್ರಕೋಷ್ಠದ ಮೂಲಕ ಪಕ್ಷದ ಜವಾಬ್ದಾರಿಗಳು ದೊರೆತಿವೆ. ರಾಜ್ಯದ ಪ್ರಕೋಷ್ಠದ ಚಿಂತನೆಗೆ ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ದೊರತಿದೆ ಎಂದು ಹರ್ಷ ವ್ಯಕ್ತಪಡಿಸಿದ ಕಟೀಲ್, ಪ್ರಕೋಷ್ಠಗಳ ರಚನೆಯಿಂದ ಪಕ್ಷದ ಸಂಘಟನಾ ಶಕ್ತಿ ಮತ್ತಷ್ಟು ವೃದ್ಧಿಸಲಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಜಿ.ಎಂ. ಸಿದ್ದೇಶ್ವರ್, ಪ್ರಕೋಷ್ಠಗಳ ರಚನೆ ಮೂಲಕ ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿದಂತೆ ಎಲ್ಲಾ ಚುನಾವಣೆಗಳಲ್ಲೂ ಬಿಜೆಪಿ ಮತ್ತಷ್ಟು ಪ್ರಜ್ವಲಿಸಲು ಸಹಾಯಕವಾಗಲಿದೆ ಎಂದು ಹೇಳಿದರು.

ಶಾಸಕ ಎಸ್.ಎ. ರವೀಂದ್ರನಾಥ್, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿಗೆ ಸ್ಪಷ್ಠ ಬಹುಮತ ಬರಲು ಪ್ರಕೋಷ್ಠಗಳು ಸಹಕಾರಿಯಾಗಲಿ ಎಂದು ಆಶಿಸಿದರು. ರಾಜ್ಯ ಪ್ರಕೋಷ್ಠಗಳ ಸಂಯೋಜಕ ಭಾನುಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಕ್ಷದ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್ ಜಿ., ಜಗಳೂರು ಶಾಸಕ ಎಸ್.ವಿ. ರಾಮಚಂದ್ರ, ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ, ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ, ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಮಹಾನಗರ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ಉಪಸ್ಥಿತರಿದ್ದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಸ್ವಾಗತಿಸಿದರು. ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ ನಿರೂಪಿಸಿದರು. ಸಹನಾ ಮಂಜುನಾಥ್ ವಂದೇ ಮಾತರಂ ಗೀತೆ ಹಾಡಿದರು.

## ನಾಯಕತ್ವದ ಬದಲಾವಣೆ ಇಲ್ಲ

ದಾವಣಗೆರೆ, ನ. 24- ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಬಗ್ಗೆ ಗೊಂದಲಗಳಿಲ್ಲ. ನಾಯಕತ್ವದ ಬದಲಾವಣೆಯ ಚರ್ಚೆಯೇ ಇಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸ್ಪಷ್ಟಪಡಿಸಿದರು.

ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಂದಿನ ಪೂರ್ಣ ಅವಧಿಯನ್ನು ಯಡಿಯೂರಪ್ಪ ನಿರ್ವಹಿಸಲಿದ್ದಾರೆ ಎಂದು ಹೇಳಿದರು. ಪುನರ್ ರಚನೆ ಬಗ್ಗೆ ಈಗಾಗಲೇ ಯಡಿಯೂರಪ್ಪನವರು ಕೇಂದ್ರದ ನಾಯಕರೊಂದಿಗೆ ಚರ್ಚಿಸಿದ್ದಾರೆ. ಪುನರ್ ರಚನೆ ಬಗ್ಗೆ ಕಾದು ನೋಡಿ ಎಂದ ಕಟೀಲ್, ವೀರಶೈವ ಅಭಿವೃದ್ಧಿ ನಿಗಮ ಸ್ಥಾಪನೆಗೆ ಹಾಗೂ ಅನುದಾನ ನೀಡಲು ಬೇಡಿಕೆ ಇತ್ತು. ಮುಖ್ಯಮಂತ್ರಿಗಳು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಗುರಿ, ದಾರಿ ಎರಡನ್ನೂ ಮರೆತ ಕಾಂಗ್ರೆಸ್

ಕಾಂಗ್ರೆಸ್ ಇಂದು ತನ್ನ ಗುರಿ ಹಾಗೂ ದಾರಿ ಎರಡನ್ನೂ ಮರೆತಿದೆ. ಆದರೆ ಬಿಜೆಪಿ ತಾನಿಟ್ಟ ಗುರಿಯ ದಾರಿಯಲ್ಲಿಯೇ ಸಾಗುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ದೀನ್ ದಯಾಳ್ ಉಪಾಧ್ಯಾಯರ ಕಟ್ಟ ಕಡೆ ವ್ಯಕ್ತಿಗೂ ನ್ಯಾಯ ಸಿಗಬೇಕೆಂಬ ಅಂತ್ಯೋದಯ ಪರಿಕಲ್ಪನೆ ಹಾಗೂ ಶಾಮ್ ಪ್ರಸಾದ್ ಮುಖರ್ಜಿಯವರ ಒಂದೇ ದೇಶ, ಒಂದೇ ಸಂವಿಧಾನ ಚಿಂತನೆಗಳು 74 ವರ್ಷಗಳ ಸುದೀರ್ಘ ರಾಜಕೀಯ ಪಯಣದ ನಂತರ ಈಡೇರಿವೆ.

ಬಿಜೆಪಿ ತನ್ನ ಗುರಿ ಹಾಗೂ ದಾರಿ ಮರೆತಿಲ್ಲ ಎಂಬುದಕ್ಕೆ ಇವೇ ಕಾರಣ ಎಂದು ಹೇಳಿದರು. ಕಾಂಗ್ರೆಸ್ ಅಧಿಕಾರ ಸಿಕ್ಕಾಗ ಭ್ರಷ್ಟಾಚಾರ ನಡೆಸಿತು. ರಾಷ್ಟ್ರ ಚಿಂತನೆ ಮರೆಯಿತು. ಕುಟುಂಬ ರಾಜಕಾರಣದಲ್ಲಿ ತಲ್ಲೀನರಾದರು. ಇದು ಪಕ್ಷಕ್ಕೆ ಮುಳುವಾಯಿತು. ಕೊನೆಗೆ ವಿರೋಧ ಪಕ್ಷವಾಗಿ ಕುಳಿತುಕೊಳ್ಳುವ ಅರ್ಹತೆಯನ್ನೂ ಕಳೆದುಕೊಂಡಿತು ಎಂದು ಕಟೀಲ್ ಕುಟುಕಿದರು.

## ಲೈಟ್ ಕಂಬ ನಿಲ್ಸಿದ್ರೂ ಕಾಂಗ್ರೆಸ್ ಗೆಲ್ತಿದ್ದ ಸಮಯ ಬದಲಾಗಿದೆ

ಇಂದಿರಾಗಾಂಧಿಯವರ ಕಾಲಘಟ್ಟದಲ್ಲಿ 'ಚುನಾವಣೆಗೆ ಕಾಂಗ್ರೆಸ್‌ನಿಂದ ಲೈಟ್ ಕಂಬ ನಿಲ್ಲಿಸಿದರೂ ಗೆಲ್ಲುತ್ತೆ' ಎಂಬ ಮಾತುಗಳಿದ್ದವು. 90ರ ದಶಕದಲ್ಲಿ ಕಾಂಗ್ರೆಸ್‌ನಲ್ಲಿ 1,800 ಶಾಸಕರಿದ್ದರು. ಬಿಜೆಪಿ ಶಾಸಕರು 100 ಮಾತ್ರ. ಇಂದು ಬಿಜೆಪಿಯಿಂದ ಗೆದ್ದ ಶಾಸಕರ ಸಂಖ್ಯೆ 1,800. ಕಾಂಗ್ರೆಸ್ ಶಾಸಕರು 700 ಮಾತ್ರ. ಅಂದು 1,100 ಕಾಂಗ್ರೆಸ್ ಶಾಸಕರು ಹೆಚ್ಚಾಗಿದ್ದರು. ಇಂದು ಅಷ್ಟೇ ಸಂಖ್ಯೆಯ ಬಿಜೆಪಿ ಶಾಸಕರು ಹೆಚ್ಚಾಗಿದ್ದಾರೆ.

ವ್ಯಕ್ತಿಗಿಂತ ಪಕ್ಷವೇ ಶ್ರೇಷ್ಠ ಎಂಬ ಚಿಂತನೆ, ಸಂಘಟನಾತ್ಮಕ ಕಾರ್ಯಗಳಿಂದಾಗಿ ಬಿಜೆಪಿ ಇಂದು ಬೃಹತ್ ಪಕ್ಷವಾಗಿ ಬೆಳೆದಿದೆ ಎಂದು ನಳಿನ್ ಕುಮಾರ್ ಕಟೀಲ್ ಹೇಳಿದರು.

# ಗ್ರಾ.ಪಂ.ನಲ್ಲಿ ಭ್ರಷ್ಟಾಚಾರ : ತಾ.ಪಂ. ಸದಸ್ಯರಿಂದ ಆರೋಪ




ರಾಣೇಬೆನ್ನೂರು, ನ.24- ಗ್ರಾಮ ಪಂಚಾಯ್ತಿಗಳಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪ ಮಾಡಿದ ತಾ.ಪಂ. ಸದಸ್ಯರು, ಈ ಬಗ್ಗೆ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಸಭೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಇಂದು ನಡೆದ ತಾಲ್ಲೂಕು ಪಂಚಾಯ್ತಿ ಸಭೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮೇಲೆ ಒತ್ತಡ ಹೇರಿದರು.

ಕಾಮಗಾರಿ ಮಾಡದೇ ಬಿಲ್ ಮಾಡಲಾಗುತ್ತಿದೆ. ಒಂದೇ ರಸ್ತೆಗೆ ರಿಪೇರಿ ಮಾಡಲಾಗಿದೆ ಎಂದು ಹಲವು ಬಾರಿ ಬಿಲ್ ಹಣ ತೆಗೆದುಕೊಳ್ಳಲಾಗಿದೆ. ಬೇಲೂರು ಪಂಚಾಯ್ತಿ ಕಟ್ಟಡಕ್ಕೆ ಬಣ್ಣ ಹಚ್ಚಲು 77 ಸಾವಿರ ಹಣ ಖರ್ಚು ಹಾಕಲಾಗಿದೆ. ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು ಎಂದು ಸದಸ್ಯರು ತಮ್ಮ ಪಕ್ಷ ಭೇದ ಮರೆತು ದೂರಿದರು. ನಮ್ಮ ಬಳಿ ಇದಕ್ಕೆ ಸಂಬಂಧಿಸಿದಂತೆ ಪುರಾವೆಗಳಿವೆ. ನಮ್ಮದು ಟೈಮ್ ಮುಗಿದಿದೆ. ನಾವು ಮನೆಗೆ ಹೋಗ್ತೇವೆ. ಕೊನೆ ಸಭೆಯಲ್ಲಿ ಅವೆಲ್ಲವುಗಳನ್ನು ನಿಮ್ಮ ಮುಂದೆ ಸುರಿಯುತ್ತೇವೆ ಎಂದು ಇಟಗಿ ಕ್ಷೇತ್ರದ ಸದಸ್ಯ ಬಿಜೆಪಿಯ ಕರಿಯಪ್ಪ ಗಡುಸಾಗಿಯೇ ಹೇಳಿದರು.

ನಮ್ಮ ಮನೆಗಳಿಗೆ ಬಣ್ಣ ಹಚ್ಚಿದರೆ ಇಪ್ಪತ್ತೋ, ಇಪ್ಪತ್ತೈದೋ ಸಾವಿರದಲ್ಲಿ ಮುಗಿಯುತ್ತೆ. ಗ್ರಾಪಂ ಕಟ್ಟಡಕ್ಕೆ ಎಪ್ಪತ್ತೇಳು ಸಾವಿರದಲ್ಲಿ ಅದೆಂತಹ ಬಣ್ಣ ಹಚ್ಚಿರಬಹುದು ನೀವೇ ನೋಡಿ ಎಂದು ತಾಪಂ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಕಾಂಗ್ರೆಸ್ ನ ನೀಲಕಂಠಪ್ಪ ಕುಸಗೂರ ಸಭೆಯ ಗಮನ ಸೆಳೆದರು.

ಕೋವಿಡ್ ತಪಾಸಣೆ ಮಧ್ಯಾಹ್ನ 12 ಗಂಟೆಗೆ ಬಂದು ಮಾಡ್ತಾರೆ. ಇದರಿಂದ ನ್ಯಾಯಾಲಯದಲ್ಲಿ ಮೊಕದ್ದಮೆ ಎದುರಿಸಲು ಬರುವ ಕಕ್ಷಿದಾರರಿಗೆ ತೊಂದರೆಯಾಗುತ್ತಿದೆ ಎನ್ನುವ ಸದಸ್ಯರ ದೂರುಗಳಿಗೆ, ಪರೀಕ್ಷೆ ಹಾಗೂ ಸಂಬಂಧಿಸಿದ ದಾಖಲೆಗಳನ್ನು ತಯಾರಿಸಲು ಸಮಯ ಸಾಲದೇ ಇರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಆದರೂ ನ್ಯಾಯಾಲಯದವರು ಕೊಟ್ಟ ಪಟ್ಟಿಯಲ್ಲಿ ಇರುವವರೆಲ್ಲರ ತಪಾಸಣೆ ಮಾಡಲಾಗುತ್ತೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ. ಸಂತೋಷ ವಿವರಿಸಿದರು.

**ಸಭೆ ಎರಡು ತಾಸು ತಡ:** ಕೋರಂ ಗೆ ಬೇಕಾಗಿದ್ದ 12 ಸದಸ್ಯರು ಇಲ್ಲದ್ದರಿಂದ, ಅವಶ್ಯವಿದ್ದ 8 ಸದಸ್ಯರ ಆಗಮನಕ್ಕೆ ಅಧ್ಯಕ್ಷೆ ಗೀತಾ ಲಮಾಣಿ ಹಾಗೂ ಉಪಾಧ್ಯಕ್ಷೆ ಕಸ್ತೂರಿ ಹೊನ್ನಾಳಿ ಮತ್ತು ಎಲ್ಲಾ ಇಲಾಖೆಗಳ ಅಧಿಕಾರಿಗಳು ಸುಮಾರು ಎರಡು ಗಂಟೆಗಳ ಕಾಲ ಕಾಯಬೇಕಾಯಿತು.

ಸಭೆಗೂ ಮೊದಲು ನೂತನವಾಗಿ ಆಯ್ಕೆಯಾದ ಸ್ಥಾಯಿ ಸಮಿತಿ ಅಧ್ಯಕ್ಷೆ ಜ್ಯೋತಿ ಗಂಜಾಮದ ಹಾಗೂ ನೂತನವಾಗಿ ಆಗಮಿಸಿದ ಇಓ ಟಿ.ಆರ್. ಮಲ್ಲಾಡದ ಅವರನ್ನು ಸನ್ಮಾನಿಸಲಾಯಿತು. ಮ್ಯಾನೇಜರ್ ಬಸವರಾಜ ಸಿಡೇನೂರ ಕಲಾಪ ನಿರೂಪಿಸಿದರು.

# ಮಕ್ಕಳ ಬುದ್ಧಿಶಕ್ತಿ ಬೆಳವಣಿಗೆಗೆ ಚೆಸ್ ಸಹಕಾರಿ




ದಾವಣಗೆರೆ, ನ. 24- ಚದುರಂಗ ಸ್ಪರ್ಧೆಯು ಒಂದು ಬುದ್ಧಿವಂತಿಕೆಯ ಆಟ. ಈ ಆಟವನ್ನು ಅಳವಡಿಸಿಕೊಂಡರೆ ವಿದ್ಯಾಭ್ಯಾಸಕ್ಕೆ ಮತ್ತು ಬುದ್ಧಿವಂತಿಕೆ, ಬುದ್ಧಿಶಕ್ತಿಗೂ ಸಹಾಯವಾಗುತ್ತದೆ ಎಂದು ದಾವಣಗೆರೆ ಜಿಲ್ಲಾ ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾ ಚೆಸ್ ಕ್ಲಬ್ ಕಛೇರಿಯಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸ್ಪರ್ಧಾಳುಗಳ ಪೋಷಕರು ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹಿಸಬೇಕು. ಮಕ್ಕಳು ಕ್ರೀಡಾ ಚಟುವಟಿಕೆಗಳನ್ನು ಆಸಕ್ತಿಯಿಂದ ಕಲಿತು, ಬುದ್ಧಿವಂತರಾಗಿ ಮುಂದಿನ ಸಮಾಜಕ್ಕೆ ಒಳ್ಳೆಯ ಪ್ರಜೆಗಳಾಗಬೇಕು. ಜೀವನದಲ್ಲಿ ಏಳುಬೀಳುಗಳನ್ನು ಅರಿಯಲು ಚದುರಂಗದಾಟ ಸಹಕಾರಿ ಎಂದು ಅವರು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ನಗರ ಪಾಲಿಕೆ ಸದಸ್ಯ ದೇವರಮನಿ ಶಿವಕುಮಾರ್, ಬುದ್ಧಿವಂತಿಕೆಯ ಗುಣಮಟ್ಟ ಹೆಚ್ಚಿಸಿಕೊಳ್ಳಲು ಚದುರಂಗ ಸ್ಪರ್ಧೆ ಉತ್ತಮ ಸಹಕಾರಿ. ಮಕ್ಕಳ ವಿದ್ಯಾಭ್ಯಾಸಕ್ಕೂ ಅನುಕೂಲವಾಗಲಿದೆ ಎಂದರು.

ಪಂದ್ಯಾವಳಿಯಲ್ಲಿ ಒಟ್ಟು 6 ಸುತ್ತುಗಳು ನಡೆದಿದ್ದು, ಹನ್ನೆರಡು ವರ್ಷದ ಒಳಗಿನ ವಿಭಾಗದಲ್ಲಿ ದಿಗಂತ್ ಎಂ.ಎಸ್. ಅವರು ಅಭಿನವ್ ವಿರುದ್ಧ ಜಯ ಗಳಿಸಿ ಪ್ರಥಮ ಸ್ಥಾನ ಪಡೆದು ಕನ್ನಡ ರಾಜ್ಯೋತ್ಸವ ಕಪ್ ಗಳಿಸಿದ್ದಾರೆ.

ದ್ವಿತೀಯ ಸ್ಥಾನ ನಿಶ್ಚಲ್ ಜಿ.ಎಸ್., ಮೂರನೇ ಸ್ಥಾನ ತನ್ಮೈಜ, ನಾಲ್ಕನೇ ಸ್ಥಾನ ಅಭಿನವ್, ಐದನೇ ಸ್ಥಾನ ಜೀವನ್ ಎಂ.ಎಸ್. ಪಡೆದಿದ್ದಾರೆ.

ಹದಿನೆಂಟು ವರ್ಷದ ಒಳಗಿನ ವಿಭಾಗದಲ್ಲಿ ಭಾನುತೇಜ್ ವಿರುದ್ಧ ಧನುಷ್ ಎಂ.ಎಸ್. ವಿಜೇತರಾಗಿದ್ದು, ರಾಜ್ಯೋತ್ಸವ ಕಪ್ ಪಡೆದಿದ್ದಾರೆ. ನಂತರದ ಸ್ಥಾನದಲ್ಲಿ ಮಿಥುನ್ ಎಂ. ದ್ವಿತೀಯ, ಭಾನುತೇಜ್ ಸಿ.ಎಂ. ಮೂರನೇ ಸ್ಥಾನ, ವರದ್ ಎಂ ಕುಬಸದ್ ನಾಲ್ಕನ್ ಸ್ಥಾನ, ಐದನೇ ಸ್ಥಾನ ಗೌರೀಶ್ ಹೆಚ್. ಜಿ. ಪಡೆದಿದ್ದಾರೆ.

ಸಮಾರಂಭದಲ್ಲಿ ಯುವರಾಜ್, ಮಂಜುಳಾ ಯುವರಾಜ್, ಗಂಗಾಧರ್, ಪಂದ್ಯಾವಳಿಯ ತೀರ್ಪುಗಾರರಾದ ಚಿತ್ರದುರ್ಗದ ನವೀನ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಹಾವೇರಿಯಲ್ಲಿ ನುಡಿ ಜಾತ್ರೆ

**(1ನೇ ಪುಟದಿಂದ)** ನಡೆದ ಕಸಾಪ ಕಾರ್ಯಕಾರಿ ಸಮಿತಿ ಸಭೆಯು ಸಮ್ಮೇಳನದ ದಿನಾಂಕವನ್ನು ನಿಗದಿ ಮಾಡಿ ಸುದೀರ್ಘ ಚರ್ಚೆ ನಡೆಸಲಾಯಿತು ಎಂದು ರಾಜ್ಯ ಕಸಾಪ ಅಧ್ಯಕ್ಷ ಡಾ. ಮನು ಬಳಿಗಾರ್ ತಿಳಿಸಿದ್ದಾರೆ.

ಈ ಸಭೆಗೂ ಮೊದಲು ಗೃಹ ಸಚಿವರೂ ಆಗಿರುವ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ, ಕೃಷಿ ಸಚಿವ ಬಿ.ಸಿ. ಪಾಟೀಲ್, ಹಾವೇರಿ ಶಾಸಕ ನೆಹರೂ ಓಲೇಕಾರ ಅವರೊಂದಿಗೆ ಚರ್ಚಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ಕೋವಿಡ್ - 19 ಪ್ರಸಾರ ಇಳಿಮುಖವಾಗುತ್ತಿದ್ದು, ಮಾರ್ಗ ಸೂಚಿಗಳನ್ನು ಸಡಿಲಗೊಳಿಸಿ ಅಕ್ಷರ ಜಾತ್ರೆಯನ್ನು ನಡೆಸಲು ಅನುವು ಮಾಡಿಕೊಡಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು ಎಂದು ಬಳಿಗಾರ್ ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## ಹರಿಹರದಲ್ಲಿಂದು ಶ್ರೀ ಅನಸ್ತೇಸ್ಥಿ

ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನಜಿಯ್ಯರ್ ಸ್ವಾಮಿಗಳಿಂದ ತುಂಗಭದ್ರಾ ಪುಷ್ಕರ ಲೋಕ ಕಲ್ಯಾಣಾರ್ಥ ಕೋವಿಡ್ 19 (ಕೊರೊನಾ ಸೋಂಕು) ಸಂಪೂರ್ಣ ನಿವಾರಣೆಗಾಗಿ ಹರಿಹರದ ತುಂಗಭದ್ರಾ ನದಿ ದಡದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಹಮ್ಮಿಕೊಂಡಿರುವ ಬ್ರಹ್ಮಯಜ್ಞ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಗೋಪೂಜೆ, ಅರ್ಚನೆ, ಸೇವಾಕಾಲ, ವೇದ ಪಾರಾಯಣ ನಡೆಯುವುದು. ನಂತರ 9 ಕ್ಕೆ ಕುಜ ದೋಷ ನಿವಾರಣೆಗಾಗಿ ಶ್ರೀ ಅನಸ್ತೇಸ್ಥಿ ನಡೆಯಲಿದೆ.

# ಪ್ರಧಾನಿ ಪ್ರತಿಸ್ಪರ್ಧಿಯ ನಾಮಪತ್ರ ತಿರಸ್ಕಾರ ಸರಿ ಎಂದ ಸುಪ್ರೀಂ

ನವದೆಹಲಿ, ನ. 24 - ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸ್ಪರ್ಧಿಸಲು ದಾಖಲಿಸಿದ್ದ ತಮ್ಮ ನಾಮಪತ್ರ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಬಿ.ಎಸ್.ಎಫ್. ಉಚ್ಛಾಟಿತ ಯೋಧ ತೇಜ್ ಬಹದ್ದೂರ್ ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಹಾಗೂ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ಬಹದ್ದೂರ್ ಅರ್ಜಿಯನ್ನು ತಳ್ಳಿ ಹಾಕಿದೆ.

ಬಹದ್ದೂರ್ ದಾಖಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಉಚ್ಚ ನ್ಯಾಯಾಲಯ ಈ ಹಿಂದೆ ತಳ್ಳಿ ಹಾಕಿತ್ತು. ತಮ್ಮ ನಾಮಪತ್ರ ತಿರಸ್ಕಾರ ಹಾಗೂ ಮೋದಿ ಆಯ್ಕೆ ಎರಡನ್ನೂ ಪ್ರಶ್ನಿಸಿ ಬಹದ್ದೂರ್ ನ್ಯಾಯಾಲಯದ ಮೊರೆ ಹೋಗಿದ್ದರು.

ಕಳೆದ ವರ್ಷ ಮೇ 1ರಂದು ಚುನಾವಣಾ ಅಧಿಕಾರಿ ತೇಜ್ ಬಹದ್ದೂರ್ ನಾಮಪತ್ರ ತಳ್ಳಿ ಹಾಕಿದ್ದರು. ಬಹದ್ದೂರ್ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

ಚುನಾವಣಾ ಆಯೋಗ ನಿಗದಿಪಡಿಸಿದ ರೀತಿಯಲ್ಲಿ ನಾಮಪತ್ರವನ್ನು ಸಲ್ಲಿಸಿಲ್ಲ. ನಾಮಪತ್ರದ ಸಂದರ್ಭದಲ್ಲಿ ಭ್ರಷ್ಟಾಚಾರ, ಇಲ್ಲವೇ ದೇಶಕ್ಕೆ ನಿಷ್ಠೆ ತೋರದ ಕಾರಣಕ್ಕಾಗಿ ತಮ್ಮನ್ನು ವಜಾಗೊಳಿಸಿಲ್ಲ ಎಂಬ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ ಎಂದು ಚುನಾವಣಾ ಅಧಿಕಾರಿ ನಾಮಪತ್ರ ತಳ್ಳಿ ಹಾಕಿದ್ದರು.

ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದ ಬಹದ್ದೂರ್, ಚುನಾವಣೆ ಹಾಗೂ ತದನಂತರ ಮೋದಿ ಅವರು ಆಯ್ಕೆಯಾಗಿರುವುದಾಗಿ ಘೋಷಣೆ ಮಾಡಿದ್ದನ್ನು ತಳ್ಳಿ ಹಾಕಬೇಕು ಎಂದು ಕೋರಿದ್ದರು.

## ಕುರುಬ ಸಮುದಾಯಕ್ಕೆ ಎಸ್.ಟಿ. ಸ್ಥಾನಮಾನ ನೀಡಲು ಕೇಂದ್ರಕ್ಕೆ ನಿಯೋಗದ ಮನವಿ

ನವದೆಹಲಿ, ನ. 24 – ಕುರುಬ ಸಮುದಾಯಕ್ಕೆ ಎಸ್.ಟಿ. ಸ್ಥಾನಮಾನ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ನೇತೃತ್ವದ ನಿಯೋಗ ಮನವಿ ಸಲ್ಲಿಸಿದೆ.

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ರೇಣುಕಾ ಸಿಂಗ್ ಅವರಿಗೆ ಮನವಿ ಸಲ್ಲಿಸಲಾಗಿದೆ.

ಈ ನಿಯೋಗದಲ್ಲಿ ಕಾಗಿನೆಲೆ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಕಾಂಗ್ರೆಸ್ ನಾಯಕ ಹೆಚ್.ಎಂ. ರೇವಣ್ಣ ಹಾಗೂ ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ ಮತ್ತಿತರರು ಉಪಸ್ಥಿತರಿದ್ದರು.

ಕುರುಬ ಸಮುದಾಯಕ್ಕೆ ಎಸ್.ಟಿ. ಸ್ಥಾನಮಾನ ನೀಡಬೇಕು ಎಂಬುದು ರಾಜ್ಯದ ಬಹು ದಿನಗಳ ಬೇಡಿಕೆಯಾಗಿದೆ ಎಂದು ನಿಯೋಗದ ಸದಸ್ಯರು ಸಚಿವ ಸಿಂಗ್ ಅವರಿಗೆ ತಿಳಿಸಿದ್ದಾರೆ.

# ಕೊಟ್ಟೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘಕ್ಕೆ ಆಯ್ಕೆ



ಕೊಟ್ಟೂರು, ನ.24- ಕೊಟ್ಟೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎಸ್. ಈಶ್ವರಗೌಡ್ರು, ಉಪಾಧ್ಯಕ್ಷರಾಗಿ ನಿಂಬಳಗೆರೆ ಕಲ್ಲೇಶಪ್ಪ ಅವರು ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಬೇಲಿಗೌಡ್ರು ನಾಗರಾಜ, ಹೂಗಾರ ನಾಗರಾಜ್, ಎಸ್.ವೀರೇಶ್ ಗೌಡ್ರು, ಕೆ. ಕರಿಬಸವನಗೌಡ ಹಾಗೂ ಅಳವಂಡಿ ಕೊಟ್ರೇಶ್, ಮಮತ ಎಸ್. ಮಲ್ಲೇಶಪ್ಪ, ಅಶೋಕ್, ಗಾಣಗಟ್ಟಿ ಮಹಾಂತೇಶ್, ಉಮಾಪತಿ ಹ್ಯಾಳ, ಕೆ. ರಾಮಪ್ಪ ಕರುಣಕುಮಾರ್ ಅವರು ಆಯ್ಕೆಯಾಗಿದ್ದಾರೆ. ಆಯ್ಕೆಯ ನಂತರ ಪತ್ರಿಕೆಯೊಂದಿಗೆ ಮಾತನಾಡಿದ ಅಧ್ಯಕ್ಷ ಕೆ.ಎಸ್. ಈಶ್ವರಗೌಡ್ರು, ಈ ಸಮಿತಿಯು ಜಾತ್ಯತೀತವಾಗಿ ಹಾಗೂ ಪಕ್ಷಾತೀತವಾಗಿ ರೈತರ ಪರವಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

## ಅಯೋಧ್ಯೆ ವಿಮಾನ ನಿಲ್ದಾಣಕ್ಕೆ ರಾಮ ದೇವರ ಹೆಸರು

ಲಖ್ನೌ, ನ. 24 – ಅಯೋಧ್ಯೆಯ ವಿಮಾನ ನಿಲ್ದಾಣಕ್ಕೆ ಶ್ರೀರಾಮ ದೇವರ ಹೆಸರಿಡುವ ಪ್ರಸ್ತಾಪಕ್ಕೆ ಉತ್ತರ ಪ್ರದೇಶ ಸಂಪುಟ ಒಪ್ಪಿಗೆ ನೀಡಿದೆ. ಈ ನಿರ್ಣಯವನ್ನು ಉತ್ತರ ಪ್ರದೇಶ ಶಾಸಕಾಂಗ ಸಭೆಯ ಮುಂದೆ ಮಂಡಿಸಿ ಒಪ್ಪಿಗೆ ಪಡೆಯಲಾಗುವುದು. ನಂತರ ಅದನ್ನು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ರವಾನಿಸಲಾಗುವುದು.

## ಕರೆಗೆ '0' ಸೇರ್ಪಡೆ

**(1ನೇ ಪುಟದಿಂದ)** ಎಂದು ಟೆಲಿಕಾಂ ನಿಯಂತ್ರಕ ಟ್ರಾಯ್ ಪ್ರಸ್ತಾಪಿಸಿತ್ತು. ಇದನ್ನು ಟೆಲಿಕಾಂ ಇಲಾಖೆ ಒಪ್ಪಿಕೊಂಡಿದ್ದು, ಈ ಬಗ್ಗೆ ಟೆಲಿಕಾಂ ಕಂಪನಿಗಳಿಗೆ ಅಗತ್ಯ ಸೂಚನೆ ನೀಡಿದೆ.

## ಓದುಗರ ಪತ್ರ

### ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವ ಉದ್ಯೋಗಸ್ಥ ಮಹಿಳೆಯರು

**ಮಾನ್ಯರೇ,** ವಿಶ್ವವೇ ಗ್ರಾಮವಾದ ಪ್ರಸ್ತುತ ಜಗತ್ತಿನಲ್ಲಿ ವಿಶ್ವವಿದ್ಯಾಲಯದ ಕೆಲ ನಿಯಮಾವಳಿಗಳಿಂದ ಉನ್ನತ ಶಿಕ್ಷಣದಿಂದ ಉದ್ಯೋಗಸ್ಥ ಮಹಿಳೆಯರು ವಂಚಿತರಾಗುವಂತಾಗಿದೆ.

ಸದ್ಯ ಕರ್ನಾಟಕದಲ್ಲಿ ದೂರಶಿಕ್ಷಣ ಪ್ರವೇಶ ಕೆಎಸ್‌ಒಯು (ಕರ್ನಾಟಕ ಸ್ಟೇಟ್ ಓಪನ್ ಯೂನಿವರ್ಸಿಟಿ) ಮೈಸೂರು ಇಲ್ಲಿ ಮಾತ್ರ ಲಭ್ಯವಿದೆ. ಎಂ.ಎ., ಎಂ.ಕಾಂ., ಎಂ.ಎಸ್ಸಿ ಕೋರ್ಸ್‌ಗಳಿಗೆ ಪ್ರವೇಶ ಕರೆದ ವಿಶ್ವವಿದ್ಯಾಲಯವು ಎಂ.ಎಸ್ಸಿ ಹೊರತುಪಡಿಸಿ ಉಳಿದ ಕೋರ್ಸ್‌ಗಳಿಗೆ ಪ್ರಾದೇಶಿಕ ಕೇಂದ್ರಗಳಲ್ಲೇ ಪರೀಕ್ಷೆ ಬರೆಯಲು ಅನುಮತಿ ನೀಡಿದೆ. ಎಂ.ಎಸ್ಸಿಗೆ ಈ ಅವಕಾಶ ಇಲ್ಲ. ದಾವಣಗೆರೆ ಪ್ರಾದೇಶಿಕ ಕಛೇರಿಯ ಅಧಿಕಾರಿಗಳನ್ನು ಈ ಸಂಬಂಧವಾಗಿ ವಿಚಾರಿಸಿದರೆ, 'ಎಂ.ಎಸ್ಸಿ ಕೋರ್ಸ್ ಕಡಿಮೆ ವಿದ್ಯಾರ್ಥಿಗಳು ತೆಗೆದುಕೊಳ್ಳುವುದರಿಂದ ಪರೀಕ್ಷೆಯನ್ನು ಮೈಸೂರಿನಲ್ಲೇ ಬರೆಯಬೇಕು' ಎಂದು ಹೇಳುತ್ತಾರೆ. ವಿವಿಧ ಕೋರ್ಸ್‌ಗಳ ಪರೀಕ್ಷೆಯನ್ನು ಪ್ರಾದೇಶಿಕ ಕೇಂದ್ರದ ಮಟ್ಟದಲ್ಲೇ ನಡೆಸುವಾಗ ಎಂ.ಎಸ್ಸಿ ಪರೀಕ್ಷೆಯನ್ನು ನಡೆಸಲು ಯಾವ ತಾಂತ್ರಿಕ ಸಮಸ್ಯೆಯೋ ಅರಿಯದಾಗಿದೆ

ಕುಟುಂಬ ಮತ್ತು ಉದ್ಯೋಗ ಎರಡನ್ನೂ ಒಟ್ಟೊಟ್ಟಿಗೆ ನಿಭಾಯಿಸುವ ಮಹಿಳೆಯರಿಗೆ ಮೈಸೂರಿಗೆ ಹೋಗಿ ಹತ್ತಾರು ದಿನ ತಂಗಿ ಎಂ.ಎಸ್ಸಿ ಪರೀಕ್ಷೆ ಬರೆಯಲು ತೀರಾ ಸಮಸ್ಯೆಯೇ ಆಗುತ್ತದೆ. ಕೋವಿಡ್‌ನಂತಹ ವಿಷಮ ರೋಗದ ನಡುವೆ ಈ ರೀತಿಯ ನಡಾವಳಿ ಸರಿಯೂ ಅಲ್ಲ, ದೂರದ ಗುಲ್ಬರ್ಗದಿಂದ ಮೈಸೂರಿಗೆ ಬಂದು ಪರೀಕ್ಷೆ ಬರೆಯುವುದು ಖರ್ಚಿನ ದೃಷ್ಟಿಯಿಂದ ದುಬಾರಿಯೂ ಹೌದು, ಮೊದಲಿನಂತೆ ರಾಜ್ಯದ ಕೆಲವೊಂದು ವಿಶ್ವವಿದ್ಯಾಲಯಗಳು ದೂರಶಿಕ್ಷಣ ಕೋರ್ಸ್ ಅನ್ನು ನಡೆಸಿದ್ದರೆ ಈ ತೊಂದರೆ ವಿದ್ಯಾರ್ಥಿಗಳಿಗೆ ಆಗುತ್ತಿರಲಿಲ್ಲ. ಪ್ರಸ್ತುತ ಕೆಎಸ್‌ಒಯು ಮಾತ್ರ ದೂರಶಿಕ್ಷಣ ಕೋರ್ಸನ್ನು ನಡೆಸುತ್ತಿದ್ದು, ವಿದ್ಯಾರ್ಥಿಗಳಿಗೆ ಅದರಲ್ಲೂ, ಮಹಿಳಾ ವಿದ್ಯಾರ್ಥಿಗಳಿಗೆ ಎಂ.ಎಸ್ಸಿ., ಪರೀಕ್ಷೆಯನ್ನು ಅಥವಾ ಥಿಯರಿ ಪರೀಕ್ಷೆಯನ್ನು ಕೆಎಸ್‌ಒಯು ವಿಶ್ವವಿದ್ಯಾಲಯದ ಪ್ರಾದೇಶಿಕ ಕಛೇರಿಗಳು ಇರುವ ಸ್ಥಳಗಳಲ್ಲೇ ನಡೆಸಿದರೆ ಎಲ್ಲಾ ದೂರಶಿಕ್ಷಣ ವಿದ್ಯಾರ್ಥಿಗಳಿಗೆ ತುಂಬಾ ಅನೂಕೂಲವಾಗುತ್ತದೆ.

**- ಮಮತಾ ಎಂ. ಬಾವಿಕಟ್ಟಿ,** ದಾವಣಗೆರೆ.


## ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರಾದ ದಾವಣಗೆರೆ ನಗರದ ಸಿದ್ಧವೀರಪ್ಪ ಬಡಾವಣೆ ವಾಸಿಯಾದ **ದಿವಂಗತ ಜಿ.ಮಲ್ಲಿಕಾರ್ಜುನಪ್ಪನವರ ಮಕ್ಕಳಾದ ಜಿ.ಎಂ.ಸೋಮನಾಥ** ಮತ್ತು **ಜಿ.ಎಂ.ಅಭಿನಂದನ್** ಇವರುಗಳ ಪರವಾಗಿ ವಕೀಲರಾದ **ಟಿ.ಆರ್.ಗುರುಬಸವರಾಜ್** ಆದ ನಾನು ಸಾರ್ವಜನಿಕರ ಗಮನಕ್ಕೆ ತಿಳಿಸುವುದೇನೆಂದರೆ :

ಈ ಹಿಂದೆ ವಿವಿಧ ನೋಂದಾಯಿತ ಕ್ರಯ ಪತ್ರಗಳ ಮೂಲಕ ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಆಸ್ತಿಗಳನ್ನು ನನ್ನ ಕಕ್ಷಿದಾರರ ತಂದೆಯವರಾದ ಶ್ರೀ ಜಿ.ಮಲ್ಲಿಕಾರ್ಜುನಪ್ಪ ಬಿನ್ ಲೇಟ್ ಸಿದ್ದರಾಮಪ್ಪ ಇವರು ಷೆಡ್ಯೂಲ್ ಆಸ್ತಿಗಳ ಮೂಲಕ ಮೂಲ ಮಾಲೀಕರಾದ ಕೆ.ನಾರಪ್ಪ ಯಾನೇ ಕಡ್ಲೆಬಾಳು ನಾರಪ್ಪ ಬಿನ್ ಮುನಿಯಪ್ಪ ಇವರಿಂದ ಕಾನೂನುಬದ್ಧ ಪ್ರತಿಫಲ ನೀಡಿ ಖರೀದಿಸಿದ್ದು, ಅವುಗಳ ಮೇಲೆ ಹಕ್ಕು ಮತ್ತು ಸ್ವಾಧೀನ ಹೊಂದಿರುತ್ತಾರೆ.

ನನ್ನ ಕಕ್ಷಿದಾರರ ತಂದೆಯವರಾದ **ಜಿ.ಮಲ್ಲಿಕಾರ್ಜುನಪ್ಪ ಬಿನ್ ಲೇಟ್ ಸಿದ್ದರಾಮಪ್ಪ** ಇವರು ದಿನಾಂಕ : 10-12-2012 ರಂದು ಮರಣ ಹೊಂದಿದ್ದು, ಈ ಮೇಲ್ಕಾಣಿಸಿದ ನನ್ನ ಕಕ್ಷಿದಾರರು ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ಹಾಗೆಯೇ ಈ ಕೆಳ ಕಾಣಿಸಿದ ಷೆಡ್ಯೂಲ್ ಸ್ವತ್ತುಗಳ ಮಾಲೀಕತ್ವ ಮತ್ತು ಸ್ವಾಧೀನ ಅನುಭವ ಹೊಂದಿರುತ್ತಾರೆ.

ಈ ಎಲ್ಲಾ ವಿಷಯಗಳನ್ನು ತಿಳಿದಾಗ್ಯೂ ಸಹ **ಕೆ.ನಾರಪ್ಪ** ಯಾನೇ **ಕಡ್ಲೆಬಾಳು ನಾರಪ್ಪ** ಬಿನ್ **ಮುನಿಯಪ್ಪ** ಇವರ ಮರಣದ ನಂತರ ಇವರ ಮೂವರು ಜನ ಗಂಡು ಮಕ್ಕಳ ಪೈಕಿ ಇಬ್ಬರಾದ **1) ಕೆ.ಮಂಜುನಾಥ, 2) ಕೆ.ನಂಜಪ್ಪ** ಇವರುಗಳು ಈ ಕೆಳಕಾಣಿಸಿದ ಆಸ್ತಿಗಳ ಕುರಿತು ಫೌತಿದಾರರ ವಾರಸುದಾರರು ತಾವುಗಳೇ ಎಂದು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ. ಆದರೆ ಅವರುಗಳು ಕಾನೂನುಬದ್ಧ ಮಾಲೀಕರಾಗಿರುವುದಿಲ್ಲ. ಆದಾಗ್ಯೂ ಅವರುಗಳು ಷೆಡ್ಯೂಲ್ ಆಸ್ತಿಗಳನ್ನು ಪರಭಾರೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಖರೀದಿದಾರರಾದ ದಿವಂಗತ ಜಿ.ಮಲ್ಲಿಕಾರ್ಜುನಪ್ಪನವರ ಮಕ್ಕಳಾದ ನನ್ನ ಕಕ್ಷಿದಾರರು ಮಾತ್ರ ಈ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಆಸ್ತಿಗಳ ಕುರಿತು ಕಾನೂನುಬದ್ಧ ಮಾಲೀಕರು ಮತ್ತು ಹಕ್ಕು, ಸ್ವಾಧೀನಾನುಭವ ಹೊಂದಿರುತ್ತಾರೆ. ಆದ್ದರಿಂದ ಈ ಕೆಳಕಾಣಿಸಿದ ಷೆಡ್ಯೂಲ್ ಸ್ವತ್ತುಗಳ ಕುರಿತಾಗಿ ಸಾರ್ವಜನಿಕರಾರೂ ಕೂಡ ಈ ಮೇಲೆ ಕಾಣಿಸಿದ ದಿವಂಗತ **ಕೆ.ನಾರಪ್ಪ** ಯಾನೇ **ಕಡ್ಲೆಬಾಳು ನಾರಪ್ಪ** ಇವರ ಮಕ್ಕಳಾದ **ಕೆ.ಮಂಜುನಾಥ** ಮತ್ತು **ಕೆ.ನಂಜಪ್ಪ** ಇವರೊಂದಿಗಾಗಲಿ ಅಥವಾ ಬೇರೆಯವರೊಂದಿಗಾಗಲಿ ಯಾವುದೇ ರೀತಿಯ ವ್ಯವಹಾರ ಮಾಡದಂತೆ ಈ ಮೂಲಕ ಸ್ಪಷ್ಟಪಡಿಸಿ ಸಾರ್ವಜನಿಕ ತಿಳುವಳಿಕೆ ನೋಟಿಸ್‌ನ್ನು ಹೊರಡಿಸಲಾಗಿದೆ.

ಆದಾಗ್ಯೂ ಸಾರ್ವಜನಿಕರು ಯಾರಾದರೂ ಈ ಷೆಡ್ಯೂಲ್ ಸ್ವತ್ತು ಕುರಿತಾಗಿ ವ್ಯವಹರಿಸಿದಲ್ಲಿ ಈ ಮೇಲ್ಕಂಡ ನನ್ನ ಕಕ್ಷಿದಾರರ ಹಕ್ಕಿಗೆ ಚ್ಯುತಿಬಂದಂತಾಗುವುದು. ಅಲ್ಲದೇ ಅಂಥವರು ಯಾವುದೇ ರೀತಿಯ ಹಕ್ಕು ಸ್ವಾಧೀನ ಹೊಂದಲು ಕಾನೂನಿನ ಅಡಿಯಲ್ಲಿ ಅವಕಾಶವಿರುವುದಿಲ್ಲ.

ಆದ್ದರಿಂದ ಈ ಷೆಡ್ಯೂಲ್ ಸ್ವತ್ತಿನ ಕುರಿತಾಗಿ ಸಾರ್ವಜನಿಕರು ಯಾವುದೇ ರೀತಿಯ ವ್ಯವಹಾರ ಮಾಡದಂತೆ ಹೊರಡಿಸಿರುವ ಸಾರ್ವಜನಿಕ ತಿಳುವಳಿಕೆ ನೋಟಿಸ್.

**-: ಷೆಡ್ಯೂಲ್ :-** ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಸೇರಿದ, ದಾವಣಗೆರೆ ತಾಲ್ಲುಕು ದಾವಣಗೆರೆ ಗ್ರಾಮದ ರೀ ಸರ್ವೆ ನಂಬರ್ 124-2 ವುಳ್ಳ ದಾವಣಗೆರೆ ನಗರದ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹಾಲಿ ವಾರ್ಡ್ ನಂ.21 ರಲ್ಲಿ ಬರುವ ವಿಜಯನಗರ ಬಡಾವಣೆಯಲ್ಲಿ ಬರುವ ಖಾಲಿ ನಿವೇಶನಗಳ ಪೈಕಿ **1) ಸೈಟ್ ನಂ.6, ಡೋರ್ ನಂ.1303/6, 2) ಸೈಟ್ ನಂ.48, ಡೋರ್ ನಂ: 1303/48, 3) ಸೈಟ್ ನಂ.59, ಡೋರ್ ನಂ:1303/59, 4) ಸೈಟ್ ನಂ.60, ಡೋರ್ ನಂ: 1303/60, 5) ಸೈಟ್ ನಂ.61, ಡೋರ್ ನಂ.1303/61**

ದಿನಾಂಕ : 22-11-2020

ಕಕ್ಷಿದಾರರ ಸಹಿ/- (ಜಿ.ಎಂ. ಸೋಮನಾಥ) (ಜಿ.ಎಂ. ಅಭಿನಂದನ್)

ವಕೀಲರು/- ಟಿ. ಆರ್. ಗುರುಬಸವರಾಜ್



ಬಾಪೂಜಿ ವಿದ್ಯಾಸಂಸ್ಥೆ (ರಿ.) ಸುವರ್ಣ ಮಹೋತ್ಸವ – 1958–2008

## ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜು

ಪಿ.ಜೆ.ಬಡಾವಣೆ, ದಾವಣಗೆರೆ– 577004. ಕರ್ನಾಟಕ–ಭಾರತ.
ಫೋನ್ : (08192) 221210,220955
E-mail : bead_argcdvg@yahoo.co.uk , Web : www.beaargcdvg.org

### ಪ್ರವೇಶ ಪ್ರಕಟಣೆ

2020–21ನೇ ಶೈಕ್ಷಣಿಕ ವರ್ಷಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ರೆಗ್ಯೂಲರ್ ಪ್ರಥಮ ಎಂ.ಕಾಂ, ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರವೇಶ ಪ್ರಾರಂಭವಾಗಿದೆ. ದಾವಣಗೆರೆ ವಿಶ್ವವಿದ್ಯಾನಿಲಯ ನಡೆಸಿದ ಸ್ನಾತಕೋತ್ತರ ಪದವಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

**ಎಂ.ಕಾಂ– ಕೆಲವೇ ಸೀಟುಗಳು ಲಭ್ಯವಿರುತ್ತವೆ**

**ಸ್ನಾತಕೋತ್ತರ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳು**

ನುರಿತ ಮತ್ತು ಅನುಭವಿ ಉಪನ್ಯಾಸಕರಿಂದ ಬೋಧನೆ, ಅತ್ಯುತ್ತಮ ಗ್ರಂಥಾಲಯದ ಸೌಲಭ್ಯ, ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು, ಸುಸಜ್ಜಿತ ಹಾಗೂ ಆಧುನೀಕರಣಗೊಂಡ ಉಪನ್ಯಾಸ ಕೊಠಡಿಗಳು, ವಿಶೇಷ ಉಪನ್ಯಾಸಗಳು, ಶೈಕ್ಷಣಿಕ ಪ್ರವಾಸದ ಸೌಲಭ್ಯಗಳು, ಐಚ್ಛಿಕ ವಿಷಯಗಳ ಸೌಲಭ್ಯ, ಕ್ಯಾಂಪಸ್ ಪ್ಲೇಸ್ ಮೆಂಟ್, ವಿವಿಧ ಬಗೆಯ ವಿದ್ಯಾರ್ಥಿ ವೇತನದ ಸೌಲಭ್ಯ, ಸುಸಜ್ಜಿತ ಕಂಪ್ಯೂಟರ್ ಪ್ರಯೋಗಾಲಯ.

**ಸೂಚನೆ: ಪ್ರವೇಶ ಅರ್ಜಿಗಳನ್ನು ಕಾಲೇಜಿನ ಕಛೇರಿ ಅವಧಿಯಲ್ಲಿ ನೀಡಲಾಗುವುದು**
(ಬೆಳಿಗ್ಗೆ: 10 ರಿಂದ ಸಾಯಂಕಾಲ 5 ರವರೆಗೆ)

**ಹೆಚ್ಚಿನ ಮಾಹಿತಿಗಾಗಿ ಕಛೇರಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.**

**ದೂರವಾಣಿ ಸಂಖ್ಯೆ: 08192-221210**

**ಶ್ರೀ ಶಾಮನೂರು ಶಿವಶಂಕರಪ್ಪ** ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.
**ಪ್ರೊ|| ಕೆ.ಎಸ್.ಬಸವರಾಜಪ್ಪ** ಸಂಯೋಜನಾಧಿಕಾರಿಗಳು ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು, ದಾವಣಗೆರೆ.
**ಶ್ರೀ ಎ.ಜಿ.ಮಂಜುನಾಥ** ಅಧ್ಯಕ್ಷರು, ಕಾಲೇಜು ಆಡಳಿತ ಮಂಡಳಿ, ದಾವಣಗೆರೆ.

## ತುಳಸೀ ಕಲ್ಯಾಣ

ಕಲ್ಯಾಣ ನಮ್ಮ ತುಳಸಮ್ಮನಿಗೆ
ಕಲ್ಯಾಣ ನಮ್ಮಶ್ರೀ ಕೃಷ್ಣಗೆ
ಕಲ್ಯಾಣ ನಡೆದಿದೆ ಪ್ರಕೃತಿ ಪುರುಷರಿಗೆ
ಕಲ್ಯಾಣವಾಗಲಿ ಸರ್ವರಿಗೆ

ಅಮೃತ ಕಲಶದಿಂದ ಉದ್ಭವಿಸಿದಳು
ಅಮೃತದಂತೆ ಪರಮ ಪಾವನಳು
ಅಮೃತೆಯು ಔಷಧೀಯ ಗುಣದವಳು
ಅಮೃತಕನ್ಯೆಯು ವಧುವಾಗಿಹಳು

ಉತ್ಥಾನ ದ್ವಾದಶಿ ಪರ್ವಕಾಲದಲಿ
ನಿತ್ಯ ಸತ್ಯನ ಕರವ ಪಿಡಿದೆಯಮ್ಮ
ಮುತ್ತಿನಂಥ ನಗುವ ಬೀರೊ ತುಳಸಮ್ಮ
ಉತ್ತಮಳೆ ನಾಚುತ್ತ ನಿಂತೆಯಮ್ಮ

ಚೆಂದದಿ ಅಂಗಳವ ಸಜ್ಜು ಮಾಡಿರಲು
ಸುಂದರಿಗೆ ಅಲಂಕರಿಸಿ ಹಸೆಗೆ ಕರೆತರಲು
ಬಂಧುಬಾಂಧವರೆಲ್ಲ ಸೇರಿ ನಲಿದಿರಲು
ಮಂದಗಮನೆ ನಸುನಗುತಿರಲು

ಮೂರ್ಲೋಕದೊಡೆಯ ಅಂತರ್ಪಟದ್ದಿಂದೆ
ತ್ರಿಲೋಕನಳೆದವನು ಕಾದಿದ್ದನು
ಅಲೌಕಿಕಕ್ಷತೆ ತುಳಸಿಗೆ ಹಾಕಿದನು
ನೀಲಮೇಘಶ್ಯಾಮ ನಗುತ್ತಿದ್ದನು

ಮಾಂಗಲ್ಯ ಧಾರಣೆ ಮಾಡಿದನು ಕೇಶವನು
ಮಂಗಳ ದ್ರವ್ಯಗಳ ಹಚ್ಚಿ ಪೊರೆದನು
ಅಂಗನೆಗೆ ಕಾಲುಂಗುರವ ತೊಡಿಸಿದನು
ರಂಗನು ಸಪ್ತಪದಿ ದಾಟಿಸಿದನು

ಏನು ಪುಣ್ಯವೊ ನಮ್ಮಶ್ರೇಷ್ಠ ತುಳಸಮ್ಮನದು
ತಾನು ದಾಮೋದರನ ಸತಿಯಾದಳು
ತನುಮನದಲಿ ಶ್ರೀಕಾಂತನೆ ತುಂಬಿರುವ
ಅನುಪಮ ಭಕ್ತೆ ಹರಿಪ್ರಿಯೆಯಾದಳು

ಲಕ್ಷ್ಮೀ ದೇವಿ ಸನ್ನಿಧಾನ ತುಳಸಿಯಲಿ
ಅಕ್ಷಯ ಫಲಗಳನು ನೀಡುತಿಹಳು
ರಕ್ಷಿಪಳು ಹರಿಪೂಜೆ ನೈವೇದ್ಯಕೊದಗುವಳು
ಸಾಕ್ಷಿಯಾಗಿ ಮನೆಮುಂದೆ ನಿಲ್ಲುವಳು

ಸಿರಿಹರಿಗೆ ಅತಿಪ್ರಿಯಳು ಭಕ್ತಾಗ್ರೇಸಳು
ಪರಿಪೂರ್ಣ ಗುಣದವಳು ಕಾಮಿತದಾತಳು
ನಿರುಪಮ ಭಕ್ತಿಲಿ ಕಲ್ಯಾಣ ಪೇಳ್ದರಿಗೆ
ಪರಮ ಸೌಭಾಗ್ಯಗಳ ನೀಡುತಿಹಳು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ರಾಷ್ಟ್ರಮಟ್ಟದ ಕ್ರಿಕೆಟ್ ಟೂರ್ನಿಗೆ ಇಂದು ಚಾಲನೆ



ದಾವಣಗೆರೆ, ನ.24- ದಿ. ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅವರ ಸವಿ ನೆನಪಿಗಾಗಿ 13ನೇ ಬಾರಿಗೆ ನಗರದಲ್ಲಿ ಎಸ್.ಎಸ್. ಶಾಮನೂರು ಡೈಮಂಡ್, ಶಿವಗಂಗಾ ಕಪ್ ರಾಷ್ಟ್ರಮಟ್ಟದ ಟೆನ್ನಿಸ್ ಬಾಲ್ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಕ್ರಿಕೆಟ್ ಟೂರ್ನಿಗೆ ನಾಳೆ ದಿನಾಂಕ 25ರ ಬುಧವಾರ ಸಂಜೆ 6 ಗಂಟೆಗೆ ಚಾಲನೆ ಸಿಗಲಿದೆ.

ಜಿಲ್ಲಾ ಕ್ರೀಡಾಂಗಣದಲ್ಲಿ 5 ದಿನಗಳ ಕಾಲ ನಡೆಯುವ ಟೂರ್ನಿಗೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಚಾಲನೆ ನೀಡುವರು ಎಂದು ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ರವಿ ಇಳಂಗೋವ್, ದೇವರಮನೆ ಶಿವಕುಮಾರ್, ನಿಟುವಳ್ಳಿ ಶೇಖರಪ್ಪ, ಉದಯ ಶಿವಕುಮಾರ, ರಾಜು ರೆಡ್ಡಿ, ಇಂದ್ರಪ್ಪ, ಮಹಾದೇವ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸೇರಿದಂತೆ ಅತಿಥಿಗಳು ಪಾಲ್ಗೊಳ್ಳುವರು.

ಅಂದಾಜು 30 ಲಕ್ಷ ರೂ. ವೆಚ್ಚದ ಟೂರ್ನಿಯಲ್ಲಿ ಕೇರಳ, ಚೆನ್ನೈ, ಗೋವಾ, ಮಹಾರಾಷ್ಟ್ರ, ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ತುಮಕೂರು, ಶಿವಮೊಗ್ಗ, ಹುಬ್ಬಳ್ಳಿ ಸೇರಿದಂತೆ ವಿವಿಧೆಡೆಗಳಿಂದ ಒಟ್ಟು 24 ಆಹ್ವಾನಿತ ತಂಡಗಳು ಭಾಗವಹಿಸಲಿವೆ. 320 ಆಟಗಾರರಿಗೆ ಉಚಿತವಾಗಿ ಊಟ, ವಸತಿ ಮಾಡಲಾಗುವುದು. ವಿಜೇತರಿಗೆ ಪ್ರಥಮ ಬಹುಮಾನ 3,55,555, ದ್ವಿತೀಯ ಬಹುಮಾನ 2,25,555 ರೂ. ಮತ್ತು ತೃತೀಯ ಬಹುಮಾನವಾಗಿ 1,25,555 ರೂ. ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು. ವೈಯಕ್ತಿಕ ಉತ್ತಮ ಆಲ್ ರೌಂಡರ್‌ಗೆ ಹೀರೊ ಹೊಂಡ ಬೈಕ್ ನೀಡಲಾಗುವುದು. ಪಂದ್ಯ ವೀಕ್ಷಿಸಲು ಕ್ರೀಡಾಭಿಮಾನಿಗಳಿಗೆ ಗ್ಯಾಲರಿ ವ್ಯವಸ್ಥೆ ಮಾಡಿದ್ದು, ಮೂರನೇ ತೀರ್ಪುಗಾರರ ವ್ಯವಸ್ಥೆ ಇರುತ್ತದೆ ಎಂದು ವಿವರಿಸಿದರು.

ಎಲ್ಲಾ ಪಂದ್ಯಾವಳಿಗಳೂ ಯೂಟ್ಯೂಬ್‌ನಲ್ಲಿ ನೇರ ಪ್ರಸಾರಗೊಳ್ಳಲಿವೆ. ಕಳೆದ ಬಾರಿ ಸುಮಾರು 2 ಲಕ್ಷ ಜನರು ಯೂಟ್ಯೂಬ್‌ನಲ್ಲಿ ಪಂದ್ಯಾವಳಿ ವೀಕ್ಷಿಸಿದ್ದು, ಈ ಬಾರಿ 3 ಲಕ್ಷಕ್ಕೂ ಅಧಿಕ ಜನ ವೀಕ್ಷಿಸುವ ನಿರೀಕ್ಷೆ ಇದೆ. ವಿಶೇಷವಾಗಿ 8 ಅಫಿಷಿಯಲ್ ಕಪ್ ಪಂದ್ಯಾವಳಿ ನಡೆಯಲಿದ್ದು, ಪೊಲೀಸ್, ಪತ್ರಕರ್ತರು, ವರ್ತಕರು, ಪಾಲಿಕೆ ಸದಸ್ಯರು, ವಕೀಲರ ತಂಡ ಭಾಗವಹಿಸಲಿವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಯಪ್ರಕಾಶ ಗೌಡ, ಶಿವಗಂಗಾ ಶ್ರೀನಿವಾಸ, ರಂಗಸ್ವಾಮಿ, ಶಿವಕುಮಾರ, ಮಧು, ರಾಘವೇಂದ್ರ, ಯೋಗೀಶ್ ಸೇರಿದಂತೆ ಇತರರು ಇದ್ದರು.

# ಔಷಧ ಮಾರಾಟ ಪ್ರತಿನಿಧಿಗಳಿಂದ ಸಹಿ ಸಂಗ್ರಹ



ದಾವಣಗೆರೆ, ನ.24- ನಾಡಿದ್ದು ದಿನಾಂಕ 26ರ ಗುರುವಾರ ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಔಷಧ ಮಾರಾಟ ಪ್ರತಿನಿಧಿಗಳ ಸಂಘದ ವತಿಯಿಂದ ನಗರದ ಗಡಿಯಾರದ ಕಂಬ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕರಿಂದ ಸಹಿ ಸಂಗ್ರಹ ಅಭಿಯಾನದ ಮೂಲಕ ಜನಜಾಗೃತಿ ಮೂಡಿಸಿ, ಮುಷ್ಕರಕ್ಕೆ ಸಾವಿರಾರು ಜನರ ಬೆಂಬಲ ಪಡೆಯಲಾಯಿತು.

**ಅಖಿಲ ಭಾರತ ಮುಷ್ಕರ ಹಿನ್ನೆಲೆ**

ಔಷಧಿಗಳ ಬೆಲೆಗಳನ್ನು ಇಳಿಸಬೇಕು ಮತ್ತು ಔಷಧಿಗಳ ಮೇಲೆ ಜಿಎಸ್ ಟಿ ಹೇರಬಾರದು. ಸಾರ್ವಜನಿಕ ಔಷಧಿ ಕ್ಷೇತ್ರವನ್ನು ಬಲಪಡಿಸಿ, ಅಗತ್ಯ ಔಷಧಿಗಳ ನಿರಂತರ ಪೂರೈಕೆಯನ್ನು ಖಾತ್ರಿಪಡಿಸಿ, ಔಷಧಗಳು ಮತ್ತು ಲಸಿಕೆಗಳು ಕೈಗೆಟಕುವ ಬೆಲೆಯಲ್ಲಿ ದೊರೆಯುವಂತಾಗಬೇಕು. ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗಳ ಖಾಸಗೀಕರಣ ನಿಲ್ಲಿಸಿ, ಕೇಂದ್ರ ಸರ್ಕಾರವು ಯುನಿವರ್ಸಲ್ ಕೋಡ್ ಆಫ್ ಫಾರ್ಮಾಸ್ಯೂಟಿಕಲ್ ಪ್ರಾಕ್ಟೀಸ್ ಅನ್ನು ಜಾರಿಗೊಳಿಸಿ ಔಷಧ ಮಾರುಕಟ್ಟೆಯಲ್ಲಿಯ ಭ್ರಷ್ಟಾಚಾರವನ್ನು ನಿಯಂತ್ರಿಸಬೇಕು.

ಔಷಧಿಗಳ ಮತ್ತು ವೈದ್ಯ ಕೀಯ ಸಾಧನಗಳ ಆನ್‌ಲೈನ್ ಪ್ರಚಾರ ಹಾಗೂ ಆನ್‌ಲೈನ್ ವ್ಯಾಪಾರ ನಿಲ್ಲಿಸಬೇಕು. ಮಾರಾಟ ಪ್ರತಿನಿಧಿಗಳ ರಕ್ಷಣೆಗೆ ಇರುವ ಎಸ್ ಪಿಇ ಕಾಯಿದೆ ಹಾಗೂ ಅದರ ನಿಯಮಾವಳಿ ರಕ್ಷಿಸಬೇಕು ಎಂದು ಸಂಘದ ರಾಜ್ಯ ಜಂಟಿ ಪ್ರಧಾನ ಕಾರ್ಯದರ್ಶಿ ಕೆ.ಹೆಚ್. ಆನಂದರಾಜು ಆಗ್ರಹಿಸಿದರು.

ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಕುಟುಂಬದವರ ಬ್ಯಾಂಕ್ ಖಾತೆಗೆ ಮಾಸಿಕ 7500 ರೂ. ಜಮಾ ಮಾಡಬೇಕು. ಅಗತ್ಯವಿರುವ ಪ್ರತೀ ಕುಟುಂಬದ ಸದಸ್ಯರಿಗೆ ತಿಂಗಳಿಗೆ 10 ಕಿಲೋ ಆಹಾರ ಧಾನ್ಯಗಳನ್ನು ವಿತರಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು 200 ದಿನಗಳಿಗೆ ಹೆಚ್ಚಿಸಿ, ಕನಿಷ್ಟ 600 ರೂ. ದಿನಗೂಲಿ ಕೊಡಬೇಕು ಹಾಗೂ ನಗರ ಪ್ರದೇಶಕ್ಕೂ ವಿಸ್ತರಿಸಬೇಕು. ರೈತ ವಿರೋಧಿ ಕಾನೂನುಗಳನ್ನು ಮತ್ತು ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು.

ಶಿಕ್ಷಣ, ಆರೋಗ್ಯ, ರೈಲು, ರಸ್ತೆ, ವಿದ್ಯುತ್, ದೂರ ಸಂಪರ್ಕ, ವಿಮಾ, ಬ್ಯಾಂಕ್, ರಕ್ಷಣಾ ಕ್ಷೇತ್ರಗಳ ಖಾಸಗೀಕರಣ ತಡೆಯಬೇಕು. ಸರ್ಕಾರಿ ಹಾಗೂ ಸಾರ್ವತ್ರಿಕ ಕ್ಷೇತ್ರಗಳಲ್ಲಿರುವ ನೌಕರರಿಗೆ ಬಲವಂತದ ನಿವೃತ್ತಿ ಪಡೆಯುವ ಸುತ್ತೋಲೆಯನ್ನು ಹಿಂಪಡೆಯ ಬೇಕು. ಎನ್ ಪಿಎಸ್ ರದ್ದುಗೊಳಿಸಿ, ಹಳೆಯ ಪಿಂಚಣಿ ವ್ಯವಸ್ಥೆಯನ್ನೇ ಮುಂದುವರೆಸಬೇಕು. ಇಪಿಎಸ್-95 ಸರಿಪಡಿಸಿ ಪ್ರತಿಯೊಬ್ಬರಿಗೂ ಪಿಂಚಣಿ ಕೊಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಘಟಕದ ಕಾರ್ಯದರ್ಶಿ ಎಂ. ನವೀನಕುಮಾರ್, ಅಧ್ಯಕ್ಷ ಗಿರೀಶ್, ಖಜಾಂಚಿಗಳಾದ ವೆಂಕಟೇಶ್, ಮಹಾವೀರ, ಲೋಹಿತಾಶ್ವ, ಶ್ರೀಧರ, ಪ್ರಶಾಂತ ಸೇರಿದಂತೆ ಇತರರು ಇದ್ದರು.

## ಮರಾಠ ಸಮುದಾಯ ನಿಗಮಕ್ಕೆ ವಿರೋಧ ಸಲ್ಲದು



ದಾವಣಗೆರೆ, ನ.24- ಸರ್ಕಾರವು ಮರಾಠಿಗರ ಅಭಿವೃದ್ಧಿಗೆ ಸಮುದಾಯ ನಿಗಮವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ನಿಗಮಕ್ಕೆ ವಿರೋಧ ಸಲ್ಲದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಸ್. ಹಾಲೇಶಪ್ಪ ಹೇಳಿದ್ದಾರೆ.

ಬೆಳಗಾವಿ ಗಡಿಭಾಗದಲ್ಲಿ ಕೆಲ ಪುಂಡರು ಮಹಾರಾಷ್ಟ್ರದ ರಾಜಕಾರಣಿಗಳ ಕುಮ್ಮಕ್ಕಿನಿಂದ ಕಿರಿಕ್ ಮಾಡುತ್ತಿದ್ದಾರೆ. ಇವರಿಗೆ ತಕ್ಕ ಶಾಸ್ತಿ ಮಾಡಬೇಕು. ಈ ಭಾಗದಲ್ಲಿ ಬಿಟ್ಟು ಬೇರೆಲ್ಲಾ ಭಾಗದಲ್ಲಿ ಮರಾಠಿಗರು ಕನ್ನಡಿಗರೊಂದಿಗೆ ಕನ್ನಡಿಗರಾಗಿಯೇ ಜೀವನ ನಡೆಸುತ್ತಿದ್ದಾರೆ. ಹೀಗಿರುವಾಗ ಯಾರೋ ಮಾಡಿದ ತಪ್ಪಿಗೆ ಇಡೀ ಮರಾಠಿಗರನ್ನೇ ವಿರೋಧಿಸುವುದು ಸರಿಯಲ್ಲ ಎನ್ನುವುದು ನನ್ನ ಭಾವನೆ ಎಂದಿದ್ದಾರೆ.

## ನಗರದಲ್ಲಿ ಇಂದು ಪರಿಸರ ರಕ್ಷಣಾ ದಿನಾಚರಣೆ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಗ್ರೀನ್ ನೇಷನ್, ಪರಿಸರ ಸಂರಕ್ಷಣಾ ವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹದ ಅಂಗವಾಗಿ ಪರಿಸರ ರಕ್ಷಣಾ ದಿನ ಕಾರ್ಯಕ್ರಮವು ಇಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಚೇರಿಯಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಾಬಪ್ಪ ಉದ್ಘಾಟಿಸುವರು. ವಕೀಲರ ಸಂಘದ ಅಧ್ಯಕ್ಷ ಎನ್.ಟಿ. ಮಂಜುನಾಥ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಗ್ರೀನ್ ನೇಷನ್ ಅಧ್ಯಕ್ಷ ತಾರೀಕ್ ನಕಾಶ್, ಪರಿಸರ ಸಂರಕ್ಷಣಾ ವೇದಿಕೆಯ ಉಪಾಧ್ಯಕ್ಷ ಆರ್.ಬಿ.ಹನುಮಂತಪ್ಪ, ವಕೀಲರಾದ ಅನೀಸ್ ಪಾಶ, ಆಂಜನೇಯ ಗುರೂಜಿ ಪಾಲ್ಗೊಳ್ಳುವರು. ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಹೆಚ್. ಅರುಣ್ ಕುಮಾರ್ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳುವರು.

## ಸಿಟಿ ಕೋ-ಆಪ್. ಬ್ಯಾಂಕ್‌ನ ವಾರ್ಷಿಕ ಮಹಾಸಭೆ



ದಾವಣಗೆರೆ, ನ.24- ನಗರದ ಸಿಟಿ ಕೋ-ಆಪರೇಟಿವ್ ಬ್ಯಾಂಕ್‌ನ 28ನೇ ವಾರ್ಷಿಕ ಮಹಾಸಭೆಯು ಶಿವಾಚಾರ್ಯ ನಿಕೇತನ ಹಿರೇಮಠದಲ್ಲಿ ನಡೆಯಿತು.

ಬ್ಯಾಂಕ್ ಅಧ್ಯಕ್ಷ ಎನ್.ಜೆ. ಗುರುಸಿದ್ಧಯ್ಯ ಸ್ವಾಗತಿಸಿದರು. ಸದಸ್ಯೆ ಜಿ.ಜೆ. ಜ್ಯೋತಿ ಪ್ರಾರ್ಥಿಸಿದರು. ಬ್ಯಾಂಕಿನ ವ್ಯವಸ್ಥಾಪಕ ಎನ್. ಮಂಜುನಾಥ್ ಹಿಂದಿನ ಮಹಾಸಭೆಯ ನಿರ್ಣಯಗಳನ್ನು ಓದಿದರು. ಹಿರಿಯ ನಿರ್ದೇಶಕ ಬಿ.ಹೆಚ್. ಪರಶುರಾಮಪ್ಪ, ಆಸ್ತಿ-ಜವಾಬ್ದಾರಿ ತಃಖ್ತೆ ಮಂಡಿಸಿದರು. ನಿರ್ದೇಶಕ ನಿರಂಜನ ನಿಶಾನಿಮಠ್ ಈ ಸಾಲಿನ ಆಯವ್ಯಯ ಮಂಡಿಸಿದರು.

2020-21ನೇ ಸಾಲಿನ ಬ್ಯಾಂಕಿನ ಲೆಕ್ಕ ಪರಿಶೋಧನೆಯನ್ನು ಉಮಾಪತಯ್ಯ ಅವರಿಂದ ಮಾಡಿಸಲು ಸಭೆಯಲ್ಲಿ ಒಪ್ಪಿಗೆ ಪಡೆಯಲಾಯಿತು. ಇದೇ ವೇಳೆ ಬ್ಯಾಂಕಿನ ಸದಸ್ಯರು ಮರಣ ಹೊಂದಿದಾಗ ಅವರ ನಾಮಿನಿಗೆ 5,000 ಮರಣ ಪರಿಹಾರ ನೀಡುವ ಕುರಿತು ತಿಳಿಸಲಾಯಿತು. ನಿರ್ದೇಶಕ ಎನ್.ವಿ. ಬಂಡಿವಾಡ ವಂದಿಸಿದರು.

## ಕೊನೆಗೂ ಅಧಿಕಾರ ಬಿಟ್ಟ ಟ್ರಂಪ್

### ಬಿಡೆನ್‌ಗೆ ಅಧಿಕಾರ ಹಸ್ತಾಂತರಿಸುವ ಪ್ರಕ್ರಿಯೆಗೆ ಚಾಲನೆ



ವಾಷಿಂಗ್ಟನ್, ನ. 24 - ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾದ ಜೋ ಬಿಡೆನ್ ಅವರಿಗೆ ಅಧಿಕಾರ ಹಸ್ತಾಂತರಿಸಲು ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊನೆಗೂ ಸಮ್ಮತಿಸಿದ್ದಾರೆ. ಇದರಿಂದಾಗಿ ವಾರಗಳ ವಿಳಂಬದ ನಂತರ ಸುಗಮವಾಗಿ ಅಧಿಕಾರ ಹಸ್ತಾಂತರ ಸಾಧ್ಯವಾಗಲಿದೆ.

ರಿಪಬ್ಲಿಕನ್ ಪಕ್ಷದ ಟ್ರಂಪ್, ಚುನಾವಣೆಯಲ್ಲಿ ಸೋಲಾಗಿರುವುದನ್ನು ಇನ್ನೂ ಒಪ್ಪಿಕೊಂಡಿಲ್ಲ. ಫಲಿತಾಂಶದ ವಿರುದ್ಧ ಹೋರಾಟ ನಡೆಸಿ ಗೆಲ್ಲುವುದಾಗಿ ಹೇಳಿದ್ದಾರೆ.

ಹಲವು ಪ್ರಮುಖ ರಾಜ್ಯಗಳಲ್ಲಿ ಚುನಾವಣೆ ವಿರುದ್ಧ ಟ್ರಂಪ್ ಮೊಕದ್ದಮೆಗಳನ್ನು ಹೂಡಿದ್ದಾರೆ. ಆದರೆ, ಚುನಾವಣಾ ಅಕ್ರಮದ ಬಗ್ಗೆ ಅವರು ಇದುವರೆಗೂ ಯಾವುದೇ ಸಾಕ್ಷಿಗಳನ್ನು ಸಲ್ಲಿಸಿಲ್ಲ. ಹಲವಾರು ಮೊಕದ್ದಮೆಗಳನ್ನು ನ್ಯಾಯಾಲಯಗಳು ಈಗಾಗಲೇ ತಳ್ಳಿ ಹಾಕಿವೆ.

ಸೋಮವಾರ ಬಿಡೆನ್‌ಗೆ ಪತ್ರ ಬರೆದಿರುವ ಆಡಳಿತ ಪ್ರಧಾನ ಸೇವೆಗಳ ಆಡಳಿತಗಾರ್ತಿಯಾದ ಎಮಿಲಿ ಮರ್ಫಿ, ಟ್ರಂಪ್ ಆಡಳಿತ ಔಪಚಾರಿಕವಾಗಿ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ಸಿದ್ಧವಿದೆ ಎಂದು ತಿಳಿಸಿದ್ದಾರೆ.

ಮರ್ಫಿ ಅವರನ್ನು ಟ್ರಂಪ್ ನೇಮಿಸಿರುವುದು ಸೋಲನ್ನು ಒಪ್ಪಿಕೊಳ್ಳುವತ್ತ ಮೊದಲ ಹೆಜ್ಜೆಯಾಗಿದೆ. ಬಿಡೆನ್ ವಿಜೇತರೆಂದು ಘೋಷಣೆಯಾದ ಎರಡು ವಾರಗಳ ನಂತರ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಟ್ವಿಟ್ಟರ್ ಮೂಲಕ ಹೇಳಿಕೆ ನೀಡಿರುವ ಮರ್ಫಿ, ದೇಶದ ಹಿತಕ್ಕಾಗಿ ಅಧಿಕಾರ ಹಸ್ತಾಂತರ ಪ್ರಕ್ರಿಯೆ ಆರಂಭಿಸಲು ತಮಗೆ ತಿಳಿಸಲಾಗಿದೆ ಎಂದಿದ್ದಾರೆ. ಅಧಿಕಾರ ಹಸ್ತಾಂತರ ಪ್ರಕ್ರಿಯೆಗಾಗಿ 6.3 ದಶಲಕ್ಷ ಡಾಲರ್‌ಗಳನ್ನು ಬಿಡುಗಡೆ ಮಾಡುವುದಾಗಿ ಮರ್ಫಿ ತಿಳಿಸಿದ್ದಾರೆ. ಬಿಡೆನ್ ಅವರು ಜನವರಿ 20, 2021ರಂದು ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಚುನಾಯಿತ ಅಧ್ಯಕ್ಷ ಅಧಿಕಾರ ಪಡೆಯಲು ಅಗತ್ಯವಾದ ಅನುದಾನ ಬಿಡುಗಡೆ ಮಾಡದ ಕಾರಣಕ್ಕಾಗಿ ಮರ್ಫಿ ಈ ಹಿಂದೆ ಡೆಮಾಕ್ರಾಟ್ ಹಾಗೂ ರಿಪಬ್ಲಿಕನ್ ಎರಡೂ ಪಕ್ಷಗಳಿಂದ ಟೀಕೆಗೆ ಗುರಿಯಾಗಿದ್ದರು.

## ಜಿಲ್ಲಾಡಳಿತದಿಂದ 34 ಜನರಿಗೆ ರಾಜ್ಯೋತ್ಸವ ಪ್ರಶಸ್ತಿ



ದಾವಣಗೆರೆ, ನ.24- ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಜಿಲ್ಲೆಯಲ್ಲಿ ನಾಡು-ನುಡಿಗಾಗಿ ಸೇವೆ ಸಲ್ಲಿಸಿದ ಗಣ್ಯರಿಗೆ ಜಿಲ್ಲಾಡಳಿತ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಿದೆ. ನಾಳೆ ದಿನಾಂಕ 25ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿನ ತುಂಗಭದ್ರಾ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ನಗರ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳ 34 ಜನರು ಜಿಲ್ಲಾಡಳಿತ ಕೊಡುವ ಮಾಡುವ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಂಗೀತ- ಶ್ರೀಮತಿ ಶ್ಯಾಮಲಾಬಾಯಿ, ಜಾನಪದ (ಡೊಳ್ಳು ಕುಣಿತ)- ಮಂಜಪ್ಪ ಬಲ್ಲೂರು, ಜಾನಪದ (ವೀರಗಾಸೆ) ನೃತ್ಯ- ಶ್ರೀಮತಿ ಮಾಧವಿ ಡಿ.ಕೆ., ಸಮಾಜ ಸೇವೆ ಎಂ.ಸಿ. ಚಂದ್ರಪ್ಪ, ವಾಸುದೇವ ರಾಯಕರ್, ಸಂತೋಷ್ ಕುಮಾರ್ ಎಂ., ಚಿತ್ರಕಲೆ- ಸಂತೋಷ್ ಕುಮಾರ್ ಕುಲ್ಕರ್ಣಿ, ಸಾಹಿತ್ಯ- ಜಿ.ಹೆಚ್. ರಾಜ ಶೇಖರ್ ಗುಂಡಗಟ್ಟಿ, ಶ್ರೀಮತಿ ಕೆ.ಜಿ. ಸರೋಜಾ ನಾಗರಾಜ್, ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್., ಸಂಘ-ಸಂಸ್ಥೆ- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಪ್ರೇರಣಾ ಮಹಿಳಾ ಉದ್ಯಮಿಗಳ ಸಂಘ, ಅಕ್ಕಮಹಾದೇವಿ ಮಹಿಳಾ ಸೇವಾ ಸಂಸ್ಥೆ. ಕೃಷಿ - ಆಂಜನೇಯ ಅಂದನೂರು ಕುಂಬಳೂರು, ರಾಘವ ಮಲ್ಲನಾಯಕನಹಳ್ಳಿ. ಕ್ರೀಡೆ- ಮಂಜು ಮೊಘವೀರ್, ಕೃಷ್ಣ ಎಸ್., ಮಂಜಪ್ಪ. ಸಂಗೀತ- ಬಿ.ಪಿ. ಯಮನೂರು ಸಾಹೇಬ್, ಜೆ.ಎಂ. ಚನ್ನರಾಜು, ಶ್ರೀಮತಿ ಸಂಗೀತ ರಾಘವೇಂದ್ರ. ರಂಗಭೂಮಿ- ಶ್ರೀಮತಿ ಬಿ. ಉಮಾಶ್ರೀ, ಕೆ.ವೀರಯ್ಯಸ್ವಾಮಿ, ತಿಪ್ಪೇಶ್ ರಾವ್ ಚವ್ಹಾಣ್, ಎಸ್.ಚಂದ್ರಪ್ಪ. ಶಿಕ್ಷಣ- ಮುರುಗೇಂದ್ರಪ್ಪ, ಕನ್ನಡಪರ ಹೋರಾಟ- ಅಮ್ಜದ್ ಅಲಿ. ಪತ್ರಿಕೆ- ಮಂಜುನಾಥ ಕಾಡಜ್ಜಿ. ದೂರದರ್ಶನ- ಹೆಚ್.ಎಂ.ಪಿ. ಕುಮಾರ್. ಛಾಯಾಗ್ರಾಹಕ- ವಿಜಯ್ ಜಾಧವ್. ಸಂಕೀರ್ಣ-ಉಜ್ಜಿನಪ್ಪ, ಜಾನಪದ ಸಂಗೀತ- ಶ್ರೀಮತಿ ರುದ್ರಾಕ್ಷಿ ಬಾಯಿ ಸಿ.ಕೆ., ಸಮಾಜ ಸೇವೆ - ರಮಣ ಲಾಲ್ ಪಿ. ಸಂಘವಿ ಅವರುಗಳು ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಅಖಿಲ ಭಾರತ ಮುಷ್ಕರ : ಎಐಎಂಎಸ್‌ಎಸ್ ಬೆಂಬಲ

ದಾವಣಗೆರೆ, ನ.24- ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಜಿಲ್ಲಾ ಸಮಿತಿಯು ನ. 26ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ ಎಂದು ಕಾರ್ಯದರ್ಶಿ ಭಾರತಿ ತಿಳಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತರುತ್ತಿರುವ ಕಾರ್ಮಿಕ ವಿರೋಧಿ ನೀತಿಗಳು, ಕೃಷಿ ಕಾಯ್ದೆಗಳ ತಿದ್ದುಪಡಿ, ರೈಲ್ವೆ ಹಾಗೂ ಇನ್ನಿತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಖಾಸಗೀಕರಣ, ರಾಷ್ಟ್ರೀಯ ಶಿಕ್ಷಣ ನೀತಿ 2020 ಮುಂತಾದ ಹಲವಾರು ಜನವಿರೋಧಿ ನೀತಿಗಳನ್ನು ದೊಡ್ಡ ದೊಡ್ಡ ಉದ್ಯಮಪತಿಗಳಿಗೆ ಲಾಭ ಮಾಡಿಕೊಡುವ ದುರುದ್ದೇಶದಿಂದ ತರಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ 30x40 ಪಶ್ಚಿಮ 30x40 ಪೂರ್ವ, ಕುವೆಂಪು ಬಡಾವಣೆ 30x50, ಉತ್ತರ 40x60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ 30x50 ಪಶ್ಚಿಮ, 35x60 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ 30x40 ಉತ್ತರ ಕೊಡುವುದಕ್ಕು, ತೆಗೆದುಕೊಳ್ಳುವುದಕ್ಕು ಸಂಪರ್ಕಿಸಿ :
95911 60520
99457 02495

**ಸೈಟ್, ಮನೆ ಮಾರಾಟಕ್ಕೆ, ಖರೀದಿಗೆ**
ರಂಗನಾಥ ಬಡಾವಣೆ ಮನೆ, ದೇವರಾಜ ಅರಸ್ 30x44, 40x60, 60x80 (ಕಮರ್ಷಿಯಲ್) ರಶ್ಮಿ ಸ್ಕೂಲ್ 30x40, 30x60, ಸಿದ್ದವೀರಪ್ಪ ಆಂಜನೇಯ ಬಡಾವಣೆ ಸೈಟ್ & ಮನೆ, ಎಂಸಿಸಿ 'ಎ' ಬ್ಲಾಕ್ ಸೈಟ್ & ಮನೆ, ಡಾಲರ್ಸ್ ಕಾಲೋನಿ, ಶಿವ ಪಾರ್ವತಿ 30x40, 30x50,
76768 57676

**ಮನೆ, ಸೈಟು ಖರೀದಿಗೆ ಬೇಕಿದೆ**
ಕಿರಣ್ ಬೂಸ್ನೂರ್ (ಏಜೆಂಟ್)
ಆಫೀಸ್ : ಲ್ಯಾಂಡ್ ಲಿಂಕ್ಸ್, ರಿಯಲ್ ಎಸ್ಟೇಟ್ ಏಜೆನ್ಸಿ ನಯನಾ'ಸ್ ಕಾಂಪ್ಲೆಕ್ಸ್, ಬಿಐಇಟಿ ಕಾಲೇಜ್ ರೋಡ್, ಬಾಪೂಜಿ ಬ್ಯಾಂಕ್ ಹೇಮಾವತಿ ಹಾಸ್ಟೆಲ್ ಹತ್ತಿರ.
97315-63409, 98440-63409
(ರಿಯಲ್ ಎಸ್ಟೇಟ್ ಏಜೆಂಟರಿಗೂ ಅವಕಾಶವಿದೆ)

**ಸೈಟು ಮಾರಾಟಕ್ಕಿದೆ**
ಶಿವ ಪಾರ್ವತಿ ಬಡಾವಣೆ, ವಿನಾಯಕ ಬಡಾವಣೆ, ಬನಶಂಕರಿ ಬಡಾವಣೆ, 30×40 ಪೂರ್ವ, 30×50 ಪೂರ್ವ, 40×60 ಪೂರ್ವ, 30×50 ಪಶ್ಚಿಮ, ಶಿವಪಾರ್ವತಿ ಬಡಾವಣೆಯಲ್ಲಿ 24 ಸಾವಿರ ಅಡಿ ಮಾರಾಟಕ್ಕಿದೆ (ಏಕನಿವೇಶನ)
ಶಾಮನೂರು ಧನ್ಯಕುಮಾರ್ 9741562589
ಸ್ವಾಮಿ, ಏಜೆಂಟ್ 97421 44715

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50 North, ಮನೆ, 40x50, 40x50, North ಸೈಟ್ ಅಕ್ಕ-ಪಕ್ಕ 30x40 South, 40x60 East, 50x80 South
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ನಿವೇಶನ ಮಾರಾಟಕ್ಕಿದೆ**
30×40 ಅಳತೆವುಳ್ಳ ಖಾಲಿ ನಿವೇಶನ ಮಾರಾಟಕ್ಕಿದೆ. ಎಸ್.ಎಸ್. ಲೇ ಔಟ್, 'ಬಿ' ಬ್ಲಾಕ್, 4ನೇ ಮುಖ್ಯರಸ್ತೆ, 3ನೇ ಕ್ರಾಸ್, ಇಂಡೋರ್ ಸ್ಟೇಡಿಯಂ ಹತ್ತಿರ,
99720 13143, 97417 03334

**ಸೈಟ್‌ಗಳು ಮಾರಾಟಕ್ಕಿವೆ**
ಮನೆಗಳು ಬಾಡಿಗೆಗೆ/ಲೀಜಿಗೆ ಇದೆ, ವಾಜಪೇಯಿ ಲೇಔಟ್‌ನಲ್ಲಿ ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x56 ಪೂರ್ವ, 30x40 ಪಶ್ಚಿಮ, ಡಾಲರ್ಸ್ ಕಾಲೋನಿಯಲ್ಲಿ 30x55 ಉತ್ತರ ಪೂರ್ವ ಕಾರ್ನರ್.
ಸೈಟ್‌ಗಳನ್ನು ಕೊಳ್ಳುವವರು, ಮಾರುವವರು ಸಂಪರ್ಕಿಸಿ:
ಸ್ವಾಮಿ ಏಜೆಂಟ್ ವಿದ್ಯಾನಗರ 97421 44715
ಶಾಮನೂರು ನಾಗರಾಜ್ 98448 83303

**ಮನೆ ಬಾಡಿಗೆಗೆ ಇದೆ**
ಸಿಂಗಲ್ ಬೆಡ್ ರೂಮ್ ಮನೆ, 1ನೇ ಮೇನ್, 1ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, ಹದಡಿ ರೋಡ್, ಮೋರ್ ಶಾಪ್ ಪಕ್ಕ, ದಾವಣಗೆರೆ.
94816 70519
76191 23623

**ಬಾಡಿಗೆಗೆ ಇದೆ**
Real Estate Agent
3 BHK ಆಂಜನೇಯ ಬಡಾವಣೆ
3 BHK SS Layout
3 BHK Shivakumara swamy Badavane
2 BHK ನಿಜಲಿಂಗಪ್ಪ ಲೇಔಟ್
1 BHK ಆಂಜನೇಯ ಬಡಾವಣೆ
2 BHK ಸಿದ್ದವೀರಪ್ಪ ಲೇಔಟ್
78927 93994

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಅಮರಾವತಿ ಹಾಲಪ್ಪ
98454 84076

**ಸೈಟ್‌ಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ, ನಿಜಲಿಂಗಪ್ಪ ಬಡಾವಣೆಯಲ್ಲಿ 30x50 South, 40x60 South, 35x60 North west corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಲೀಜಿಗೆ ಇದೆ**
ಡಬಲ್ ಬೆಡ್ ರೂಂ, ನೆಲಮಹಡಿ ನದಿ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯ ಇದೆ. ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ, ಕೆ.ಇ.ಬಿ. ಕಾಂಪೌಂಡ್ ಹಿಂಭಾಗ, ದಾವಣಗೆರೆ
ಮೊ: 96111 21308
90087 05194

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ**
5 FMCG (Food) ಕಂಪನಿಗಳಿಗೆ ಕರ್ನಾಟಕದಾದ್ಯಂತ ಡಿಸ್ಟ್ರಿಬ್ಯೂಟರ್/ಸಬ್-ಡಿಸ್ಟ್ರಿಬ್ಯೂಟರ್, ಸ್ಟಾಕಿಸ್ಟ್ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ
JD Consultancy Services
98459 45289
ಸಂಪರ್ಕಿಸುವ ಸಮಯ: ಬೆ:11.30 ರಿಂದ ಸಂ :5.30 ರವರೆಗೆ

**ಬಾಡಿಗೆ ಇದೆ**
ಎಪಿಎಂಸಿ ಯಾರ್ಡ್ 'ಎ' ಬ್ಲಾಕ್ ಪೊಲೀಸ್ ಠಾಣೆ ಹತ್ತಿರ ಬ್ಲಾಕ್‌ನಲ್ಲಿ 4900 Sq + ಆಫೀಸ್+ಗೋಡೌನ್ ಬಾಡಿಗೆಗೆ ಇದೆ ವಿಚಾರಿಸಿ.
ಬಿ.ಎಸ್. ಪ್ರಕಾಶ್
94481 15256

**ಉಚಿತ 50 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 50 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
ಸಂಪರ್ಕಿಸಿ :
9141874551, 9480564551

**Wanted**
Delivery Boys (SSLC)
Ape Auto Driver with valid License
A.K. TRADERS
Ashirwad, Bapuji Hospital Road, Davangere 577004

**ವಾಣಿಜ್ಯ ಮಳಿಗ ಬಾಡಿಗೆಗೆ**
1200 ಅಡಿ ವಿಸ್ತೀರ್ಣವುಳ್ಳ ವಾಣಿಜ್ಯ ಜಾಗ ಬಾಡಿಗೆಗಿದೆ.
ವಿಳಾಸ: ಸ್ಟೇಡಿಯಂ ರಸ್ತೆ, ಆರೈಕೆ ಹಾಸ್ಪಿಟಲ್ ಹತ್ತಿರ, ದಾವಣಗೆರೆ.
96868 50851
94804 99990

**ಮನೆ ಬಾಡಿಗೆಗೆ ಇದೆ**
ನಲ್ಲಿ ನೀರು ಮತ್ತು ಬೋರ್‌ವೆಲ್ ನೀರು ಸೌಲಭ್ಯ ಹೊಂದಿರುವ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. 1ನೇ ಕ್ರಾಸ್, ರೈತರ ಬೀದಿ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆ, (ಜೆ. ನಾಗೇಶಪ್ಪರ ಮನೆ ಹಿಂಭಾಗ) ದಾವಣಗೆರೆ.
97392 57885, 78992 99012

**ವಧು ಬೇಕಾಗಿದೆ**
ವಯಸ್ಸು: 34, ಎತ್ತರ: 5.7 ಶಿಕ್ಷಣ : ಬಿ.ಎ. ಬಿ.ಇಡಿ., ಸರ್ಕಾರಿ ಕೆಲಸದಲ್ಲಿರುವ ಯಾವುದೇ ಜಾತಿಯ ಸುಂದರವಾದ ಹಿಂದೂ ಯಾದವ (ಗೊಲ್ಲ) ವರನಿಗೆ ವಧು ಬೇಕು (SC-ST ಹೊರತುಪಡಿಸಿ) ವಧುವಿಗೆ ಮುಂದಿನ ವಿದ್ಯಾಭ್ಯಾಸ ಮಾಡಲು ಸಹಾಯ ಮಾಡಲಾಗುವುದು, ಸರಳ ಮತ್ತು ಶೀಘ್ರ ವಿವಾಹಕ್ಕೆ ಆಸಕ್ತಿ ಇದ್ದವರು ಮಾತ್ರ ಸಂಪರ್ಕಿಸಿ:
99456 82243

**ಬೇಕಾಗಿದ್ದಾರೆ**
M.Sc./M.Sc.,Nursing
ವಿದ್ಯಾರ್ಹತೆ ಹೊಂದಿರುವವರು ಅತಿಥಿ ಉಪನ್ಯಾಸಕರ ಹುದ್ದೆಗೆ ಬೇಕಾಗಿದ್ದಾರೆ.
Lumbini Institute of Paramedical Science College
Opp. Latha Nursing Home, P.J. Extn. Davangere.
93803 22328, 63604 91454

**Quess Corp Limited**
ಕ್ವೆಸ್ ಕಾರ್ಪ್ ಲಿಮಿಟೆಡ್‌ನವರು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಆಧಾರಿತ ಕೋರ್ಸ್ ಮತ್ತು ಉದ್ಯೋಗ ಅವಕಾಶಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸಂಪರ್ಕಿಸಿ:
90667 66580
ವಿನಯ್

**WANTED**
Male
Office Assistant
Andanur Chits ®
Ram & Co circle,Davangere

**ಕೆಲಸಕ್ಕೆ ಬೇಕಾಗಿದ್ದಾರೆ**
ಆರ್ಡರ್ ಬಾಯ್, ರಿಸಪ್ಷನಿಸ್ಟ್, ಮನೆ ಕೆಲಸಕ್ಕೆ (ಹೌಸ್ ಕೀಪಿಂಗ್), ಹೋಮ್ ನರ್ಸಿಂಗ್ (ESI + PF ಊಟ, ವಸತಿ ಸೂಕ್ತ ಸಂಬಳ ಇರುತ್ತದೆ) ಯುವಕ, ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
88925 32607

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ನಿರ್ವಹಿಸಲು ಅನುಭವಿ ಅಡುಗೆ ಭಟ್ಟರು ಹಾಗೂ ಕೆಲಸದವರು ಬೇಕಾಗಿದ್ದಾರೆ. ಸಂಪರ್ಕಿಸಿ :
63614 36969
ವಿಳಾಸ : ಗೋಲ್ಡನ್ ಪ್ಲೇಟ್ಸ್ ರೆಸ್ಟೋರೆಂಟ್, ಹರಿಹರ-ಶಿವಮೊಗ್ಗ ಕ್ರಾಸ್ (ಹನಗವಾಡಿ) ಹರಿಹರ.

**ಸೈಟ್ ಮಾರಾಟಕ್ಕಿದೆ**
ಎಸ್.ಎಸ್.ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್‌ನಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದ ಸೈಟ್ ಸುಮಾರು 3404 ಚ.ಅಡಿ. ಮಾರಾಟಕ್ಕಿದೆ.
81399 88555
81973 00410

**ಸೈಟ್ ಮಾರಾಟಕ್ಕಿದೆ**
ತುಂಗಭದ್ರಾ ಬಡಾವಣೆ 100 ಅಡಿ ರಸ್ತೆಯಲ್ಲಿರುವ ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಮಧ್ಯವರ್ತಿಗಳಿಗೆ ಅವಕಾಶ ಇರುವುದಿಲ್ಲ.
98457 13223

**100% Result**
ನಿಮ್ಮ ಮಗು SSLC/PUC ಅಭ್ಯಾಸ ಮಾಡುತ್ತಿದ್ದು Mathematics /Physics ಅರ್ಥವಾಗುತ್ತಿಲ್ಲವೇ? ಹಾಗಿದ್ದರೆ ನಮ್ಮನ್ನು ಸಂಪರ್ಕಿಸಿ ನಾವು ನಿಮ್ಮ ಮನೆಗೇ ಬಂದು ಅರ್ಥವಾಗುವ ತರಹ ಸರಳವಾಗಿ ಹೇಳಿ ಕೊಟ್ಟು 100% ಫಲಿತಾಂಶವನ್ನು ಕೊಡಿಸುತ್ತೇವೆ
76761 28466

**ZENVO**
UPS/ Battery/ Solar PCU
Easy EMI Facility avalable
City Electronic Systems
# 212/14, 3rd main Road, P.J Extn Davanagere.
98453 52371, 96865 77677

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481-59303, 80509 52637

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಕನಿಷ್ಠ SSLC ಪಾಸ್ ಆದವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
K.B.R. ಇಂಡಸ್ಟ್ರೀಸ್
K.B.R. ಕಾಂಪ್ಲೆಕ್ಸ್, 109 ಟಿ.ಸಿ.ಲೇಔಟ್ RMC ಲಿಂಕ್ ರೋಡ್, ದಾವಣಗೆರೆ.
94484 42694
63621 47549

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ANM ಮತ್ತು GNM ಆದವರು ಈ ಕೆಳಗಿನ ಮೊಬೈಲ್ ನಂಬರ್, ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ :
98450 35710
94805 42277
08192 25931

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838

**Be Your Own Boss**
ಕೇವಲ 20 ರಿಂದ 30 ಸಾವಿರ ಬಂಡವಾಳ ಹೂಡಿಕೆಯಿಂದ ನಿಮ್ಮದೇ ಸ್ವಂತ ಬಿಸಿನೆಸ್ ಪ್ರಾರಂಭಿಸಿ. ಆಸಕ್ತರು ಸಂಪರ್ಕಿಸಿ:
ಅಜಯ್ : 99451 26809

**PG ಬಿಲ್ಡಿಂಗ್ ಬಾಡಿಗೆಗೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್, ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484-42694
99725-35329

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಭೂಮಿಕಾ ಮ್ಯಾಟ್ರಿಮನಿ**
ಲಿಂಗಾಯತ ವಧು-ವರರ ಕೇಂದ್ರ,
H.O: Vidya Nagara, 1st Bus Stop, Davangere.
B.O: BIET College Road, Near Hemavati Hostel
7760316576, 9008055813

**Avoid Mosquitoes**
Mosquito Net for door and windows
Sri Gowri Enterprises
# 7C2, 4th cross, Near D.C. Office, Karur Industrial Area, P.B. Road Davanagere.
72049 94628

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**WANTED**
We need computer female faculty (Any degree with 1 year computer course)
Attractive Salary
Call: 95910 78215

**ಕೆಲಸಗಾರರು ಬೇಕಾಗಿದ್ದಾರೆ**
ಪ್ರಸ್ತುತ ಸಾರಿಗೆ ಸಂಸ್ಥೆಯೊಂದರಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ ಮಹಿಳೆಯರಿಗೆ ಆದ್ಯತೆ)
ಸಂಪರ್ಕಿಸಿ: 94824 76109
91642 22937

**ಹೋಂ ನರ್ಸ್**
ಯಾವುದೇ ರೀತಿಯ ರೋಗಿಗಳನ್ನು ನಮ್ಮ ಮನೆಗೆ ಬಂದು ಆರೈಕೆ ಮಾಡಲು ನಮ್ಮಲ್ಲಿ ಹೋಂ ನರ್ಸ್ ಲಭ್ಯವಿದ್ದಾರೆ.
81230 41446
ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.

# ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ



**ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ.ಸುರೇಶ್**

ದಾವಣಗೆರೆ, ನ.24- ಬೆಂಗಳೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ ಉಪಾಧ್ಯಕ್ಷರಾಗಿ ಆಯ್ಕೆಗೊಂಡಿರುವ ನಗರದ ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್ ಅವರನ್ನು ಸರಸ್ವತಿ ನಗರದ ಶ್ರೀ ವಿಜಯ ವಿನಾಯಕ ಯುವಕ ನಾಗರಿಕ ವೇದಿಕೆ ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕೆ.ಎಂ. ಸುರೇಶ್, 'ಸ್ವಂತಕ್ಕೆ ಸ್ವಲ್ಪ - ಸಮಾಜಕ್ಕೆ ಸರ್ವಸ್ವ' ಎನ್ನುವ ತತ್ವದಲ್ಲಿ ನಂಬಿಕೆಯಿಟ್ಟು ಶಿಕ್ಷಣ ಕ್ಷೇತ್ರದ ಮೂಲಕ ಸಮಾಜ ಸೇವೆ ಮಾಡುವ ಮಹತ್ವಾಕಾಂಕ್ಷೆಯನ್ನು ತಾವು ಹೊಂದಿರುವುದಾಗಿ ಹೇಳಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಸದುಪಯೋಗಗೊಳಿಸಿಕೊಂಡು ಸಮಾಜಮುಖಿಯಾಗಿ ಕೆಲಸ ಮಾಡುವುದಾಗಿ ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ವಿಜಯ ವಿನಾಯಕ ಯುವಕ ನಾಗರಿಕ ವೇದಿಕೆಯ ಅಧ್ಯಕ್ಷ ಎಸ್.ಟಿ.ಸೋಮಶೇಖರ್ ಮಾತನಾಡಿ, ದಾವಣಗೆರೆ ಜಿಲ್ಲೆಯಲ್ಲಿ ಪಠ್ಯ ಶಿಕ್ಷಣ, ಸಂಸ್ಕೃತಿ, ಸಂಸ್ಕಾರ, ಕ್ರೀಡೆ, ಕಲೆ ಹೀಗೆ ಹತ್ತು ಹಲವು ವಿಭಾಗಗಳಲ್ಲಿ ವಿದ್ಯಾರ್ಥಿಗಳನ್ನು ತಮ್ಮ ಸೋಮೇಶ್ವರ ವಿದ್ಯಾ ಸಂಸ್ಥೆಯಲ್ಲಿ ತರಬೇತಿಗೊಳಿಸುವ ಮೂಲಕ ಕೆ.ಎಂ.ಸುರೇಶ್ ಅವರು ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಹೊಸತನ್ನು ತರಬೇಕೆನ್ನುವ ಕನಸುಗಳನ್ನು ಹೊಂದಿರುವ ಕನಸುಗಾರ ಸುರೇಶ್ ಅವರಲ್ಲಿರುವ ವಿಶೇಷವಾದ ಶಕ್ತಿಯನ್ನು ಗುರುತಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾ ಸಂಸ್ಥೆಯವರು ತಮ್ಮ ಆಡಳಿತ ಮಂಡಳಿಯಲ್ಲಿ ಉಪಾಧ್ಯಕ್ಷ ಸ್ಥಾನ ನೀಡಿರುವುದು ಶ್ಲ್ಯಾಘನೀಯ ಎಂದರು.

ಸಮಾರಂಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಕೆ.ಎಂ.ವೀರೇಶ್, ವಿಜಯ ವಿನಾಯಕ ಯುವಕ ನಾಗರಿಕ ವೇದಿಕೆಯ ಪದಾಧಿಕಾರಿಗಳಾದ ಕೆ.ರಾಘವೇಂದ್ರ ನಾಯರಿ, ಎಸ್.ಹೆಚ್. ಚಂದ್ರ ನಾಯ್ಕ್, ಕ್ಯಾಸ್ಯಾ ನಾಯಕ, ಶಾಂತಪ್ಪ ಪೂಜಾರಿ, ಪ್ರೊ. ಎಂ.ಬಿ.ರೇವಣಸಿದ್ದಪ್ಪ, ತಿಪ್ಪೇಸ್ವಾಮಿ ಪವಾಡಪ್ಪ, ಪ್ರೊ. ಗಂಗಾಧರಯ್ಯ ಹಿರೇಮಠ, ನಾಗರಾಜ ಮಾಸ್ತರ್, ಕಾಡಜ್ಜಿ ವೀರಪ್ಪ, ಬಿ.ಎಂ.ಗದಿಗೇಶ್, ಪ್ರಸಾದ ಬಂಗೇರ, ಶಾಮ್ ನಾಯ್ಕ್, ಹೆಚ್. ಪಾಲಾಕ್ಷಪ್ಪ, ಟಿ.ಬಿ.ರಮೇಶ್, ಬಿ.ಶಿವಪುತ್ರಪ್ಪ, ಹೇಮಾ ಪೂಜಾರಿ, ಕಮಲಾ ಸೋಮಶೇಖರ್, ನಾಗೇಶ್ವರಿ ನಾಯರಿ, ಮಂಜುಳಾ ವೆಂಕಟೇಶ್, ಲಾಲ್ ಸಿಂಗ್ ನಾಯ್ಕ್, ವಿ. ಸಿದ್ದೇಶ್, ಎಸ್.ಸೋಮಶೇಖರ್, ಸಚಿನ್, ನಾಗೇಂದ್ರಪ್ಪ ಮತ್ತಿತರರು ಹಾಜರಿದ್ದರು.

# ಮುಷ್ಕರಕ್ಕೆ ವಿದ್ಯಾರ್ಥಿಗಳ ಪರ ಎಐಡಿಎಸ್‌ಓ ಬೆಂಬಲ




ದಾವಣಗೆರೆ, ನ.24- ನಾಡಿದ್ದು ದಿನಾಂಕ 26 ರಂದು ದೇಶದ ಕಾರ್ಮಿಕ ಹಾಗೂ ರೈತ ಸಂಘಟನೆಗಳು ಕರೆ ನೀಡಿರುವ ಅಖಿಲ ಭಾರತ ಮುಷ್ಕರದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಪರ ಬೆಂಬಲವಾಗಿ ನಗರದಲ್ಲಿಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ (ಎಐಡಿಎಸ್‌ಓ) ವತಿಯಿಂದ ನಗರದ ರೈಲ್ವೆ ನಿಲ್ದಾಣ ಹಾಗೂ ಎಪಿಎಂಸಿ ಮಾರ್ಕೆಟ್ ಮುಂದೆ ಇಂದು ಬೀದಿ ಬದಿ ಬಹಿರಂಗ ಸಭೆ ನಡೆಸಲಾಯಿತು.

ಆ ಮುಖೇನ ವಿದ್ಯಾರ್ಥಿ ವಿರೋಧಿ, ಕಾರ್ಪೊರೇಟ್-ಪರ ಹೊಸ ಶಿಕ್ಷಣ ನೀತಿ-2020 ತಿರಸ್ಕರಿಸಲಾಯಿತು.

ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷರಾದ ನಾಗಜ್ಯೋತಿ ಮಾತನಾಡಿ, ಅನೇಕ ಶಿಕ್ಷಣ ತಜ್ಞರು, ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳ ವಿರೋಧದ ನಡುವೆಯೇ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಶಿಕ್ಷಣದಿಂದ ಈಗಾಗಲೇ ವಂಚಿತರಾಗಿರುವ ದೇಶದ ಅಸಂಖ್ಯಾತ ಬಡ ಮಕ್ಕಳು ಈ ನೀತಿಯಿಂದಾಗಿ ಶಿಕ್ಷಣದಿಂದ ಮತ್ತಷ್ಟು ದೂರ ತಳ್ಳಲ್ಪಡುತ್ತಾರೆ. ಸರ್ಕಾರವು ಈ ನೀತಿಯ ಮೂಲಕ ದೊಡ್ಡ ಉದ್ಯಮಪತಿಗಳಿಗೆ, ಕಾರ್ಪೊರೇಟ್ ಮನೆತನಗಳಿಗೆ ಶಿಕ್ಷಣದಲ್ಲಿ ಬಂಡವಾಳ ಹೂಡಿ ಮತ್ತಷ್ಟು ಲಾಭ ಮಾಡಿಕೊಳ್ಳಲು ಅನುವು ಮಾಡಿಕೊಡಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಕಾರ್ಪೊರೇಟ್ ಪರ, ಜನ ವಿರೋಧಿ ಹೊಸ ಶಿಕ್ಷಣ ನೀತಿ ವಿರೋಧಿಸಿ ಎಐಡಿಎಸ್‌ಓ ಸಂಘಟಿಸಿದ್ದ ಸಹಿ ಸಂಗ್ರಹದಲ್ಲಿ ಇಡೀ ದೇಶದಾದ್ಯಂತ ಲಕ್ಷಾಂತರ ಸಹಿಗಳು ಸಂಗ್ರಹವಾಗಿವೆ. ದೇಶದ ಅನೇಕ ಶಿಕ್ಷಣ ತಜ್ಞರು, ಶಿಕ್ಷಕರು, ವಿದ್ಯಾರ್ಥಿಗಳು ತಮ್ಮ ಸಹಿ ನೀಡುವುದರ ಮೂಲಕ ಹೊಸ ಶಿಕ್ಷಣ ನೀತಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಮುಷ್ಕರಕ್ಕೆ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ಬೆಂಬಲ ವ್ಯಕ್ತಪಡಿಸುತ್ತದೆ ಎಂದರು.

ಸಭೆಯಲ್ಲಿ ಜಿಲ್ಲಾ ಉಪಾಧ್ಯಕ್ಷೆ ನಾಗಜ್ಯೋತಿ ಮತ್ತು ಕಿರಣ್, ಜಂಟಿ ಕಾರ್ಯದರ್ಶಿ ಕಾವ್ಯ, ಸಂಘಟನಾಕಾರರಾದ ಪುಷ್ಪ ಮತ್ತು ಸುಮನ್ ಇದ್ದರು.

# ವಿಶೇಷ ಪರೀಕ್ಷೆಗೆ ಅವಕಾಶ ಒದಗಿಸಲು ದಾವಣಗೆರೆ ವಿ.ವಿ. ನಿರ್ಧಾರ

ದಾವಣಗೆರೆ, ನ.24 - ಕೋವಿಡ್-19 ಸೋಂಕಿನ ಕಾರಣಕ್ಕಾಗಿ ಕಳೆದ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆದ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಅಂತಿಮ ವರ್ಷದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಶೀಘ್ರದಲ್ಲಿ ಪರೀಕ್ಷೆ ನಡೆಸಲಾಗುವುದು ಎಂದು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎಚ್.ಎಸ್. ಅನಿತಾ ತಿಳಿಸಿದ್ದಾರೆ.



ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಯುಜಿಸಿ ಮಾರ್ಗಸೂಚಿಯಂತೆ ಪರೀಕ್ಷೆಗಳನ್ನು ನಡೆಸಲಾಗಿತ್ತು. ಆದರೆ ಕೋವಿಡ್-19ರ ಕಾರಣಕ್ಕಾಗಿ ಕೆಲವು ವಿದ್ಯಾರ್ಥಿಗಳು ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಅವರ ಶೈಕ್ಷಣಿಕ ಭವಿಷ್ಯದ ಉದ್ದೇಶದಿಂದ ಮತ್ತು ಯಾವುದೇ ವಿದ್ಯಾರ್ಥಿಗೂ ಅನ್ಯಾಯ ಆಗಬಾರದು ಎಂಬ ಉದ್ದೇಶದಿಂದ ಗೈರು ಹಾಜರಾದ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿಶೇಷ ಪರೀಕ್ಷೆ ನಡೆಸಲಾಗುವುದು ಎಂದು ಹೇಳಿದ್ದಾರೆ.

ಈಗಾಗಲೇ ಪರೀಕ್ಷೆಗೆ ಸಿದ್ಧತೆ ನಡೆಯುತ್ತಿದೆ. ಗೈರು ಹಾಜರಾದ ವಿದ್ಯಾರ್ಥಿಗಳ ಅಧ್ಯಯನ ವಿಭಾಗ ಹಾಗೂ ಇನ್ನಿತರೆ ಮಾಹಿತಿ ಪಡೆದು ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಆದಷ್ಟು ಶೀಘ್ರ ಪರೀಕ್ಷೆ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಕಾಲೇಜುಗಳಿಗೆ ಸೂಚನೆ ನೀಡಲಾಗುವುದು ಎಂದಿದ್ದಾರೆ.

ಇತ್ತೀಚೆಗೆ ನಡೆದ ಅಂತಿಮ ವರ್ಷದ ಸ್ನಾತಕ ಪದವಿ ಪರೀಕ್ಷೆಗೆ ಹೆಸರು ನೋಂದಣಿ ಮಾಡಿಕೊಂಡಿದ್ದ ಸುಮಾರು 20 ಸಾವಿರ ವಿದ್ಯಾರ್ಥಿಗಳ ಪೈಕಿ 653 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಸ್ನಾತಕೋತ್ತರ ಪದವಿ ಪರೀಕ್ಷೆಗೆ 1500 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿ ಕೊಂಡಿದ್ದು, 40 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಅವರೆಲ್ಲರಿಗೂ ಪರೀಕ್ಷೆಗೆ ಅವಕಾಶ ಒದಗಿಸಲು ವಿಶ್ವವಿದ್ಯಾನಿಲಯ ನಿರ್ಧರಿಸಿದೆ ಎಂದು ಹೇಳಿದ್ದಾರೆ.

**ಕೊನೆಯ ವಿದ್ಯಾರ್ಥಿಗೂ ಅನ್ಯಾಯ ಆಗಬಾರದು** : ಇಡೀ ಜಗತ್ತನ್ನು ಆವರಿಸಿಕೊಂಡಿರುವ ಕೋವಿಡ್-19 ಜನಜೀವನವನ್ನು ತಲ್ಲಣಗೊಳಿಸಿದೆ. ಈ ವೈರಾಣು ವಿದ್ಯಾರ್ಥಿಗಳಲ್ಲಿ, ಪಾಲಕರಲ್ಲಿ ಆತಂಕ ಮೂಡಿಸಿದ್ದು ಸಹಜ. ಆದರೆ ಈ ಕಾರಣಕ್ಕಾಗಿಯೇ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ಕಟ್ಟ ಕಡೆಯ ವಿದ್ಯಾರ್ಥಿಗೂ ಶೈಕ್ಷಣಿಕವಾಗಿ ಅನ್ಯಾಯ ಆಗಬಾರದು. ದಾವಣಗೆರೆ ವಿಶ್ವವಿದ್ಯಾನಿಲಯ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲು ಅವಕಾಶ ನೀಡುವುದಿಲ್ಲ. ಅವರ ಭವಿಷ್ಯಕ್ಕೆ ಪೂರಕ ವಾತಾವರಣ ನಿರ್ಮಿಸಲಾಗುವುದು. ಈ ಹಿನ್ನೆಲೆಯಲ್ಲಿ ವಿಶೇಷ ಪರೀಕ್ಷೆ ನಡೆಸಲು ಮುಂದಾಗಿದೆ. ಈ ಕುರಿತು ಸರ್ಕಾರಕ್ಕೂ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವದ ಗೌರವ






ದಾವಣಗೆರೆ,ನ.24- ಜಿಲ್ಲಾಡಳಿತದಿಂದ ಆಚರಿಸಲ್ಪಡುವ ಕರ್ನಾಟಕ ರಾಜ್ಯೋತ್ಸವದ ಸಂದ ರ್ಭದಲ್ಲಿ ನಾಡು - ನುಡಿಗಾಗಿ ಸೇವೆ ಸಲ್ಲಿಸುತ್ತಿರುವ ವಿವಿಧ ಕ್ಷೇತ್ರಗಳ ಮಹನೀಯರನ್ನು ಸನ್ಮಾನಿಸಿ, ಗೌರವಿಸುವ ನಿಟ್ಟಿನಲ್ಲಿ ಈ ಬಾರಿಯ ಗೌರವಕ್ಕೆ 34 ಜನರನ್ನು ಜಿಲ್ಲಾಡಳಿತದ ಆಯ್ಕೆ ಮಾಡಿದೆ.

ನಾಳೆ ದಿನಾಂಕ 25ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ತುಂಗ ಭದ್ರಾ ಸಭಾಂಗಣದಲ್ಲಿ ಏರ್ಪಾಡಾಗಿರುವ ಕಾರ್ಯಕ್ರಮ ದಲ್ಲಿ ಎಲ್ಲಾ 34 ಸಾಧಕರನ್ನು ಸನ್ಮಾನಿಸಿ, ಗೌರವಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಶಿಕ್ಷಣ ಕ್ಷೇತ್ರದಿಂದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ, ಹಿರಿಯ ರಂಗಭೂಮಿ ಕಲಾವಿದರುಗಳಾದ ಕೆ. ವೀರಯ್ಯ ಸ್ವಾಮಿ, ತಿಪ್ಪೇಶರಾವ್ ಚವ್ಹಾಣ್, ಸಾಮಾಜಿಕ ಸೇವಾ ಕ್ಷೇತ್ರದಿಂದ ರಮಣಲಾಲ್ ಪಿ.ಸಂಘವಿ, ವಾಸುದೇವ ಎಲ್.ರಾಯ್ಕರ್, ಎ.ಆರ್. ಉಜ್ಜನಪ್ಪ, ಸಾಹಿತ್ಯ ಕ್ಷೇತ್ರದಿಂದ ಜಿ.ಹೆಚ್. ರಾಜಶೇಖರ್ ಗುಂಡಗಟ್ಟಿ, ಚನ್ನಗಿರಿ ತಾಲ್ಲೂಕಿನ ಪಾಂಡೋಮಟ್ಟಿಯ ಶ್ರೀಮತಿ ಕೆ.ಜಿ. ಸರೋಜ ನಾಗರಾಜ್, ನೃತ್ಯ ಕ್ಷೇತ್ರದಿಂದ ಶ್ರೀಮತಿ ಡಿ.ಕೆ. ಮಾಧವಿ ಗೋಪಾಲಕೃಷ್ಣ, ಜಾನಪದ ಸಂಗೀತ ಕ್ಷೇತ್ರದಿಂದ ಶ್ರೀಮತಿ ಸಿ.ಕೆ. ರುದ್ರಾಕ್ಷಿ ಬಾಯಿ ಪುಟ್ಟನಾಯ್ಕ ಅವರುಗಳೂ ಸೇರಿದಂತೆ, 34 ಸಾಧಕರು ಗೌರವ ಸ್ವೀಕರಿಸಲಿದ್ದಾರೆ.

# 29 ರಂದು ಜಂಗಮ ಸಮಾಜದ ಸಭೆ

ದಾವಣಗೆರೆ,ನ.24-ಅಖಿಲ ಭಾರತ ಜಂಗಮ ಮಹಾಸಭಾದಿಂದ ಜಂಗಮ ಸಮಾಜ ಬಾಂಧವರ ಸಭೆಯನ್ನು ಇದೇ ದಿನಾಂಕ 29ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ಕರೆಯಲಾಗಿದೆ.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಬೆಂಗಳೂರಿನ ಕೊಳದ ಮಠದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಬಳ್ಳಾರಿಯ ಕಮ್ಮರ ಚೇಡ ಮಠದ ಶ್ರೀ ಕಲ್ಯಾಣ ಸ್ವಾಮೀಜಿ, ತುಮಕೂರಿನ ಕುಪ್ಪೂರು ಗದ್ದಿಗೆ ಸಂಸ್ಥಾನ ಮಠದ ಶ್ರೀ ಯತೀಶ್ವರ ಶಿವಾಚಾರ್ಯ ಸ್ವಾಮೀಜಿ, ಜಗಳೂರು - ಮುಷ್ಟೂರಿನ ಶ್ರೀ ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಈ ಸಭೆಯ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಹಿರಿಯ ವಕೀಲ ಬಿ.ಡಿ. ಹಿರೇಮಠ ಅಧ್ಯಕ್ಷತೆ ವಹಿಸಲಿದ್ದು, ಜಂಗಮ - ಬೇಡ ಜಂಗಮ ಬಾಂಧವರು ಸಭೆಯಲ್ಲಿ ಭಾಗವಹಿಸುವಂತೆ ಮಹಾಸಭಾದ ಪ್ರಕಟಣೆ ಕೋರಿದೆ.

# ಕೊರೊನಾ : ಶೇ.92 ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ನೋಂದಣಿ

ನವದೆಹಲಿ, ನ. 24 - ಕೊರೊನಾ ಲಸಿಕೆ ಲಭ್ಯವಾದ ನಂತರ ಸುಮಾರು ಒಂದು ಕೋಟಿ ಆರೋಗ್ಯ ಕಾರ್ಯಕರ್ತರು ಮೊದಲ ಸುತ್ತಿನಲ್ಲಿ ಲಸಿಕೆ ಪಡೆಯಲಿದ್ದಾರೆ. ಇದಕ್ಕಾಗಿ ಸರ್ಕಾರಿ ಆಸ್ಪತ್ರೆಗಳ ಶೇ.92ರಷ್ಟು ಹಾಗೂ ಖಾಸಗಿ ಆಸ್ಪತ್ರೆಗಳ ಶೇ.55ರಷ್ಟು ಉದ್ಯೋಗಿಗಳನ್ನು ಗುರುತಿಸಲಾಗಿದೆ. ದೇಶದಲ್ಲಿ ಐದು ಲಸಿಕೆಗಳನ್ನು ಮುಂಚೂಣಿ ಹಂತದಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇವುಗಳಲ್ಲಿ ನಾಲ್ಕು ಎರಡನೇ ಹಾಗೂ ಮೂರನೇ ಹಂತದ ಮಾನವ ಪ್ರಯೋಗದ ಹಂತದಲ್ಲಿವೆ. ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು, ನರ್ಸ್‌ಗಳು ಹಾಗೂ ಆಶಾ ಕಾರ್ಯಕರ್ತೆಯರು ಸೇರಿದಂತೆ ಮುಂಚೂಣಿ ಆರೋಗ್ಯ ಕಾರ್ಯಕರ್ತರನ್ನು ಗುರುತಿಸುವಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.

# ಡಾ.ಮಂಜುನಾಥ ಕುರ್ಕಿ ಅವರಿಗೆ 'ಕನ್ನಡ ಸಾಹಿತ್ಯ ರತ್ನ' ಪ್ರಶಸ್ತಿ ಪ್ರದಾನ



ದಾವಣಗೆರೆ,ನ.24- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಅವರು ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕೊಡಮಾಡುವ 'ಕನ್ನಡ ಸಾಹಿತ್ಯ ರತ್ನ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಇಂದು ನಡೆದ ರಾಜ್ಯ ಕಸಾಪ ಕಾರ್ಯಕಾರಿ ಸಮಿತಿ ಸಭೆಯ ಸಂದರ್ಭದಲ್ಲಿ ರಾಜ್ಯ ಕಸಾಪ ಅಧ್ಯಕ್ಷ ಡಾ. ಮನು ಬಳಿಗಾರ ಅವರು ಮಂಜುನಾಥ ಕುರ್ಕಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

# ಎಂ. ಕೋಡಿಹಳ್ಳಿಯಲ್ಲಿ ದೇವಸ್ಥಾನದ ಉದ್ಘಾಟನೆಗೆ ಸಿದ್ಧತೆ

ದಾವಣಗೆರೆ, ನ.24- ತಾಲ್ಲೂಕಿನ ಎಂ. ಕೋಡಿಹಳ್ಳಿ ಗ್ರಾಮದ ಶ್ರೀ ಓಬಳೇಶ್ವರ ಹಾಗೂ ಚಿತ್ರಲಿಂಗೇಶ್ವರ ಸ್ವಾಮಿ ನೂತನ ದೇವಸ್ಥಾನಗಳ ಉದ್ಘಾಟನೆ ಮತ್ತು ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸುವ ನಿಮಿತ್ತ ಇದೇ ದಿನಾಂಕ 30 ರ ಬೆಳಿಗ್ಗೆ 11 ಗಂಟೆಗೆ ನೂತನ ದೇವಸ್ಥಾನಗಳ ಆವರಣದಲ್ಲಿ ಸಭೆ ಕರೆಯಲಾಗಿದೆ.

# 881 ಕೋ.ರೂ.ಇದ್ದರೂ ಸಂತ್ರಸ್ತರಿಗೆ ನೆರವಿಲ್ಲ

**ಕೇಂದ್ರ ಪರಿಸರ ಇಲಾಖೆಗೆ ಹಸಿರು ನ್ಯಾಯಾಧೀಕರಣ ತರಾಟೆ**

ನವದೆಹಲಿ, ನ. 24 – ಅಪಾಯಕಾರಿ ವಸ್ತುಗಳನ್ನು ವಿಲೇವಾರಿ ಮಾಡುವವರು ಅವಘಡಕ್ಕೆ ಸಿಲುಕಿದಾಗ ಅವರಿಗೆ ಪರಿಹಾರ ನೀಡಲು 881 ಕೋಟಿ ರೂ.ಗಳ ಭಾರೀ ಮೊತ್ತವಿದ್ದರೂ ಬಳಸಿಕೊಳ್ಳದ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವನ್ನು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ತರಾಟೆಗೆ ತೆಗೆದುಕೊಂಡಿದೆ.

ಸಾರ್ವಜನಿಕ ಹೊಣೆಗಾರಿಕೆ ವಿಮೆ ಕಾಯ್ದೆಯ ಅನ್ವಯ ನಿಧಿ ರೂಪಿಸಲಾಗಿದೆ. ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯು ಹಣ ನಿರ್ವಹಿಸುತ್ತಿದ್ದು, ಅದರ ಖಾತೆಯಲ್ಲಿ 881 ಕೋಟಿ ರೂ. ಇದೆ. ಆದರೆ, ಈ ಹಣ ಬಳಕೆಯಾದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನ್ಯಾಯಾಧೀಕರಣದ ಅಧ್ಯಕ್ಷ ನ್ಯಾಯಮೂರ್ತಿ ಆದರ್ಶ್ ಕುಮಾರ್ ಗೋಯಲ್ ಹಾಗೂ ನ್ಯಾಯಮೂರ್ತಿ ಎಸ್.ಕೆ.ಸಿಂಗ್ ಅವರನ್ನು ಒಳಗೊಂಡ ಪೀಠ ಆಕ್ಷೇಪಿಸಿದೆ.

ಕಾಯ್ದೆ ಜಾರಿಗೆ ಬಂದು 29 ವರ್ಷಗಳಾಗಿದ್ದು, ಭಾರೀ ಪ್ರಮಾಣದ ಹಣ ಜಮಾ ಮಾಡಿದ್ದರೂ ಸಂತ್ರಸ್ತರಿಗೆ ನೆರವು ನೀಡದಿರುವುದು ನ್ಯಾಯದ ಕಡೆಗಣನೆ ಎಂದು ಪೀಠ ಹೇಳಿದೆ. ಈ ಕಾನೂನಿನಲ್ಲಿ ರುವ ಲೋಪಗಳು ಹಾಗೂ ಜಾರಿಯಲ್ಲಿರುವ ಸಮಸ್ಯೆಗಳನ್ನು ಸರಿಪಡಿಸಬೇಕು. ಇದರ ನೋಡಲ್ ಸಂಸ್ಥೆಯಾಗಿರುವ ಪರಿಸರ ಇಲಾಖೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

# ಮದುವೆಗಾಗಿ ಮತಾಂತರವಾದರೆ ಶಿಕ್ಷಿಸುವ ಸುಗ್ರೀವಾಜ್ಞೆಗೆ ಒಪ್ಪಿಗೆ

**ಬಲವಂತದ ಮತಾಂತರಕ್ಕೆ ಕಠಿಣ ಶಿಕ್ಷೆ**

ಲಖ್ನೌ, ನ. 24 – ಬಲವಂತವಾಗಿ ಇಲ್ಲವೇ ವಂಚನೆಯಿಂದ ಮತಾಂತರ ಮಾಡುವುದಕ್ಕೆ ಕಠಿಣ ಶಿಕ್ಷೆ ವಿಧಿಸುವ ಸುಗ್ರೀವಾಜ್ಞೆಗೆ ಉತ್ತರ ಪ್ರದೇಶ ಸರ್ಕಾರ ಒಪ್ಪಿಗೆ ನೀಡಿದೆ. ಇದರಲ್ಲಿ ಮದುವೆಗಾಗಿ ಮತಾಂತರವೂ ಸಹ ಸೇರಿದೆ. ಪ್ರಸ್ತಾಪಿತ ಕಾಯ್ದೆಯನ್ವಯ ಮದುವೆಯ ಉದ್ದೇಶಕ್ಕಾಗಿಯೇ ಮಹಿಳೆಯನ್ನು ಮತಾಂತರಕ್ಕೆ ಒಳಪಡಿಸಿದರೆ ಮದುವೆಯನ್ನು ಅಸಿಂಧು ಎಂದು ಘೋಷಿಸಲಾಗುವುದು. ನಿಯಮ ಉಲ್ಲಂಘಿಸಿದವರಿಗೆ ಹತ್ತು ವರ್ಷಗಳ ಜೈಲು ಶಿಕ್ಷೆಯನ್ನೂ ವಿಧಿಸಲಾಗುವುದು. ಮದುವೆಯ ನಂತರ ಮತಾಂತರ ಆಗಲು ಬಯಸುವವರು ಜಿಲ್ಲಾಧಿಕಾರಿಗಳ ಬಳಿ ಅರ್ಜಿ ಸಲ್ಲಿಸಬೇಕು ಎಂದು ಪ್ರಸ್ತಾಪಿತ ಕಾಯ್ದೆಯಲ್ಲಿ ತಿಳಿಸಲಾಗಿದೆ.

# ಸೋದರ ಮಾವನೊಂದಿಗಿನ ಅಪ್ರಾಪ್ತೆಯ ಬಾಲ್ಯ ವಿವಾಹಕ್ಕೆ ತಡೆ

ದಾವಣಗೆರೆ, ನ.24- ಸೋದರ ಮಾವನೊಂದಿಗಿನ ಅಪ್ರಾಪ್ತೆಯ ಬಾಲ್ಯ ವಿವಾಹವನ್ನು ತಡೆಯುವಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡ ಯಶಸ್ವಿಯಾಗಿದೆ.

ಹರಿಹರ ನಗರದ ವಾರ್ಡೊಂದರ ವಾಸಿ ಅಪ್ರಾಪ್ತೆಯ ವಿವಾಹವನ್ನು ಆಕೆಯ ತಾಯಿಯ ಸಹೋದರ ಭದ್ರಾವತಿ ತಾಲ್ಲೂಕಿನ ಗ್ರಾಮವೊಂದರ ವಾಸಿ ಜೊತೆಗೆ ಸದ್ಯದರಲ್ಲೇ ಮದುವೆಗೆ ಸಿದ್ಧತೆ ನಡೆದಿದ್ದ ಬಗ್ಗೆ ಮಕ್ಕಳ ಸಹಾಯವಾಣಿಗೆ ದೂರು ಬಂದಿತ್ತು.

ದೂರಿನ ಹಿನ್ನೆಲೆಯಲ್ಲಿ ತಂಡದ ಸಂಯೋಜಕ ಟಿ.ಎಂ. ಕೊಟ್ರೇಶ್ ಅವರು ಹರಿಹರದಲ್ಲಿ ಅಪ್ರಾಪ್ತೆಯ ಜನ್ಮ ದಿನಾಂಕಕ್ಕೆ ಸಂಬಂಧಿಸಿದ ದಾಖಲೆ ಸಂಗ್ರಹಿಸಿ ಪರಿಶೀಲಿಸಿದಾಗ ಬಾಲಕಿಗೆ 16 ವರ್ಷ 6 ತಿಂಗಳಷ್ಟೇ ಆಗಿರುವುದು ಸ್ಪಷ್ಟವಾಗಿದೆ.

ಕಂದಾಯ ನಿರೀಕ್ಷಕ ಎಚ್.ಎನ್. ಆನಂದ್, ಗ್ರಾಮ ಲೆಕ್ಕಾಧಿಕಾರಿ ಎಚ್.ಜಿ. ಹೇಮಂತ ಕುಮಾರ, ನಗರ ಠಾಣೆ ಪೊಲೀಸ್ ಕಾನ್ಸ್‌ಟೇಬಲ್ ಶಿವರಾಜ ಹಾಗೂ ಮಕ್ಕಳ ಸಹಾಯವಾಣಿ ಕ್ಷೇತ್ರ ಕಾರ್ಯಕರ್ತರಾದ ಬಿ. ಸ್ವಾಮಿ, ಕೆ. ನಾಗರಾಜ ಜೊತೆಗೆ ಬಾಲಕಿಯ ಮನೆಗೆ ತೆರಳಿ ಪಾಲಕರಿಗೆ ವಿಚಾರಿಸಲಾಗಿದೆ.


ಅಪ್ರಾಪ್ತೆಯ ಅಜ್ಜನ ಅನಾರೋಗ್ಯದ ಕಾರಣ ನೀಡಿ ಮದುವೆ ಮಾಡುತ್ತಿರುವುದಾಗಿ ಬಾಲಕಿಯ ಪಾಲಕರು ಹೇಳಿದ್ದಾರೆ. ಬಾಲ್ಯ ವಿವಾಹ ಮಾಡಿದರೆ 1 ಲಕ್ಷ ರೂ. ದಂಡ, 1 ವರ್ಷಕ್ಕಿಂತ ಕಡಿಮೆ ಇಲ್ಲದಂತೆ 2 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಶಿಕ್ಷೆಯಾಗಲಿದೆ ಎಂಬ ಬಗ್ಗೆ ಪಾಲಕರಿಗೆ ಎಚ್ಚರಿಸಿ, ಕಾನೂನು ತಿಳುವಳಿಕೆ ಮೂಡಿಸಲಾಯಿತು. ಅಧಿಕಾರಿಗಳ ಸಮ್ಮುಖದಲ್ಲಿ ಬಾಲಕಿಯ ತಂದೆ, ತಾಯಿಗಳಿಂದ ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪಡೆಯಲಾಗಿದೆ.







# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 21-11-2020ರ ಶನಿವಾರ ಬೆಳಗ್ಗೆ 6-40ಕ್ಕೆ ನಿಧನರಾದ
ಪಾಟೀಲ್ ಪೇಂಟ್ಸ್ & ಸರ್ವೀಸ್ ಸ್ಟೇಷನ್
ಮತ್ತು ನ್ಯೂ ಶ್ರೀ ಸಪ್ತಗಿರಿ ವ್ಹೀಲ್ ಅಲೈನ್‌ಮೆಂಟ್
& ಟೈರ್ಸ್ ಮಾಲೀಕರು, ಆತ್ಮೀಯರು ಆಗಿದ್ದ

## ಶ್ರೀ ನಾಗೇಶ್ ಪಾಟೀಲ್

### (ಎನ್.ಎನ್.ಪಾಟೀಲ್)

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ,
ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಅವರ
ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- ಕೆ.ಆರ್. ಶ್ರೀನಿವಾಸ್‌ಮೂರ್ತಿ (ಶಿವಣ್ಣ), ಜಮೀನ್ದಾರರು
- ಕೆ.ಎಸ್. ಚನ್ನವೀರಪ್ಪ, ಶಿಲ್ಪ ಮೋಟಾರ್ ಸೈಕಲ್ ಗ್ಯಾರೇಜ್
- ಎನ್. ನಾರಾಯಣರಾವ್, ವಿನಾಯಕ ಕಾರ್ ಗ್ಯಾರೇಜ್
- ನಾಗರಾಜ್ ಬಡದಾಳ್, ಕನ್ನಡಪ್ರಭ
- ಎ. ನಾಗರಾಜ್, ಮಹಾನಗರ ಪಾಲಿಕೆ ಸದಸ್ಯರು
- ಕೊಟ್ರೇಶ್, ಆಟೋಮೊಬೈಲ್
- ಸಂತೋಷ್, ಎಸ್.ವಿ. ಟೂರ್ಸ್ ಅಂಡ್ ಟ್ರಾವೆಲ್ಸ್
- ಹಾಲೇಶ್, ದೀಪ್ತಿ ಪ್ರಿಂಟರ್ಸ್
- ರಾಜು, ಹೋಟೆಲ್
- ಪ್ರಕಾಶ್, ಪೋಲಿಸ್ ಇಲಾಖೆ
- ಬಿ.ವಿ. ಬಸವರಾಜ್, ಅಡುಗೆ ಕಂಟ್ರಾಕ್ಟರ್
- ಎ.ಎಸ್. ಗಣೇಶ್, ಫೋಟೋ ಸ್ಟುಡಿಯೋ
- ರಾಜಣ್ಣ, ರಾಜು ಪ್ರಿಂಟರ್ಸ್
- ಧನಂಜಯ ಎಂ., (ಬದ್ರಿ), ಅಚೀವರ್ ಟೂರಿಸ್ಟ್
- ರಘು, ಗಿರೀಶ್, ಕಿರಣ್, ಫಯಾಜ್, ಮಹೇಶ್ (ಮಾಯಾ), ದಾದಾಪೀರ್, ಜಾವೀದ್, ಇಬ್ರಾಹಿಂ, ಮಂಜು, ಅಸ್ಲಂ.
- ವಿ. ಪ್ರಕಾಶ್, ಗುಡ್ಡಿ ಬೀಡಾ ಸ್ಟಾಲ್
- ಎ.ಹೆಚ್. ಶಶಿಕಿರಣ್,ಅಧ್ಯಕ್ಷರು, ಸೈನ್ಸ್ ಅಕಾಡೆಮಿ ಪಿ.ಯು.ಕಾಲೇಜ್
- ಕೆ.ಎನ್. ಓಂಕಾರಪ್ಪ, ಉಪಾಧ್ಯಕ್ಷರು, ಮುರುಘರಾಜೇಂದ್ರ ಬ್ಯಾಂಕ್
- ಗಿರೀಶ್ ಬಿ.ಎಂ. ರಿಯಲ್ ಎಸ್ಟೇಟ್
- ಟಿಂಕರ್ ಮಂಜಣ್ಣ
- ಬಿ. ಕೊಟ್ರೇಶ್, ಗ್ಯಾಸ್
- ಚಂದ್ರಣ್ಣ, ಬೀಡಾ ಸ್ಟಾಲ್
- ಬಾಬಣ್ಣ, ಆದರ್ಶ ಟೈಲರ್
- ಪ್ರಕಾಶ್, ಎ.ಎಸ್.ಐ.
- ಅಣಜಿ ನಾಗರಾಜ್, ಅಡುಗೆ ಕಂಟ್ರಾಕ್ಟರ್
- ಎಂ. ಶಿವರಾಜ್, ವೀರಭದ್ರೇಶ್ವರ ಶ್ಯಾಮಿಯಾನ
- ರವಿಯಪ್ಪ, ನಿವೃತ್ತ ಎ.ಎಸ್.ಐ.
- ನಾರಾಯಣಸ್ವಾಮಿ, ಸೋನಾ ಮೊಬೈಲ್ಸ್
- ಮೋಹನ್, ನವರಂಗ್ ಫ್ಲೆಕ್ಸ್ ಅಂಡ್ ಡಿಜಿಟಲ್, ನವರಂಗ್ ಸರ್ವೀಸ್ ಸ್ಟೇಷನ್, ನವರಂಗ್ ಮುದ್ರಣ
- ಎಸ್.ಟಿ. ವೀರೇಶ್, ಮಹಾನಗರ ಪಾಲಿಕೆ ಸದಸ್ಯರು
- ಜಗದೀಶ್, ಗೋಪಿ, ಮೋಟಾರ್ ಸೈಕಲ್ ಗ್ಯಾರೇಜ್
- ಮೋಹನ್, ಹಿಮ್ಮತ್, ಮಾರುತಿ ಟಿಂಬರ್ಸ್
- ಕೆ.ಜಿ. ಯಲ್ಲಪ್ಪ, ರಾಯಲ್ ಟೈಲರ್
- ಮಜೀದ್ ಖಾನ್, ಖಾರ ಫ್ಯಾಕ್ಟರಿ
- ಕೊಟ್ರೇಶ್, ✦ ಮುಖೇಶ್ ಬಿ.
- ರಾಕೇಶ್, ಅಲಗೂರ್ ಪೇಂಟ್ಸ್
- ಶೇಖರ್, ಹೋಟೆಲ್,
- ಪ್ರಕಾಶ್, ಟ್ರಾಫಿಕ್ ಪೋಲಿಸ್
- ಟಿ.ಎಂ. ವೀರಯ್ಯ
- ದೇವರಾಜ್, ಟೀ ಸ್ಟಾಲ್
- ಶಫಿ, ಪೇಂಟರ್
- ಹಾಲೇಶ್, ಹನುಮಂತ(ಬಾತಿ), ರೇಡಿಯಂ ಕಟಿಂಗ್


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte